# ಕೈಗಾರಿಕಾ ವಿವಾದಗಳ ಅಧಿನಿಯಮ

**[27.8.2003 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 27ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 52 ರಿಂದ 90 ರವರೆಗಿನ ಪುಟಗಳಲ್ಲಿ ಪ್ರಕಟಿತ]**

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**

**ಅಧ್ಯಾಯ-1**

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

**ಅಧ್ಯಾಯ - II**

**ಈ ಅಧಿನಿಯಮದ ಮೇರೆಗಿನ ಪ್ರಾಧಿಕಾರಗಳು**

3. ಕಾರ್ಯಸಮಿತಿ
4. ಸಂಧಾನಾಧಿಕಾರಿಗಳು
5. ಸಂಧಾನ ಮಂಡಲಿಗಳು
6. ವಿಚಾರಣಾ ನ್ಯಾಯಾಲಯಗಳು
7. ಕಾರ್ಮಿಕ ನ್ಯಾಯಾಲಯಗಳು

7ಎ. ನ್ಯಾಯಾಧಿಕರಣಗಳು

7ಬಿ. ರಾಷ್ಟ್ರೀಯ ನ್ಯಾಯಾಧಿಕರಣಗಳು

7ಸಿ. ಕಾರ್ಮಿಕ ನ್ಯಾಯಾಲಯಗಳು, ನ್ಯಾಯಾಧಿಕರಣಗಳು ಮತ್ತು ರಾಷ್ಟ್ರೀಯ ನ್ಯಾಯಾಧಿಕರಣಗಳ ಅಧ್ಯಕ್ಷಾಧಿಕಾರಿಗಳ ಅನರ್ಹತೆಗಳು

8. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು
9. ಮಂಡಲಿ, ಇತ್ಯಾದಿಗಳನ್ನು ರಚಿಸುವ ಆದೇಶಗಳ ಅಂತಿಮತೆ

**ಅಧ್ಯಾಯ - II ಎ**

**ಬದಲಾವಣೆ ನೋಟೀಸು**

9ಎ. ಬದಲಾವಣೆ ನೋಟೀಸು

9ಬಿ. ವಿನಾಯಿತಿ ನೀಡಲು ಸರ್ಕಾರದ ಅಧಿಕಾರ

**ಅಧ್ಯಾಯ - III**

**ಮಂಡಲಿಗಳು, ನ್ಯಾಯಾಲಯಗಳು ಅಥವಾ ನ್ಯಾಯಾಧಿಕರಣಗಳಿಗೆ ವಿವಾದಗಳ ಉಲ್ಲೇಖ**

10. ಮಂಡಲಿಗಳು, ನ್ಯಾಯಾಲಯಗಳು ಅಥವಾ ನ್ಯಾಯಾಧಿಕರಣಗಳಿಗೆ ವಿವಾದಗಳ ಉಲ್ಲೇಖ

10ಎ. ವಿವಾದಗಳನ್ನು ಸ್ವಯಿಚ್ಛೆಯಿಂದ ಮಧ್ಯಸ್ಥಿಕೆಗೆ ಉಲ್ಲೇಖಿಸುವುದು

## ಅಧ್ಯಾಯ - IV

## ಪ್ರಾಧಿಕಾರಗಳ ಪ್ರಕ್ರಿಯೆ, ಅಧಿಕಾರಗಳು ಮತ್ತು ಕರ್ತವ್ಯಗಳು

11. ಸಂಧಾನಾಧಿಕಾರಿಗಳು, ಮಂಡಲಿಗಳು, ನ್ಯಾಯಾಲಯಗಳು ಮತ್ತು ನ್ಯಾಯಾಧಿಕರಣಗಳ ಪ್ರಕ್ರಿಯೆ ಮತ್ತು ಅಧಿಕಾರಗಳು

11ಎ. ಕೆಲಸಗಾರನನ್ನು ಕೆಲಸದಿಂದ ಬಿಡುಗಡೆ ಮಾಡುವ ಅಥವಾ ವಜಾ ಮಾಡುವ ಸಂದರ್ಭದಲ್ಲಿ ಸಮುಚಿತ ಪರಿಹಾರವನ್ನು ಕೊಡುವ ಬಗ್ಗೆ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಮತ್ತು ರಾಷ್ಟ್ರೀಯ ನ್ಯಾಯಾಧಿಕರಣಗಳ ಅಧಿಕಾರಗಳು

12. ಸಂಧಾನಾಧಿಕಾರಿಗಳ ಕರ್ತವ್ಯಗಳು

13. ಮಂಡಲಿಯ ಕರ್ತವ್ಯಗಳು

14. ನ್ಯಾಯಾಲಯಗಳ ಕರ್ತವ್ಯಗಳು

15. ಕಾರ್ಮಿಕ ನ್ಯಾಯಾಲಯಗಳು, ನ್ಯಾಯಾಧಿಕರಣಗಳು ಮತ್ತು ರಾಷ್ಟ್ರೀಯ ನ್ಯಾಯಾಧಿಕರಣದ ಕರ್ತವ್ಯಗಳು

16. ವರದಿ ಅಥವಾ ಐತೀರ್ಪಿನ ನಮೂನೆ

17. ವರದಿಗಳು ಮತ್ತು ಐತೀರ್ಪುಗಳ ಪ್ರಕಟಣೆ

17ಎ. ಐತೀರ್ಪಿನ ಪ್ರಾರಂಭ

17ಬಿ. ಮೇಲಿನ ನ್ಯಾಯಾಲಯಗಳಲ್ಲಿ ವ್ಯವಹರಣೆಗಳು ಇತ್ಯರ್ಥದಲ್ಲಿರುವಾಗ ಕೆಲಸಗಾರನಿಗೆ ಪೂರ್ಣ ಮಜೂರಿಗಳ ಸಂದಾಯ

18. ಒಪ್ಪಂದಗಳು ಮತ್ತು ಐತೀರ್ಪುಗಳಿಗೆ ಬದ್ಧರಾಗತಕ್ಕ ವ್ಯಕ್ತಿಗಳು

19. ಇತ್ಯರ್ಥಗಳು ಮತ್ತು ಐತೀರ್ಪುಗಳ ಪ್ರವರ್ತನೆಯ ಅವಧಿ

20. ವ್ಯವಹರಣೆಗಳ ಪ್ರಾರಂಭ ಮತ್ತು ಮುಕ್ತಾಯ

21. ಕೆಲವು ವಿಷಯಗಳನ್ನು ರಹಸ್ಯವಾಗಿಡುವುದು

## ಅಧ್ಯಾಯ –V

## ಮುಷ್ಕರಗಳು ಹಾಗೂ ಬೀಗ ಮುದ್ರೆಗಳು

22. ಮುಷ್ಕರಗಳು ಹಾಗೂ ಬೀಗಮುದ್ರೆಗಳ ನಿಷೇಧ

23. ಮುಷ್ಕರಗಳ ಹಾಗೂ ಬೀಗಮುದ್ರೆಗಳ ಸಾಮಾನ್ಯ ನಿಷೇಧ

24. ಕಾನೂನು ಸಮ್ಮತವಲ್ಲದ ಮುಷ್ಕರಗಳು ಮತ್ತು ಬೀಗ ಮುದ್ರೆಗಳು

25. ಕಾನೂನು ಬಾಹಿರ ಮುಷ್ಕರಗಳು ಹಾಗೂ ಬೀಗಮುದ್ರೆಗಳಿಗೆ ಹಣಕಾಸಿನ ಸಹಾಯದ ನಿಷೇಧ

## ಅಧ್ಯಾಯ - V-ಎ

### ಹಂಗಾಮಿ ವಜಾ ಮತ್ತು ಕೆಲಸದಿಂದ ತೆಗೆದುಹಾಕುವುದು


25ಎ. 25ಸಿ ದಿಂದ 25 ಇ ವರೆಗಿನ ಪ್ರಕರಣಗಳ ಅನ್ವಯ

25ಬಿ. ನಿರಂತರ ಸೇವೆಯ ಪರಿಭಾಷೆ

25ಸಿ. ಹಂಗಾಮಿ ವಜಾ ಆದ ಕೆಲಸಗಾರರು ಹೊಂದಿರುವ ಪರಿಹಾರದ ಹಕ್ಕು

25ಡಿ. ಕೆಲಸಗಾರರ ಹಾಜರಿ ಪುಸ್ತಕವನ್ನು ಇಡುವುದು ನಿಯೋಜಕನ ಕರ್ತವ್ಯ

25ಇ. ಕೆಲಸಗಾರರು ಕೆಲವು ಸಂದರ್ಭಗಳಲ್ಲಿ ಪರಿಹಾರಕ್ಕೆ ಹಕ್ಕು ಹೊಂದಿಲ್ಲದಿರುವುದು

25ಎಫ್. ಕೆಲಸಗಾರನನ್ನು ಕೆಲಸದಿಂದ ತೆಗೆದುಹಾಕುವುದಕ್ಕೆ ಪೂರ್ವಭಾವಿ ಷರತ್ತುಗಳು

25ಎಫ್ಎಫ್. ಉದ್ಯಮಗಳ ವರ್ಗಾವಣೆಯ ಸಂದರ್ಭದಲ್ಲಿ ಕೆಲಸಗಾರರಿಗೆ ಪರಿಹಾರ

25ಎಫ್ಎಫ್ಎ. ಯಾವುದೇ ಉದ್ಯಮವನ್ನು ಮುಚ್ಚಿಬಿಡುವ ಇಚ್ಛೆಯ ಬಗ್ಗೆ ಅರವತ್ತು ದಿನಗಳ ನೋಟೀಸು ಕೊಡುವುದು

25 ಎಫ್ಎಫ್ಎಫ್. ಉದ್ಯಮಗಳನ್ನು ಮುಚ್ಚಿಬಿಡುವ ಸಂದರ್ಭದಲ್ಲಿ ಕೆಲಸಗಾರರಿಗೆ ಪರಿಹಾರ 25ಜಿ. ಕೆಲಸ

25ಎಚ್. ಕೆಲಸದಿಂದ ತೆಗೆದುಹಾಕಿದ ಕೆಲಸಗಾರರ ಮರು ನಿಯೋಜನೆ

25ಐ. ಈ ಅಧ್ಯಾಯದ ಮೇರೆಗೆ ನಿಯೋಜಿತರಿಂದ ಬಾಕಿಯಿರುವ ಹಣದ ವಸೂಲಿ

25ಜೆ. ಈ ಅಧ್ಯಾಯಕ್ಕೆ ಅಸಂಗತವಾದ ಕಾನೂನುಗಳ ಪರಿಣಾಮ


## ಅಧ್ಯಾಯ -V ಬಿ

### ಕೆಲವು ಕಾರ್ಯಸಂಸ್ಥೆಗಳಲ್ಲಿ ಹಂಗಾಮಿ ವಜಾ, ಕೆಲಸದಿಂದ ತೆಗೆದುಹಾಕುವಿಕೆ ಮತ್ತು ಮುಚ್ಚುವಿಕೆ ಇವುಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು


25ಕೆ. 5ಬಿ ಅಧ್ಯಾಯದ ಅನ್ವಯ

25ಎಲ್. ಪರಿಭಾಷೆಗಳು

25ಎಂ. ಹಂಗಾಮಿ ವಜಾದ ನಿಷೇಧ

25ಎನ್. ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕುವುದಕ್ಕೆ ಮುಂಚಿನ ಷರತ್ತುಗಳು

25ಓ. ಉದ್ಯಮವನ್ನು ಮುಚ್ಚುವ ಬಗ್ಗೆ ಪ್ರಕ್ರಿಯೆ

25ಪಿ. ಕೈಗಾರಿಕಾ ವಿವಾದಗಳ (ತಿದ್ದುಪಡಿ) ಅಧಿನಿಯಮ, 1976 ಇದರ ಪ್ರಾರಂಭಕ್ಕೆ ಮುಂಚೆ ಮುಚ್ಚಿದ ಉದ್ಯಮಗಳನ್ನು ಪುನರ್-ಪ್ರಾರಂಭಿಸಲು ವಿಶೇಷ ಉಪಬಂಧ

25ಕ್ಯೂ. ಪೂರ್ವಾನುಮತಿಯಿಲ್ಲದೆ ಹಂಗಾಮಿ ವಜಾ ಮತ್ತು ಕೆಲಸದಿಂದ ತೆಗೆದು ಹಾಕುವುದಕ್ಕೆ ದಂಡ

25ಆರ್. ಮುಚ್ಚುವಿಕೆಗೆ ದಂಡ

25ಎಸ್. ಈ ಅಧ್ಯಾಯವು ಅನ್ವಯವಾಗುವ ಕೈಗಾರಿಕಾ ಸಂಸ್ಥೆಗೆ V ಎ ಅಧ್ಯಾಯದ ಕೆಲವು ಉಪಬಂಧಗಳು ಅನ್ವಯವಾಗುವುದು

## ಅಧ್ಯಾಯ – Vಸಿ

### ಅನುಚಿತ ಕಾರ್ಮಿಕ ಆಚರಣೆಗಳು


25ಟಿ. ಅನುಚಿತ ಕಾರ್ಮಿಕ ಆಚರಣೆ ನಿಷೇಧ

25ಯು. ಅನುಚಿತ ಕಾರ್ಮಿಕ ಆಚರಣೆಗಳನ್ನು ಆಚರಿಸುವುದಕ್ಕಾಗಿ ದಂಡ


## ಅಧ್ಯಾಯ –VI

### ದಂಡಗಳು


26. ಕಾನೂನುಬಾಹಿರ ಮುಷ್ಕರಗಳು ಮತ್ತು ಬೀಗ ಮುದ್ರೆಗಳಿಗೆ ದಂಡ

27. ಪ್ರಚೋದನೆ ಇತ್ಯಾದಿಗಾಗಿ ದಂಡ

28. ಕಾನೂನುಬಾಹಿರ ಮುಷ್ಕರಗಳು ಮತ್ತು ಬೀಗಮುದ್ರೆಗಳಿಗೆ ಹಣಕಾಸು ನೆರವು ನೀಡುವುದಕ್ಕಾಗಿ ದಂಡ

29. ಇತ್ಯರ್ಥ ಅಥವಾ ಐತೀರ್ಪಿನ ಉಲ್ಲಂಘನೆಗಾಗಿ ದಂಡ

30. ರಹಸ್ಯ ಮಾಹಿತಿಯನ್ನು ಬಹಿರಂಗಪಡಿಸುವುದಕ್ಕೆ ದಂಡ

30ಎ. ನೋಟೀಸು ಕೊಡದೆ ಮುಚ್ಚುವುದಕ್ಕಾಗಿ ದಂಡ

31. ಇತರ ಅಪರಾಧಗಳಿಗಾಗಿ ದಂಡ


## ಅಧ್ಯಾಯ –VII

### ಸಂಕೀರ್ಣ


32. ಕಂಪನಿಗಳು ಇತ್ಯಾದಿಗಳಿಂದ ಅಪರಾಧ

33. ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಕೆಲವು ಸಂದರ್ಭಗಳಲ್ಲಿ ಸೇವಾ ಷರತ್ತುಗಳು ಇತ್ಯಾದಿ ಬದಲಾಗದೆ ಉಳಿಯುವುದು

33ಎ. ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಸೇವಾ ಷರತ್ತುಗಳು ಮುಂತಾದುವುಗಳ ಬದಲಾವಣೆ ಮಾಡಲಾಗಿತ್ತೆ ಇಲ್ಲವೆ ಎಂಬ ಬಗ್ಗೆ ನ್ಯಾಯನಿರ್ಣಯಕ್ಕಾಗಿ ವಿಶೇಷ ಉಪಬಂಧ

33ಬಿ. ಕೆಲವು ವ್ಯವಹರಣೆಗಳನ್ನು ವರ್ಗಾಯಿಸುವ ಅಧಿಕಾರ

33ಸಿ. ನಿಯೋಜಕನಿಂದ ಬಾಕಿ ಇರುವ ಹಣದ ವಸೂಲಿ

34. ಅಪರಾಧಗಳ ಸಂಜ್ಞಾನ

35. ವ್ಯಕ್ತಿಗಳ ರಕ್ಷಣೆ

36. ಪಕ್ಷಕಾರರ ಪ್ರಾತಿನಿಧ್ಯ

36ಎ. ತೊಂದರೆಗಳನ್ನು ನಿವಾರಿಸಲು ಅಧಿಕಾರ

36ಬಿ. ವಿನಾಯಿತಿಗೊಳಿಸಲು ಅಧಿಕಾರ

37. ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮಕ್ಕೆ ರಕ್ಷಣೆ

38. ನಿಯಮ ರಚನಾಧಿಕಾರ

39. ಅಧಿಕಾರಗಳ ಪ್ರತ್ಯಾಯೋಜನೆ

40. ಅನುಸೂಚಿಗಳನ್ನು ತಿದ್ದುಪಡಿ ಮಾಡಲು ಅಧಿಕಾರ

ಮೊದಲನೇ ಅನುಸೂಚಿ
ಎರಡನೇ ಅನುಸೂಚಿ
ಮೂರನೇ ಅನುಸೂಚಿ
ನಾಲ್ಕನೇ ಅನುಸೂಚಿ
ಐದನೇ ಅನುಸೂಚಿ

# ಕೈಗಾರಿಕಾ ವಿವಾದಗಳ ಅಧಿನಿಯಮ, 1947

**(1947ರ ಅಧಿನಿಯಮ ಸಂಖ್ಯೆ 14)**

[11ನೇ ಮಾರ್ಚ್, 1947]

ಕೈಗಾರಿಕಾ ವಿವಾದಗಳ ತನಿಖೆ ಮತ್ತು ಇತ್ಯರ್ಥಕ್ಕಾಗಿ ಮತ್ತು ಕೆಲವು ಇತರ ಉದ್ದೇಶಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಕೈಗಾರಿಕಾ ವಿವಾದಗಳ ತನಿಖೆ ಮತ್ತು ಇತ್ಯರ್ಥಕ್ಕಾಗಿ ಮತ್ತು ಇಲ್ಲಿ ಇನ್ನು ಮುಂದೆ ಕಂಡುಬರುವ ಕೆಲವು ಇತರ ಉದ್ದೇಶಗಳಿಗಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಇದನ್ನು ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

## ಅಧ್ಯಾಯ-1

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕೈಗಾರಿಕಾ ವಿವಾದಗಳ ಅಧಿನಿಯಮ, 1947 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಒಂದನೇ ಏಪ್ರಿಲ್, 1947ರಂದು ಜಾರಿಗೆ ಬರತಕ್ಕುದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ವಿಷಯ ಅಥವಾ ಸಂದರ್ಭಕ್ಕೆ ವಿರುದ್ಧವಾಗಿರುವುದು ಏನಾದರೂ ಇದ್ದ ಹೊರತು,-

(ಎ) "ಸಮುಚಿತ ಸರ್ಕಾರ" ಎಂದರೆ-

(i) ಕೇಂದ್ರ ಸರ್ಕಾರದ ಪ್ರಾಧಿಕಾರದ ಮೂಲಕ ಅಥವಾ ಅದರ ಮೇರೆಗೆ ಅಥವಾ ಒಂದು ರೈಲ್ವೆ ಕಂಪನಿಯ ಮೂಲಕ ನಡೆಸಲಾಗುವ ಯಾವುದೇ ಕೈಗಾರಿಕೆಗೆ ಸಂಬಂಧಿಸಿದ, ಅಥವಾ ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಯಾವುದೇ ನಿಯಂತ್ರಿತ ಕೈಗಾರಿಕೆಗೆ ಸಂಬಂಧಿಸಿದ ಯಾವುದೇ ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದಂತೆ ಅಥವಾ ಹಡಗುಕಟ್ಟೆ ಕೆಲಸಗಾರರ (ನಿಯೋಜನೆಯ ವಿನಿಯಮ) ಅಧಿನಿಯಮ, 1948ರ (1948ರ 9) 5ಎ ಪ್ರಕರಣದ ಮೇರೆಗೆ ಸ್ಥಾಪಿಸಿದ ಹಡಗುಕಟ್ಟೆ ಕಾರ್ಮಿಕ ಮಂಡಲಿಗೆ, ಅಥವಾ ಕಂಪನಿಗಳ ಅಧಿನಿಯಮ, 1956 (1956 ರ 1) ರ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ ಭಾರತ ಕೈಗಾರಿಕಾ ಹಣಕಾಸು ನಿಗಮಕ್ಕೆ ಅಥವಾ ನಿಯೋಜಿತರ ರಾಜ್ಯವಿಮಾ ಅಧಿನಿಯಮ, 1948ರ (1948ರ 34) 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ನಿಯೋಜಿತರ ರಾಜ್ಯವಿಮಾ ನಿಗಮಕ್ಕೆ ಅಥವಾ ಕಲ್ಲಿದ್ದಲು ಗಣಿಗಳ ಭವಿಷ್ಯನಿಧಿ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1948ರ (1948ರ 46) 3ಎ ಪ್ರಕರಣದ ಮೇರೆಗೆ ಸ್ಥಾಪಿಸಿದ ನ್ಯಾಸಧಾರಿ ಮಂಡಲಿಗೆ ಅಥವಾ ನಿಯೋಜಿತರ ಭವಿಷ್ಯನಿಧಿ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952ರ (1952ರ 19) ಕ್ರಮವಾಗಿ 5 ಎ ಮತ್ತು 5ಬಿ ಪ್ರಕರಣಗಳ ಮೇರೆಗೆ ರಚಿಸಿದ ಕೇಂದ್ರ ನ್ಯಾಸಧಾರಿ ಮಂಡಲಿಗೆ ಮತ್ತು ರಾಜ್ಯ ನ್ಯಾಸಧಾರಿ ಮಂಡಲಿಗಳಿಗೆ ಅಥವಾ ಜೀವವಿಮಾ ನಿಗಮ ಅಧಿನಿಯಮ, 1956ರ (1956ರ 31) 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಭಾರತ ಜೀವವಿಮಾ ನಿಗಮಕ್ಕೆ ಅಥವಾ ಕಂಪನಿಗಳ ಅಧಿನಿಯಮ, 1956 (1956

ರ1)ರ ಮೇರೆಗೆ ನೋಂದಾಯಿತವಾದ ತೈಲ ಮತ್ತು ನೈಸರ್ಗಿಕ ಅನಿಲ ನಿಗಮ ನಿಯಮಿತಕ್ಕೆ ಅಥವಾ ಠೇವಣಿ ವಿಮೆ ಮತ್ತು ಸಾಲ ಖಾತರಿ ನಿಗಮ ಅಧಿನಿಯಮ, 1961 ರ (1961ರ 47) 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಠೇವಣಿ ವಿಮೆ ಮತ್ತು ಸಾಲ ಖಾತರಿ ನಿಗಮಕ್ಕೆ ಅಥವಾ ಉಗ್ರಾಣ ನಿಗಮ ಅಧಿನಿಯಮ, 1962ರ (1962ರ 58) 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಕೇಂದ್ರ ಉಗ್ರಾಣ ನಿಗಮಕ್ಕೆ ಅಥವಾ ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ ಅಧಿನಿಯಮ, 1963ರ (1963ರ 52) 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಯೂನಿಟ್ ಟ್ರಸ್ಟ್ ಆಫ್ ಇಂಡಿಯಾಕ್ಕೆ ಅಥವಾ ಆಹಾರ ನಿಗಮ ಅಧಿನಿಯಮ, 1964ರ (1964ರ 37) 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಭಾರತ ಆಹಾರ ನಿಗಮಕ್ಕೆ ಅಥವಾ 16ನೇ ಪ್ರಕರಣದ ಮೇರೆಗೆ ಹೊಂದಿಕೊಂಡಿರುವ ಎರಡು ಅಥವಾ ಹೆಚ್ಚು ರಾಜ್ಯಗಳಿಗಾಗಿ ಸ್ಥಾಪಿಸಿದ ವ್ಯವಸ್ಥಾಪನಾ ಮಂಡಲಿಗೆ ಅಥವಾ ಭಾರತದ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1994ರ (1994 ರ 55) 3ನೇ ಪ್ರಕರಣದ ಮೇರೆಗೆ ರಚಿತವಾದ ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಅಥವಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಅಧಿನಿಯಮ, 1976 ರ (1976ರ 21) 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಗೆ, ಅಥವಾ ರಫ್ತು ಸಾಲ ಮತ್ತು ಖಾತರಿ ನಿಗಮ ನಿಯಮಿತಕ್ಕೆ ಅಥವಾ ಭಾರತ ಕೈಗಾರಿಕಾ ಪುನರ್ನಿರ್ಮಾಣ ನಿಗಮ ನಿಯಮಿತಕ್ಕೆ ಅಥವಾ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಅಧಿನಿಯಮ, 1987ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕು ಅಥವಾ ಒಂದು ಸಾರಿಗೆ ಸೇವೆ ಅಥವಾ ಬ್ಯಾಂಕಿಂಗ್ ಅಥವಾ ವಿಮಾ ಕಂಪನಿ, ಗಣಿ, ತೈಲಕ್ಷೇತ್ರ, ದಂಡು ಪ್ರದೇಶ ಮಂಡಲಿ ಅಥವಾ ದೊಡ್ಡ ಬಂದರು, ಇವುಗಳಿಗೆ ಸಂಬಂಧಿಸಿದ ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ, ಮತ್ತು

(ii) ಯಾವುದೇ ಇತರ ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರ;

(ಎಎ) "ಮಧ್ಯಸ್ಥಗಾರ" ಎಂಬುದು ನ್ಯಾಯನಿರ್ಣಾಯಕನನ್ನು ಒಳಗೊಳ್ಳುತ್ತದೆ;

(ಎಎಎ) "ಸರಾಸರಿ ವೇತನ" ಎಂದರೆ-

(i) ಮಾಸಿಕ ಸಂದಾಯದ ಕೆಲಸಗಾರನಾಗಿದ್ದರೆ, ಮೂರು ಪೂರ್ಣ ಕ್ಯಾಲೆಂಡರ್ ತಿಂಗಳುಗಳಲ್ಲಿ,

(ii) ವಾರಕ್ಕೆ ಸಂದಾಯ ಆಗುತ್ತಿರುವ ಕೆಲಸಗಾರನಾಗಿದ್ದರೆ, ನಾಲ್ಕು ಪೂರ್ಣ ವಾರಗಳಲ್ಲಿ,

(iii) ದಿನದಿನವೂ ಸಂದಾಯ ಆಗುತ್ತಿರುವ ಕೆಲಸಗಾರನಾಗಿದ್ದರೆ, ಹನ್ನೆರಡು ಪೂರ್ಣ ಕೆಲಸದ ದಿನಗಳಲ್ಲಿ,

ಆ ಕೆಲಸಗಾರನು, ಸಂದರ್ಭಾನುಸಾರ, ಮೂರು ಪೂರ್ಣ ಕ್ಯಾಲೆಂಡರ್ ತಿಂಗಳುಗಳು ಅಥವಾ ನಾಲ್ಕು ಪೂರ್ಣ ವಾರಗಳು ಅಥವಾ ಹನ್ನೆರಡು ಪೂರ್ಣ ಕೆಲಸದ ದಿವಸ ಕೆಲಸ ಮಾಡಿದ್ದರೆ, ಯಾವ ದಿನಾಂಕದಂದು ಸರಾಸರಿ ವೇತನವನ್ನು ಸಂದಾಯ ಮಾಡಬೇಕಾಗುತ್ತಿತ್ತೋ ಆ ದಿನಾಂಕಕ್ಕೆ ಹಿಂದಿನ ದಿನಾಂಕದಂದು ಆ ಕೆಲಸಗಾರನಿಗೆ ಸಂದಾಯವಾಗತಕ್ಕ ಮಜೂರಿಗಳ ಸರಾಸರಿ ಮತ್ತು ಅಂಥ ಲೆಕ್ಕಾಚಾರ ಮಾಡಲಾಗದಿದ್ದರೆ, ಆ ಸರಾಸರಿ ವೇತನವನ್ನು, ಕೆಲಸಗಾರನು ವಾಸ್ತವಿಕವಾಗಿ ಕೆಲಸ ಮಾಡಿದ ಅವಧಿಯಲ್ಲಿ ಅವನಿಗೆ ಸಂದಾಯವಾಗತಕ್ಕ ಮಜೂರಿಗಳ ಸರಾಸರಿಯಾಗಿ ಲೆಕ್ಕ ಹಾಕತಕ್ಕುದು.

(ಬಿ) "ಐತೀರ್ಪು" ಎಂದರೆ ಯಾವುದೇ ಕಾರ್ಮಿಕ ನ್ಯಾಯಾಲಯ, ಕೈಗಾರಿಕಾ ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ಕೈಗಾರಿಕಾ ನ್ಯಾಯಾಧಿಕರಣವು ಯಾವುದೇ ಕೈಗಾರಿಕಾ ವಿವಾದ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ನೀಡಿದ ಮಧ್ಯಕಾಲೀನ ಅಥವಾ ಅಂತಿಮ ನಿರ್ಧಾರ ಮತ್ತು ಇದು 10ಎ ಪ್ರಕರಣದ ಮೇರೆಗೆ ನೀಡಿದ ಮಧ್ಯಸ್ಥ ಐತೀರ್ಪನ್ನು ಒಳಗೊಳ್ಳುತ್ತದೆ;

(ಬಿಬಿ) "ಬ್ಯಾಂಕಿಂಗ್ ಕಂಪನಿ" ಎಂದರೆ, ಬ್ಯಾಂಕಿಂಗ್ ಕಂಪನಿಗಳ ಅಧಿನಿಯಮ, 1949ರ (1949ರ 10) 5ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಮತ್ತು ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಶಾಖೆಗಳನ್ನು ಅಥವಾ ಇತರ ಸ್ಥಾಪನೆಗಳನ್ನು ಹೊಂದಿರುವ ಬ್ಯಾಂಕಿಂಗ್ ಕಂಪನಿ, ಮತ್ತು ಇದು ಭಾರತ ಆಮದು ರಫ್ತು ಬ್ಯಾಂಕು,

ಭಾರತ ಕೈಗಾರಿಕಾ ಪುನರ್‌ನಿರ್ಮಾಣ ಬ್ಯಾಂಕು, ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು, ಭಾರತ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1989ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಭಾರತ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್, ಭಾರತ ರಿಸರ್ವ್‌ಬ್ಯಾಂಕು, ಭಾರತದ ಸ್ಟೇಟ್ ಬ್ಯಾಂಕ್, ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970ರ (1970ರ 5) 3ನೇ ಪ್ರಕರಣದ ಮೇರೆಗೆ ರಚಿಸಿದ ಸಂವಾದಿ ಹೊಸ ಬ್ಯಾಂಕು, ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1980ರ 3ನೇ ಪ್ರಕರಣದ ಮೇರೆಗೆ ರಚಿಸಿದ ಸಂವಾದಿ ಹೊಸ ಬ್ಯಾಂಕು ಮತ್ತು ಭಾರತದ ಸ್ಟೇಟ್ ಬ್ಯಾಂಕ್ (ಸಮನುಷಂಗಿ ಬ್ಯಾಂಕುಗಳ) ಅಧಿನಿಯಮ,1959 (1959ರ 38) ರಲ್ಲಿ ಪರಿಭಾಷಿಸಿರುವಂತೆ ಯಾವುದೇ ಸಮನುಷಂಗಿ ಬ್ಯಾಂಕನ್ನು ಒಳಗೊಳ್ಳುತ್ತದೆ.

(ಸಿ) "ಮಂಡಲಿ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ಸಂಧಾನ ಮಂಡಲಿ;

(ಸಿಸಿ) "ಮುಚ್ಚುವಿಕೆ" ಎಂದರೆ ನಿಯೋಜನೆ ಸ್ಥಳ ಅಥವಾ ಅದರ ಭಾಗವನ್ನು ಖಾಯಂ ಆಗಿ ಮುಚ್ಚುವುದು;

(ಡಿ) "ಸಂಧಾನ ಅಧಿಕಾರಿ" ಎಂದರೆ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಸಂಧಾನ ಅಧಿಕಾರಿ;

(ಇ) "ಸಂಧಾನ ವ್ಯವಹರಣೆ" ಎಂದರೆ ಈ ಅಧಿನಿಯಮದ ಮೇರೆಗೆ ಸಂಧಾನ ಅಧಿಕಾರಿ ಅಥವಾ ಮಂಡಲಿಯು ನಡೆಸಿದ ಯಾವುದೇ ವ್ಯವಹರಣೆ;

(ಇಇ) "ನಿಯಂತ್ರಿತ ಕೈಗಾರಿಕೆ" ಎಂದರೆ ಒಕ್ಕೂಟದಿಂದ ಯಾವ ಕೈಗಾರಿಕೆಯ ನಿಯಂತ್ರಣವು ಸಾರ್ವಜನಿಕ ಹಿತದೃಷ್ಟಿಯಲ್ಲಿ ವಿಹಿತವೆಂದು ಯಾವುದೇ ಕೇಂದ್ರಾಧಿನಿಯಮದ ಮೂಲಕ ಘೋಷಿಸಲಾಗಿದೆಯೋ ಆ ಯಾವುದೇ ಕೈಗಾರಿಕೆ;

(ಎಫ್) "ನ್ಯಾಯಾಲಯ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ವಿಚಾರಣಾ ನ್ಯಾಯಾಲಯ;

(ಜಿ) "ನಿಯೋಜಕ" ಎಂದರೆ-

(i) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾವುದೇ ಇಲಾಖೆಯ ಪ್ರಾಧಿಕಾರದ ಮೂಲಕ ಅಥವಾ ಅದರ ಮೇರೆಗೆ ನಡೆಸಲಾಗುವ ಯಾವುದೇ ಕೈಗಾರಿಕೆಯ ಸಂಬಂಧದಲ್ಲಿ, ಈ ಬಗ್ಗೆ ನಿಯಮಿಸಿದ ಪ್ರಾಧಿಕಾರ, ಅಥವಾ ಯಾವುದೇ ಪ್ರಾಧಿಕಾರವನ್ನು ನಿಯಮಿಸದಿರುವಲ್ಲಿ, ಇಲಾಖಾ ಮುಖ್ಯಸ್ಥ;

(ii) ಸ್ಥಳೀಯ ಪ್ರಾಧಿಕಾರದ ಮೂಲಕ ಅಥವಾ ಅದರ ಪರವಾಗಿ ನಡೆಸಲಾಗುವ ಕೈಗಾರಿಕೆಯ ಸಂಬಂಧದಲ್ಲಿ, ಆ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ;

(ಜಿಜಿ) ಕಾರ್ಮಿಕ ಸಂಘಕ್ಕೆ ಸಂಬಂಧಿಸಿದಂತೆ "ಕಾರ್ಯ ನಿರ್ವಾಹಕ" ಎಂದರೆ ಯಾವುದೇ ಹೆಸರಿನಿಂದ ಕರೆಯಲ್ಪಡುವ, ಕಾರ್ಮಿಕ ಸಂಘದ ವ್ಯವಹಾರಗಳ ವ್ಯವಸ್ಥಾಪನೆಯನ್ನು ಯಾವ ನಿಕಾಯಕ್ಕೆ ವಹಿಸಿಕೊಡಲಾಗಿದೆಯೋ ಆ ನಿಕಾಯ;

(ಎಚ್) [***]

(ಐ) ಒಬ್ಬ ವ್ಯಕ್ತಿಯು ಯಾವೊಂದು ಮಂಡಲಿಗೆ, ನ್ಯಾಯಾಲಯಕ್ಕೆ ಅಥವಾ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಲಾದ ಯಾವುದೇ ಕೈಗಾರಿಕಾ ವಿವಾದಕ್ಕೆ ಅಥವಾ ಅಂಥ ವಿವಾದದಿಂದ ನೇರವಾಗಿ ಬಾಧಿತವಾದ ಯಾವುದೇ ಕೈಗಾರಿಕೆಗೆ ಸಂಬಂಧಿಸಿಲ್ಲದಿದ್ದರೆ ಅವನನ್ನು ಅಂಥ ಮಂಡಲಿಗೆ, ನ್ಯಾಯಾಲಯಕ್ಕೆ ಅಥವಾ ನ್ಯಾಯಾಧಿಕರಣಕ್ಕೆ ನೇಮಕ ಮಾಡುವ ಉದ್ದೇಶಕ್ಕಾಗಿ "ಸ್ವತಂತ್ರ ವ್ಯಕ್ತಿ" ಎಂದು ಭಾವಿಸತಕ್ಕುದು:

ಪರಂತು, ಯಾವನೇ ವ್ಯಕ್ತಿಯು, ಅವನು ಅಂಥ ಕೈಗಾರಿಕಾ ವಿವಾದಕ್ಕೆ ಸಂಬಂಧ ಪಟ್ಟಿರುವ ಅಥವಾ ಅಂಥ ಕೈಗಾರಿಕಾ ವಿವಾದದಿಂದ ಬಾಧಿತನಾಗುವ ಸಂಭವವಿರುವ ನಿಗಮಿತ ಕಂಪನಿಯ

ಷೇರುದಾರನಾಗಿರುವನೆಂಬ ಕಾರಣ ಮಾತ್ರದಿಂದಲೇ ಸ್ವತಂತ್ರನಾಗಿರುವುದು ನಿಂತುಹೋಗತಕ್ಕುದಲ್ಲ, ಆದರೆ ಅಂಥ ಸಂದರ್ಭದಲ್ಲಿ, ಅವನು ಅಂಥ ಕಂಪನಿಯಲ್ಲಿ ಹೊಂದಿರುವ ಷೇರುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ಸಮುಚಿತ ಸರ್ಕಾರಕ್ಕೆ ತಿಳಿಸತಕ್ಕುದು;

(ಜೆ) "ಕೈಗಾರಿಕೆ" ಎಂದರೆ ನಿಯೋಜಕರ ಯಾವುದೇ ವ್ಯವಹಾರ, ವ್ಯಾಪಾರ, ಉದ್ಯಮ, ತಯಾರಿಕೆ ಅಥವಾ ಆ ಜೀವಿಕೆ ಮತ್ತು ಇದು ಯಾವುದೇ ಆ ಜೀವಿಕೆ, ಸೇವೆ, ನಿಯೋಜನೆ ಕರಕುಶಲ ಅಥವಾ ಕೆಲಸಗಾರರ ಕೈಗಾರಿಕಾ ಉದ್ಯೋಗ ಅಥವಾ ಉಪ ವೃತ್ತಿಯನ್ನು ಒಳಗೊಳ್ಳುತ್ತದೆ.

(ಕೆ) "ಕೈಗಾರಿಕಾ ವಿವಾದ" ಎಂದರೆ ಯಾವನೇ ವ್ಯಕ್ತಿಯ ನಿಯೋಜನೆ ಅಥವಾ ನಿಯೋಜನೇತರ ಅಥವಾ ನಿಯೋಜನೆಯ ನಿಬಂಧನೆಗಳು ಅಥವಾ ದುಡಿಮೆಯ ಷರತ್ತುಗಳಿಗೆ ಸಂಬಂಧಿಸಿದ, ನಿಯೋಜಕರು ಮತ್ತು ನಿಯೋಜಕರ ನಡುವಣ ಅಥವಾ ನಿಯೋಜಕರು ಮತ್ತು ಕೆಲಸಗಾರರ ನಡುವಣ ಅಥವಾ ಕೆಲಸಗಾರ ಮತ್ತು ಕೆಲಸಗಾರರ ನಡುವಣ ಯಾವುದೇ ವಿವಾದ ಅಥವಾ ಭಿನ್ನಾಭಿಪ್ರಾಯ;

(ಕೆಎ) "ಕೈಗಾರಿಕಾ ಕಾರ್ಯಸಂಸ್ಥೆ ಅಥವಾ ಉದ್ಯಮ" ಎಂದರೆ ಯಾವುದೇ ಕೈಗಾರಿಕೆಯನ್ನು ನಡೆಸುವ ಕಾರ್ಯ ಸಂಸ್ಥೆ ಅಥವಾ ಉದ್ಯಮ:

ಪರಂತು, ಕಾರ್ಯಸಂಸ್ಥೆ ಅಥವಾ ಉದ್ಯಮದಲ್ಲಿ ಹಲವು ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದು ಅಂಥ ಕಾರ್ಯ ಚಟುವಟಿಕೆಗಳಲ್ಲಿ ಕೇವಲ ಒಂದು ಅಥವಾ ಕೆಲವು ಕಾರ್ಯ ಚಟುವಟಿಕೆಗಳು ಕೈಗಾರಿಕೆ ಅಥವಾ ಕೈಗಾರಿಕೆಗಳು ಆಗಿರುವಲ್ಲಿ, ಆಗ,-

(ಎ) ಯಾವುದೇ ಕಾರ್ಯಚಟುವಟಿಕೆಯನ್ನು ನಡೆಸುವ ಅಂಥ ಸಂಸ್ಥೆ ಅಥವಾ ಉದ್ಯಮದ ಯಾವುದೇ ಘಟಕವು ಕೈಗಾರಿಕೆಯಾಗಿದ್ದು, ಅಂಥ ಸಂಸ್ಥೆ ಅಥವಾ ಉದ್ಯಮದ ಇತರ ಘಟಕ ಅಥವಾ ಘಟಕಗಳಿಂದ ಪ್ರತ್ಯೇಕವಾಗಿದ್ದರೆ, ಅಂಥ ಘಟಕವನ್ನು ಪ್ರತ್ಯೇಕವಾದ ಕೈಗಾರಿಕಾ ಸಂಸ್ಥೆ ಅಥವಾ ಉದ್ಯಮ ಎಂಬುದಾಗಿ ಭಾವಿಸತಕ್ಕುದು;

(ಬಿ) ಅಂಥ ಸಂಸ್ಥೆ ಅಥವಾ ಉದ್ಯಮ ಅಥವಾ ಅದರ ಯಾವುದೇ ಘಟಕದಲ್ಲಿ ನಡೆಸುವ ಪ್ರಧಾನ ಕಾರ್ಯಚಟುವಟಿಕೆ ಅಥವಾ ಪ್ರಧಾನ ಕಾರ್ಯಚಟುವಟಿಕೆಗಳಲ್ಲಿ ಪ್ರತಿಯೊಂದು ಕೈಗಾರಿಕೆಯಾಗಿದ್ದು, ಅಂಥ ಸಂಸ್ಥೆ ಅಥವಾ ಉದ್ಯಮ ಅಥವಾ ಅದರ ಘಟಕದಲ್ಲಿ ನಡೆಸುವ ಇತರೆ ಕಾರ್ಯಚಟುವಟಿಕೆ ಅಥವಾ ಇತರ ಕಾರ್ಯಚಟುವಟಿಕೆಗಳಲ್ಲಿ ಪ್ರತಿಯೊಂದನ್ನು, ಅಂಥ ಪ್ರಧಾನ ಕಾರ್ಯಚಟುವಟಿಕೆ ಅಥವಾ ಕಾರ್ಯಚಟುವಟಿಕೆಗಳನ್ನು ನಡೆಸುವ ಮತ್ತು ನಡೆಸಲು ನೆರವು ನೀಡುವ ಉದ್ದೇಶಕ್ಕಾಗಿ ಇಡೀ ಸಂಸ್ಥೆ ಅಥವಾ ಉದ್ಯಮ ಅಥವಾ ಸಂದರ್ಭಾನುಸಾರ ಅದರ ಘಟಕದಿಂದ ಪ್ರತ್ಯೇಕಿಸಲಾಗದಿದ್ದರೆ ಮತ್ತು ಅದು ಇಡೀ ಸಂಸ್ಥೆ ಅಥವಾ ಉದ್ಯಮ ಅಥವಾ ಸಂದರ್ಭಾನುಸಾರ, ಅದರ ಘಟಕವಾಗಿದ್ದರೆ ಅದನ್ನು ಕೈಗಾರಿಕಾ ಕಾರ್ಯ ಸಂಸ್ಥೆ ಅಥವಾ ಉದ್ಯಮ ಎಂಬುದಾಗಿ ಭಾವಿಸತಕ್ಕುದು;

(ಕೆಕೆ) "ವಿಮಾ ಕಂಪನಿ" ಎಂದರೆ, ವಿಮಾ ಅಧಿನಿಯಮ, 1938 (1938ರ 4) ರ 2ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಮತ್ತು ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಶಾಖೆಗಳನ್ನು ಅಥವಾ ಇತರ ಕಾರ್ಯಸಂಸ್ಥೆಗಳನ್ನು ಹೊಂದಿರುವ ವಿಮಾ ಕಂಪನಿ;

(ಕೆಕೆಎ) "ಖಾದಿ" ಎಂಬುದು ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗ ಅಧಿನಿಯಮ, 1956 (1956ರ 61)ರ 2ನೇ ಪ್ರಕರಣದ (ಡಿ) ಖಂಡದಲ್ಲಿ ಅದಕ್ಕೆ ನೀಡಿರುವ ಅರ್ಥವನ್ನು ಹೊಂದಿರುತ್ತದೆ;

(ಕೆಕೆಬಿ) "ಕಾರ್ಮಿಕ ನ್ಯಾಯಾಲಯ" ಎಂದರೆ 7ನೇ ಪ್ರಕರಣದ ಮೇರೆಗೆ ರಚಿಸಿದ ಕಾರ್ಮಿಕ ನ್ಯಾಯಾಲಯ;

(ಕೆಕೆಕೆ) (ವ್ಯಾಕರಣ ವ್ಯತ್ಯಾಸಗಳು ಮತ್ತು ಏಕ ಮೂಲದ ಪದಾವಳಿಗಳೊಂದಿಗೆ) "ಹಂಗಾಮಿ ವಜಾ" ಎಂದರೆ ನಿಯೋಜಕನು, ಕಲ್ಲಿದ್ದಲು, ವಿದ್ಯುತ್ ಅಥವಾ ಕಚ್ಚಾ ಪದಾರ್ಥಗಳು ಅಥವಾ ದಾಸ್ತಾನು ಶೇಖರಣೆಯ ಕೊರತೆ ಅಥವಾ ಯಂತ್ರ ವಿಫಲತೆ ಅಥವಾ ನೈಸರ್ಗಿಕ ವಿಕೋಪದ ಕಾರಣದಿಂದ ಅಥವಾ ಯಾವುದೇ ಇತರ ಸಂಬಂಧಪಟ್ಟ ಕಾರಣಕ್ಕಾಗಿ ಅವನ ಕೈಗಾರಿಕಾ ಕಾರ್ಯಸಂಸ್ಥೆಯ ಹಾಜರಿಪಟ್ಟಿಯಲ್ಲಿ

ಹೆಸರು ಇರುವ ಮತ್ತು ಕೆಲಸದಿಂದ ತೆಗೆದುಹಾಕಿರದ ಕೆಲಸಗಾರನಿಗೆ ಉದ್ಯೋಗ ನೀಡಲು ತಪ್ಪುವುದು, ನಿರಾಕರಿಸುವುದು ಅಥವಾ ಅಸಮರ್ಥನಾಗಿರುವುದು.

**ವಿವರಣೆ:**- ಕೈಗಾರಿಕಾ ಕಾರ್ಯಸಂಸ್ಥೆಯ ಹಾಜರಿಪಟ್ಟಿಯಲ್ಲಿ ಹೆಸರು ಇರುವ ಮತ್ತು ಯಾವುದೇ ದಿವಸದಂದು ಸಾಮಾನ್ಯ ಕೆಲಸದ ವೇಳೆಯ ಅವಧಿಯಲ್ಲಿ ಕೆಲಸದ ಉದ್ದೇಶಕ್ಕಾಗಿ ಗೊತ್ತುಪಡಿಸಿದ ಸಮಯದಲ್ಲಿ ಸಂಸ್ಥೆಯಲ್ಲಿ ಕೆಲಸಕ್ಕೆ ಖುದ್ದಾಗಿ ಹಾಜರಾಗುವ ಪ್ರತಿಯೊಬ್ಬ ಕೆಲಸಗಾರನನ್ನು, ಅವನು ಹಾಗೆ ಖುದ್ದಾಗಿ ಹಾಜರಾದ ಎರಡು ಗಂಟೆಗಳೊಳಗೆ ನಿಯೋಜಕನು ಅವನಿಗೆ ಉದ್ಯೋಗವನ್ನು ಕೊಡದಿದ್ದರೆ ಈ ಖಂಡದ ಅರ್ಥವ್ಯಾಪ್ತಿಯಲ್ಲಿ ಆ ದಿವಸಕ್ಕೆ ಹಂಗಾಮಿ ವಜಾ ಮಾಡಲಾಗಿದೆಯೆಂದು ಭಾವಿಸತಕ್ಕುದು:

ಪರಂತು, ಕೆಲಸಗಾರನಿಗೆ ಯಾವುದೇ ದಿವಸದ ಯಾವುದೇ ಪಾಳಿಯ ಆರಂಭದಲ್ಲಿ ಉದ್ಯೋಗವನ್ನು ಕೊಡುವುದಕ್ಕೆ ಬದಲಾಗಿ, ಆ ದಿವಸದ ಪಾಳಿಯ ಉತ್ತರಾರ್ಧದ ಅವಧಿಯಲ್ಲಿ ಆ ಉದ್ದೇಶಕ್ಕಾಗಿ ಖುದ್ದಾಗಿ ಹಾಜರಾಗಲು ತಿಳಿಸಲಾಗಿದ್ದು ಅನಂತರ ಉದ್ಯೋಗವನ್ನು ಕೊಡಲಾಗಿದ್ದರೆ ಆಗ ಅವನನ್ನು ಆ ದಿವಸದಂದು ಅರ್ಧ ದಿವಸಕ್ಕೆ ಮಾತ್ರ ಹಂಗಾಮಿ ವಜಾ ಮಾಡಲಾಗಿತ್ತು ಎಂಬುದಾಗಿ ಭಾವಿಸತಕ್ಕುದು:

ಮತ್ತೂ ಪರಂತು, ಅವನು ಹಾಗೆ ಖುದ್ದಾಗಿ ಹಾಜರಾದ ತರುವಾಯವೂ ಯಾವುದೇ ಅಂಥ ಉದ್ಯೋಗವನ್ನು ಅವನಿಗೆ ಕೊಡದಿದ್ದರೆ, ಅವನನ್ನು ಆ ದಿವಸದ ಪಾಳಿಯ ಉತ್ತರಾರ್ಧಕ್ಕೆ ಹಂಗಾಮಿ ವಜಾ ಮಾಡಲಾಗಿದೆಯೆಂದು ಭಾವಿಸತಕ್ಕುದಲ್ಲ ಮತ್ತು ಅವನು ಆ ದಿವಸದ ಆ ಭಾಗಕ್ಕೆ ಪೂರ್ಣ ಮೂಲ ಮಜೂರಿಗಳು ಮತ್ತು ತುಟ್ಟಿಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕುದು;

(ಎಲ್) "ಬೀಗಮುದ್ರೆ" ಎಂದರೆ ನಿಯೋಜನೆಯ ಸ್ಥಳವನ್ನು ತಾತ್ಕಾಲಿಕವಾಗಿ ಮುಚ್ಚಿರುವುದು, ಅಥವಾ ಕೆಲಸವನ್ನು ನಿಲಂಬನಗೊಳಿಸುವುದು, ಅಥವಾ ನಿಯೋಜಕನು, ತಾನು ನಿಯೋಜಿಸಿಕೊಂಡ ಒಂದು ನಿರ್ದಿಷ್ಟ ಸಂಖ್ಯೆಯ ವ್ಯಕ್ತಿಗಳನ್ನು ಉದ್ಯೋಗದಲ್ಲಿ ಮುಂದುವರಿಸಲು ನಿರಾಕರಿಸುವುದು;

(ಎಲ್ಎ) "ಮುಖ್ಯ ಬಂದರು" ಎಂದರೆ ಭಾರತ ಬಂದರುಗಳ ಅಧಿನಿಯಮ, 1908 (1908ರ 15)ರ 3ನೇ ಪ್ರಕರಣದ (8)ನೇ ಖಂಡದಲ್ಲಿ ಪರಿಭಾಷಿಸಿರುವ ಮುಖ್ಯ ಬಂದರು;

(ಎಲ್ಬಿ) 'ಗಣಿ' ಎಂದರೆ ಗಣಿಗಳ ಅಧಿನಿಯಮ, 1952 (1952 ರ 35) ರ 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಜೆ) ಖಂಡದಲ್ಲಿ ಪರಿಭಾಷಿಸಿರುವ ಗಣಿ;

(ಎಲ್ಎಲ್) "ರಾಷ್ಟ್ರೀಯ ನ್ಯಾಯಾಧಿಕರಣ" ಎಂದರೆ 7ಬಿ ಪ್ರಕರಣದ ಮೇರೆಗೆ ರಚಿಸಿದ ರಾಷ್ಟ್ರೀಯ ಕೈಗಾರಿಕಾ ನ್ಯಾಯಾಧಿಕರಣ;

(ಎಲ್ಎಲ್ಎಲ್) ಕಾರ್ಮಿಕ ಸಂಘಕ್ಕೆ ಸಂಬಂಧಿಸಿದಂತೆ "ಪದಾಧಿಕಾರಿ" ಎಂಬುದು ಅದರ ಯಾವನೇ ಕಾರ್ಯಕಾರಿ ಸದಸ್ಯನನ್ನು ಒಳಗೊಳ್ಳುತ್ತದೆ, ಆದರೆ ಲೆಕ್ಕಪರಿಶೋಧಕನನ್ನು ಒಳಗೊಳ್ಳುವುದಿಲ್ಲ;

(ಎಂ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎನ್) "ಸಾರ್ವಜನಿಕ ಉಪಯೋಗ ಸೇವೆ" ಎಂದರೆ,-

(i) ಯಾವುದೇ ರೈಲ್ವೆ ಸೇವೆ ಅಥವಾ ವಾಯು ಮಾರ್ಗದ ಮೂಲಕ ಪ್ರಯಾಣಿಕರು ಅಥವಾ ಸರಕುಗಳನ್ನು ಸಾಗಿಸುವ ಯಾವುದೇ ಸಾರಿಗೆ ಸೇವೆ;

(iಎ) ಯಾವುದೇ ಮುಖ್ಯ ಬಂದರು ಅಥವಾ ಹಡಗು ಕಟ್ಟೆಯ ಯಾವುದೇ ಸೇವೆ ಅಥವಾ ಅದರ ಕೆಲಸಕ್ಕೆ ಸಂಬಂಧಿಸಿದ ಯಾವುದೇ ಸೇವೆ;

(ii) ಕೈಗಾರಿಕಾ ಕಾರ್ಯಸಂಸ್ಥೆಯ ಅಥವಾ ಅದರಲ್ಲಿ ನಿಯೋಜಿತರಾದ ಕೆಲಸಗಾರರ ಸುರಕ್ಷೆಯು ಕೈಗಾರಿಕಾ ಕಾರ್ಯಸಂಸ್ಥೆಯ ಯಾವ ಶಾಖೆಯ ಕಾರ್ಯನಿರ್ವಹಣೆಯನ್ನು ಆಧರಿಸಿರುವುದೋ ಆ ಯಾವುದೇ ಶಾಖೆ;

(iii) ಯಾವುದೇ ಅಂಚೆ, ತಂತಿ ಅಥವಾ ದೂರವಾಣಿ ಸೇವೆ;

(iv) ಸಾರ್ವಜನಿಕರಿಗೆ ವಿದ್ಯುತ್, ದೀಪ ಅಥವಾ ನೀರು ಸರಬರಾಜು ಮಾಡುವ ಯಾವುದೇ ಕೈಗಾರಿಕೆ;

(v) ಸಾರ್ವಜನಿಕ ನಿರ್ಮಲೀಕರಣ ಅಥವಾ ನೈರ್ಮಲ್ಯದ ಯಾವುದೇ ವ್ಯವಸ್ಥೆ;

(vi) ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮತ್ತು ಸಮುಚಿತ ಸರ್ಕಾರವು, ಸಾರ್ವಜನಿಕ ಜರೂರು ಪರಿಸ್ಥಿತಿ ಅಥವಾ ಸಾರ್ವಜನಿಕ ಹಿತಾಸಕ್ತಿಯು ಹಾಗೆ ಅಗತ್ಯಪಡಿಸುತ್ತದೆಂದು ಅದಕ್ಕೆ ಮನದಟ್ಟಾದರೆ, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಈ ಅಧಿನಿಯಮದ ಉದ್ದೇಶಕ್ಕಾಗಿ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಾಗಿ ಸಾರ್ವಜನಿಕ ಉಪಯೋಗ ಸೇವೆ ಎಂಬುದಾಗಿ ಘೋಷಿಸಬಹುದಾದ ಯಾವುದೇ ಕೈಗಾರಿಕೆ:

ಪರಂತು, ಹಾಗೆ ನಿರ್ದಿಷ್ಟಪಡಿಸಲಾದ ಅವಧಿಯು ಮೊದಲಲ್ಲಿ ಆರು ತಿಂಗಳುಗಳನ್ನು ಮೀರತಕ್ಕುದಲ್ಲ ಆದರೆ, ಸಾರ್ವಜನಿಕ ಜರೂರು ಪರಿಸ್ಥಿತಿ ಅಥವಾ ಸಾರ್ವಜನಿಕ ಹಿತಾಸಕ್ತಿಯು ಅಂಥ ವಿಸ್ತರಣೆಯನ್ನು ಅಗತ್ಯಪಡಿಸುವುದೆಂದು ಸಮುಚಿತ ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಯಾವುದೇ ಒಂದು ಸಮಯದಲ್ಲಿ ಆರು ತಿಂಗಳುಗಳನ್ನು ಮೀರದ ಯಾವುದೇ ಅವಧಿಯವರೆಗೆ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಅದನ್ನು ಕಾಲಕಾಲಕ್ಕೆ ವಿಸ್ತರಿಸಬಹುದು;

(ಒ) "ರೈಲ್ವೆ ಕಂಪನಿ" ಎಂದರೆ ಭಾರತ ರೈಲ್ವೆ ಅಧಿನಿಯಮ, 1890 (1890ರ 9) ರ 3ನೇ ಪ್ರಕರಣದಲ್ಲಿ ಪರಿಭಾಷಿಸಿರುವ ರೈಲ್ವೆ ಕಂಪನಿ;

(ಒಒ) "ಕೆಲಸದಿಂದ ತೆಗೆದುಹಾಕುವುದು" ಎಂದರೆ ಶಿಸ್ತು ಕ್ರಮದ ರೂಪದಲ್ಲಿ ವಿಧಿಸಿದ ಶಿಕ್ಷೆಯ ಹೊರತು, ಯಾವುದೇ ಕಾರಣಕ್ಕಾಗಿ ನಿಯೋಜಕನು ಕೆಲಸಗಾರನ ಸೇವೆಯನ್ನು ಮುಕ್ತಾಯಗೊಳಿಸುವುದು, ಆದರೆ, ಅದರಲ್ಲಿ,–

(ಎ) ಕೆಲಸಗಾರನ ಸ್ವಯಿಚ್ಛಾ ನಿವೃತ್ತಿ; ಅಥವಾ

(ಬಿ) ಸಂಬಂಧಿಸಿದ ನಿಯೋಜಕ ಮತ್ತು ಕೆಲಸಗಾರನ ನಡುವಣ ನಿಯೋಜನೆಯ ಕರಾರಿನಲ್ಲಿ ನಿವೃತ್ತಿ ವಯಸ್ಸಿಗೆ ಸಂಬಂಧಿಸಿದ ಗೊತ್ತುಪಾಡು ಇದ್ದಲ್ಲಿ, ಆ ವಯಸ್ಸು ತಲುಪಿದಾಗ ಕೆಲಸಗಾರನ ನಿವೃತ್ತಿ; ಅಥವಾ

(ಬಿಬಿ) ಸಂಬಂಧಿಸಿದ ನಿಯೋಜಕ ಮತ್ತು ಕೆಲಸಗಾರನ ನಡುವಣ ನಿಯೋಜನೆಯ ಕರಾರನ್ನು ಅದು ಮುಗಿದ ನಂತರ ನವೀಕರಿಸದ ಅಥವಾ ಅದರಲ್ಲಿ ಈ ಬಗ್ಗೆ ಇರುವ ಗೊತ್ತುಪಾಡಿನ ಮೇರೆಗೆ ಕರಾರನ್ನು ಮುಕ್ತಾಯಗೊಳಿಸಿದ್ದರ ಪರಿಣಾಮವಾಗಿ ಕೆಲಸಗಾರನ ಸೇವೆಯನ್ನು ಮುಕ್ತಾಯಗೊಳಿಸುವುದು; ಅಥವಾ

(ಸಿ) ನಿರಂತರ ಅನಾರೋಗ್ಯದ ಕಾರಣದ ಮೇಲೆ ಕೆಲಸಗಾರನ ಸೇವೆಯನ್ನು ಮುಕ್ತಾಯಗೊಳಿಸುವುದು,

–ಒಳಗೊಳ್ಳುವುದಿಲ್ಲ.

(ಪಿ) "ಒಪ್ಪಂದ" ಎಂದರೆ ಸಂಧಾನ ವ್ಯವಹರಣೆಯ ಕ್ರಮದಲ್ಲಿ ಮಾಡಿಕೊಂಡ ಒಪ್ಪಂದ ಮತ್ತು ಸಂಧಾನ ವ್ಯವಹರಣೆಯ ಕ್ರಮದಲ್ಲಿ ಅಂಥ ಒಪ್ಪಂದಕ್ಕೆ ಅದರ ಪಕ್ಷಕಾರರು ನಿಯಮಿಸಬಹುದಾದಂಥ ವಿಧಾನದಲ್ಲಿ ಸಹಿಯನ್ನು ಮಾಡಿದ್ದು ಮತ್ತು ಅದರ ಪ್ರತಿಯನ್ನು ಈ ಬಗ್ಗೆ ಸಮುಚಿತ ಸರ್ಕಾರ ಮತ್ತು

ಸಂಧಾನಾಧಿಕಾರಿಯು ಅಧಿಕಾರ ನೀಡಿದ ಒಬ್ಬ ಅಧಿಕಾರಿಗೆ ಕಳುಹಿಸಿದ್ದು ನಿಯೋಜಕ ಮತ್ತು ಕೆಲಸಗಾರನ ನಡುವೆ ಅನ್ಯಥಾ ಆದ ಲಿಖಿತ ಒಪ್ಪಂದವು ಒಳಗೊಳ್ಳುತ್ತದೆ.

(ಕ್ಯೂ) "ಮುಷ್ಕರ" ಎಂದರೆ ಯಾವುದೇ ಕೈಗಾರಿಕೆಯಲ್ಲಿ ನಿಯೋಜಿತರಾದ ವ್ಯಕ್ತಿಗಳ ಸಮುದಾಯವು ಸಂಯುಕ್ತವಾಗಿ ವರ್ತಿಸುವ ಮೂಲಕ ಅಥವಾ ಏಕೋದ್ದೇಶದ ನಿರಾಕರಣೆ ಮೂಲಕ ಅಥವಾ ಹಾಗೆ ನಿಯೋಜಿತರಾಗಿರುವ ಅಥವಾ ನಿಯೋಜನೆಯನ್ನು ಮಾಡಿಕೊಳ್ಳಲಾಗಿರುವ ಎಷ್ಟೇ ಸಂಖ್ಯೆ ವ್ಯಕ್ತಿಗಳು, ಕೆಲಸವನ್ನು ಮುಂದುವರೆಸಲು ಅಥವಾ ನಿಯೋಜನೆಯನ್ನು ಒಪ್ಪಿಕೊಳ್ಳಲು ಒಮ್ಮನಸ್ಸಿನ ನಿರಾಕರಣೆ ಮೂಲಕ ಕೆಲಸವನ್ನು ನಿಲ್ಲಿಸುವುದು;

(ಕ್ಯೂಕ್ಯೂ) "ಕಾರ್ಮಿಕಸಂಘ" ಎಂದರೆ ಕಾರ್ಮಿಕಸಂಘಗಳ ಅಧಿನಿಯಮ, 1926 (1926ರ 16)ರ ಮೇರೆಗೆ ನೋಂದಾಯಿತವಾದ ಕಾರ್ಮಿಕ ಸಂಘ;

(ಆರ್) "ನ್ಯಾಯ ಮಂಡಲಿ" ಎಂದರೆ 7ಎ ಪ್ರಕರಣದ ಮೇರೆಗೆ ರಚಿಸಿದ ಒಂದು ಕೈಗಾರಿಕಾ ನ್ಯಾಯಾಧಿಕರಣ ಮಂಡಲಿ ಮತ್ತು ಅದು ಈ ಅಧಿನಿಯಮದ ಮೇರೆಗೆ, 1957ರ ಮಾರ್ಚ್ 10ನೇ ದಿವಸಕ್ಕೆ ಮುಂಚೆ ರಚಿಸಿದ ಕೈಗಾರಿಕಾ ನ್ಯಾಯ ಮಂಡಲಿಯನ್ನು ಒಳಗೊಳ್ಳುತ್ತದೆ.

(ಆರ್‌ಎ) "ಅನುಚಿತ ಕಾರ್ಮಿಕ ಅಭ್ಯಾಸ" ಎಂದರೆ 5ನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಭ್ಯಾಸಗಳಲ್ಲಿ ಯಾವೊಂದು ಅಭ್ಯಾಸ;

(ಆರ್‌ಬಿ) "ಗ್ರಾಮ ಕೈಗಾರಿಕೆಗಳು" ಎಂಬುದು ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗ ಅಧಿನಿಯಮ, 1956 (1956ರ 61) ರ 2ನೇ ಪ್ರಕರಣದ (ಎಚ್) ಖಂಡದಲ್ಲಿ ಅದಕ್ಕೆ ನೀಡಿರುವಂತಹ ಅರ್ಥವನ್ನೇ ಹೊಂದಿರುತ್ತದೆ;

(ಆರ್‌ಆರ್) "ಮಜೂರಿಗಳು" ಎಂದರೆ, ವ್ಯಕ್ತವಾದ ಅಥವಾ ಇಂಗಿತವಾದ ನಿಯೋಜನೆಯ ನಿಬಂಧನೆಗಳನ್ನು ಈಡೇರಿಸಲಾಗಿದ್ದರೆ, ಕೆಲಸಗಾರನಿಗೆ ಅವನ ನಿಯೋಜನೆಗೆ ಅಥವಾ ಅಂಥ ನಿಯೋಜನೆಯಲ್ಲಿ ಮಾಡಲಾದ ಕೆಲಸದ ಸಂಬಂಧವಾಗಿ ಸಂದಾಯ ಮಾಡಬಹುದಾದ ಹಣದ ರೂಪದಲ್ಲಿ ವ್ಯಕ್ತಪಡಿಸಬಹುದಾದ ಎಲ್ಲ ಪರಿಶ್ರಮಧನ, ಮತ್ತು ಅದು–

(i) ಕೆಲಸಗಾರನು ತತ್ಕಾಲದಲ್ಲಿ ಹಕ್ಕು ಹೊಂದಿರುವ (ತುಟ್ಟಿಭತ್ಯವೂ ಸೇರಿದಂತೆ) ಅಂಥ ಭತ್ಯೆಗಳು;

(ii) ಯಾವುದೇ ಗೃಹಸೌಲಭ್ಯ ಅಥವಾ ವಿದ್ಯುಚ್ಛಕ್ತಿ, ನೀರು, ವೈದ್ಯಕೀಯ ಉಪಚಾರ ಅಥವಾ ಇತರ ಸೌಲಭ್ಯಗಳ ಅಥವಾ ಯಾವುದೇ ಸೇವೆಯ ಅಥವಾ ಯಾವುದೇ ಆಹಾರ ಧಾನ್ಯಗಳು ಅಥವಾ ಇತರ ವಸ್ತುಗಳ ರಿಯಾಯಿತಿ ಪೂರೈಕೆಯ ಮೌಲ್ಯ;

(iii) ಯಾವುದೇ ಪ್ರಯಾಣ ರಿಯಾಯಿತಿ;

(iv) ಮಾರಾಟಗಳು ಅಥವಾ ವ್ಯಾಪಾರ ಅಥವಾ ಅವೆರಡರ ಪ್ರವರ್ಧನೆಗಾಗಿ ಸಂದಾಯವಾಗತಕ್ಕ ಯಾವುದೇ ಕಮಿಷನ್

– ಇವುಗಳನ್ನು ಒಳಗೊಳ್ಳುತ್ತದೆ, ಆದರೆ ಅದರಲ್ಲಿ–

(ಎ) ಯಾವುದೇ ಬೋನಸ್ಸು;

(ಬಿ) ನಿಯೋಜಕನು ಯಾವುದೇ ವಿಶ್ರಾಂತಿ ವೇತನ ನಿಧಿ ಅಥವಾ ಭವಿಷ್ಯ ನಿಧಿಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಕೆಲಸಗಾರನ ಸೌಲಭ್ಯಕ್ಕಾಗಿ ಸಂದಾಯ ಮಾಡಿದ ಅಥವಾ ಸಂದಾಯ ಮಾಡಬಹುದಾದ ಯಾವುದೇ ವಂತಿಗೆ;

(ಸಿ) ಅವನ ಸೇವೆಯನ್ನು ಮುಕ್ತಾಯಗೊಳಿಸಿದ ನಂತರ ಸಂದಾಯವಾಗತಕ್ಕ ಯಾವುದೇ ಉಪದಾನ

– ಇವು ಒಳಗೊಳ್ಳುವುದಿಲ್ಲ.

(ಎಸ್) "ಕೆಲಸಗಾರ" ಎಂದರೆ ನಿಯೋಜನೆಯ ನಿಬಂಧನೆಗಳು ವ್ಯಕ್ತವಾಗಿರಲಿ ಅಥವಾ ಇಂಗಿತವಾಗಿರಲಿ ಮಜೂರಿ ಅಥವಾ ಪರಿಶ್ರಮ ಧನಕ್ಕಾಗಿ ಯಾವುದೇ ದೈಹಿಕ, ಅಕುಶಲ, ಕುಶಲ, ತಾಂತ್ರಿಕ, ನಿರ್ವಹಣಾ, ಲಿಪಿಕ ಅಥವಾ ಮೇಲ್ವಿಚಾರಣಾ ಕೆಲಸವನ್ನು ಮಾಡಲು ಯಾವುದೇ ಉದ್ಯಮದಲ್ಲಿ ನಿಯೋಜಿತನಾದ (ಅಪ್ರೆಂಟೀಸ್ ಸೇರಿ) ಯಾವನೇ ವ್ಯಕ್ತಿ, ಮತ್ತು ಕೈಗಾರಿಕಾ ವಿವಾದದ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯ ಉದ್ದೇಶಕ್ಕಾಗಿ, ಆ ವಿವಾದದ ಸಂಬಂಧವಾಗಿ ಅಥವಾ ಪರಿಣಾಮವಾಗಿ ವಜಾ ಮಾಡಲಾಗಿರುವ, ಬಿಡುಗಡೆ ಮಾಡಲಾಗಿರುವ ಅಥವಾ ತೆಗೆದುಹಾಕಲಾಗಿರುವ ಅಥವಾ ಯಾರ ವಜಾ, ಬಿಡುಗಡೆ ಅಥವಾ ತೆಗೆದು ಹಾಕುವಿಕೆಯು ಆ ವಿವಾದಕ್ಕೆ ಕಾರಣವಾಗಿರುವಲ್ಲಿ ಯಾವನೇ ಅಂಥ ವ್ಯಕ್ತಿಯು ಒಳಗೊಳ್ಳುತ್ತಾನೆ, ಆದರೆ ಅದರಲ್ಲಿ–

(i) ವಾಯುಬಲ ಅಧಿನಿಯಮ, 1950 (1950ರ 45) ಅಥವಾ ಸೇನಾ ಅಧಿನಿಯಮ, 1950 (1950ರ 46) ಅಥವಾ ನೌಕಾಸೇನಾ ಅಧಿನಿಯಮ, 1957 (1957ರ 62) ಕ್ಕೆ ಒಳಪಟ್ಟಿರುವ; ಅಥವಾ

(ii) ಪೊಲೀಸ್ ಸೇವೆಯಲ್ಲಿ ನಿಯೋಜಿತನಾಗಿರುವ ಅಥವಾ ಕಾರಾಗೃಹದ ಅಧಿಕಾರಿಯಾಗಿ ಅಥವಾ ಇತರ ನೌಕರನಾಗಿ ನಿಯೋಜಿತನಾಗಿರುವ; ಅಥವಾ

(iii) ಮುಖ್ಯವಾಗಿ ವ್ಯವಸ್ಥಾಪನಾ ಮತ್ತು ಆಡಳಿತ ಸಾಮರ್ಥ್ಯದಲ್ಲಿ ನಿಯೋಜಿತನಾಗಿರುವ; ಅಥವಾ

(iv) ಮೇಲ್ವಿಚಾರಣಾ ಸಾಮರ್ಥ್ಯದಲ್ಲಿ ನಿಯೋಜಿತನಾಗಿದ್ದು ಪ್ರತಿ ತಿಂಗಳಿಗೆ ಒಂದು ಸಾವಿರದ ಆರು ನೂರು ರೂಪಾಯಿಗಳನ್ನು ಮೀರುವ ಸಂಬಳವನ್ನು ಪಡೆಯುತ್ತಿರುವ ಮತ್ತು ಅದು ಒಳಗೊಂಡಿರುವ ಕರ್ತವ್ಯಗಳ ಸ್ವರೂಪದಿಂದಾಗಲಿ ಅಥವಾ ಅವನಲ್ಲಿ ನಿಹಿತಗೊಂಡಿರುವ ಅಧಿಕಾರಗಳ ಕಾರಣದಿಂದಾಗಲಿ ಮುಖ್ಯವಾಗಿ ವ್ಯವಸ್ಥಾಪನಾ ಸ್ವರೂಪದ ಪ್ರಕಾರ್ಯಗಳನ್ನು ನಿರ್ವಹಿಸುವ–

– ಯಾವನೇ ಅಂಥ ವ್ಯಕ್ತಿಯು ಒಳಗೊಳ್ಳುವುದಿಲ್ಲ.

2ಎ. ಕೆಲಸಗಾರನ ವಜಾ, ಇತ್ಯಾದಿಯನ್ನು ಕೈಗಾರಿಕಾ ವಿವಾದವೆಂದು ಭಾವಿಸುವುದು:– ಯಾವನೇ ನಿಯೋಜಕನು ಕೆಲಸಗಾರನ ಸೇವೆಯನ್ನು ವಿಮುಕ್ತಗೊಳಿಸಿರುವಲ್ಲಿ, ವಜಾ ಮಾಡಿರುವಲ್ಲಿ, ಸೇವೆಯಿಂದ ತೆಗೆದು ಹಾಕಿರುವಲ್ಲಿ ಅಥವಾ ಅನ್ಯಥಾ ಅವನ ಸೇವೆಯನ್ನು ಕೊನೆಗೊಳಿಸಿರುವಲ್ಲಿ, ಅಂಥ ವಿಮುಕ್ತಗೊಳಿಸುವಿಕೆ, ವಜಾ ಮಾಡುವಿಕೆ, ಸೇವೆಯಿಂದ ತೆಗೆದು ಹಾಕುವಿಕೆ ಅಥವಾ ಸೇವೆಯನ್ನು ಕೊನೆಗೊಳಿಸುವಿಕೆಗೆ ಸಂಬಂಧಿಸಿದ ಅಥವಾ ಆ ಮೂಲಕ ಉದ್ಭವಿಸುವ ಆ ಕೆಲಸಗಾರ ಮತ್ತು ನಿಯೋಜಕನ ನಡುವಣ ಯಾವುದೇ ವಿವಾದ ಅಥವಾ ಭಿನ್ನಾಭಿಪ್ರಾಯವನ್ನು, ಆ ವಿವಾದಕ್ಕೆ ಯಾವನೇ ಇತರ ಕೆಲಸಗಾರನು ಅಥವಾ ಕೆಲಸಗಾರರ ಯಾವುದೇ ಸಂಘವು ಪಕ್ಷಕಾರನಾಗಿಲ್ಲದಿದ್ದಾಗ್ಯೂ ಕೈಗಾರಿಕಾ ವಿವಾದ ಎಂಬುದಾಗಿ ಭಾವಿಸತಕ್ಕುದು.

## ಅಧ್ಯಾಯ – II

## ಈ ಅಧಿನಿಯಮದ ಮೇರೆಗಿನ ಪ್ರಾಧಿಕಾರಗಳು

3. **ಕಾರ್ಯಸಮಿತಿ.**– (1) ಹಿಂದಿನ ಹನ್ನೆರಡು ತಿಂಗಳುಗಳಲ್ಲಿ ಯಾವುದೇ ದಿನದಂದು ಒಂದು ನೂರು ಅಥವಾ ಹೆಚ್ಚು ಕೆಲಸಗಾರರನ್ನು ನಿಯೋಜಿಸಿಕೊಂಡಿರುವ, ಯಾವುದೇ ಕೈಗಾರಿಕಾ ಕಾರ್ಯಸಂಸ್ಥೆಯ ಸಂದರ್ಭದಲ್ಲಿ, ಸಮುಚಿತ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿಯೋಜಕನ ಮತ್ತು ಸಂಸ್ಥೆಯ ಕೆಲಸದಲ್ಲಿ ತೊಡಗಿರುವ ಕೆಲಸಗಾರರ ಪ್ರತಿನಿಧಿಗಳನ್ನು ಒಳಗೊಂಡಿರುವ ಒಂದು ಕಾರ್ಯ ಸಮಿತಿಯನ್ನು ನಿಯಮಿಸಲಾದ ರೀತಿಯಲ್ಲಿ ರಚಿಸುವಂತೆ ನಿಯೋಜಕನನ್ನು ಅಗತ್ಯಪಡಿಸಬಹುದು, ಆದರೆ ಸಮಿತಿಯಲ್ಲಿನ ಕೆಲಸಗಾರರ ಪ್ರತಿನಿಧಿಗಳ ಸಂಖ್ಯೆಯು ನಿಯೋಜಕನ ಪ್ರತಿನಿಧಿಗಳ ಸಂಖ್ಯೆಗಿಂತ ಕಡಿಮೆ ಇರತಕ್ಕುದಲ್ಲ. ಕೆಲಸಗಾರರ ಪ್ರತಿನಿಧಿಗಳನ್ನು, ಸಂಸ್ಥೆಯ ಕೆಲಸದಲ್ಲಿ ತೊಡಗಿರುವ ಕೆಲಸಗಾರರ ಪೈಕಿಯಿಂದ ಮತ್ತು ಭಾರತ ಕಾರ್ಮಿಕ ಸಂಘಗಳ ಅಧಿನಿಯಮ, 1926

(1926ರ 16) ರ ಮೇರೆಗೆ ನೋಂದಾಯಿತವಾದ ಕಾರ್ಮಿಕ ಸಂಘ ಯಾವುದಾದರೂ ಇದ್ದರೆ, ಅದರೊಂದಿಗೆ ಸಮಾಲೋಚಿಸಿ ಆಯ್ಕೆ ಮಾಡತಕ್ಕುದು.

(2) ನಿಯೋಜಕನ ಮತ್ತು ಕೆಲಸಗಾರರ ನಡುವೆ ಸೌಹಾರ್ದತೆ ಮತ್ತು ಒಳ್ಳೆಯ ಸಂಬಂಧವನ್ನು ಸುನಿಶ್ಚಿತಗೊಳಿಸುವುದು ಮತ್ತು ಕಾಪಾಡಿಕೊಂಡು ಬರುವುದಕ್ಕಾಗಿ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಆ ಉದ್ದೇಶಕ್ಕಾಗಿ ಅವರ ಪರಸ್ಪರ ಹಿತಾಸಕ್ತಿ ಅಥವಾ ಸಂಬಂಧದ ವಿಷಯಗಳನ್ನು ಕುರಿತು ವಿಮರ್ಶಿಸುವುದು ಮತ್ತು ಅಂಥ ವಿಷಯಗಳ ಸಂಬಂಧದಲ್ಲಿ ಯಾವುದೇ ಮುಖ್ಯ ಭಿನ್ನಾಭಿಪ್ರಾಯದ ವಿಷಯದಲ್ಲಿ ರಾಜಿ ಮಾಡಿಸಲು ಪ್ರಯತ್ನಿಸುವುದು ಕಾರ್ಯ ಸಮಿತಿಯ ಕರ್ತವ್ಯವಾಗಿರತಕ್ಕುದು.

4. **ಸಂಧಾನಾಧಿಕಾರಿಗಳು.**- (1) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ವ್ಯಕ್ತಿಗಳನ್ನು, ಕೈಗಾರಿಕಾ ವಿವಾದಗಳಲ್ಲಿ ಮಧ್ಯಸ್ಥಿಕೆ ವಹಿಸಿ ಅವುಗಳನ್ನು ಇತ್ಯರ್ಥಗೊಳಿಸುವ ಕರ್ತವ್ಯದ ಪ್ರಭಾರ ಹೊಂದಿರುವ ಸಂಧಾನಾಧಿಕಾರಿಗಳನ್ನಾಗಿ ನೇಮಕ ಮಾಡಬಹುದು.

(2) ಸಂಧಾನಾಧಿಕಾರಿಯನ್ನು, ನಿರ್ದಿಷ್ಟ ಪ್ರದೇಶಕ್ಕಾಗಿ ಅಥವಾ ನಿರ್ದಿಷ್ಟ ಪ್ರದೇಶದಲ್ಲಿರುವ ನಿರ್ದಿಷ್ಟ ಕೈಗಾರಿಕೆಗಳಿಗಾಗಿ ಅಥವಾ ಒಂದು ಅಥವಾ ಹೆಚ್ಚು ನಿರ್ದಿಷ್ಟ ಕೈಗಾರಿಕೆಗಳಿಗಾಗಿ ಮತ್ತು ಖಾಯಂ ಆಗಿ ಆಗಲಿ ಅಥವಾ ಸೀಮಿತ ಅವಧಿಗಾಗಿ ಆಗಲಿ ನೇಮಕ ಮಾಡಬಹುದು.

5. **ಸಂಧಾನ ಮಂಡಲಿಗಳು.**- (1) ಸಮುಚಿತ ಸರ್ಕಾರವು, ಸಂದರ್ಭವು ಉದ್ಭವಿಸಿದರೆ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಕೈಗಾರಿಕಾ ವಿವಾದವನ್ನು ಇತ್ಯರ್ಥಗೊಳಿಸುವುದಕ್ಕಾಗಿ ಸಂಧಾನ ಮಂಡಲಿಯನ್ನು ರಚಿಸಬಹುದು.

(2) ಮಂಡಲಿಯು ಒಬ್ಬ ಅಧ್ಯಕ್ಷನನ್ನು ಮತ್ತು ಸಮುಚಿತ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂತೆ ಇಬ್ಬರು ಅಥವಾ ನಾಲ್ವರು ಇತರ ಸದಸ್ಯರನ್ನು ಒಳಗೊಂಡಿರತಕ್ಕುದು.

(3) ಅಧ್ಯಕ್ಷನು ಸ್ವತಂತ್ರ ವ್ಯಕ್ತಿಯಾಗಿರತಕ್ಕುದು ಮತ್ತು ಇತರ ಸದಸ್ಯರು, ವಿವಾದದ ಪಕ್ಷಕಾರರನ್ನು ಪ್ರತಿನಿಧಿಸಲು ಸಮಾನ ಸಂಖ್ಯೆಯಲ್ಲಿ ನೇಮಕಗೊಂಡ ವ್ಯಕ್ತಿಗಳಾಗಿರತಕ್ಕುದು ಮತ್ತು ಒಬ್ಬ ಪಕ್ಷಕಾರನನ್ನು ಪ್ರತಿನಿಧಿಸಲು ನೇಮಕಗೊಳ್ಳುವ ಯಾವನೇ ವ್ಯಕ್ತಿಯನ್ನು ಆ ಪಕ್ಷಕಾರನ ಶಿಫಾರಸಿನ ಮೇಲೆ ನೇಮಕ ಮಾಡತಕ್ಕುದು:

ಪರಂತು, ಯಾವನೇ ಪಕ್ಷಕಾರನು ನಿಯಮಿಸಲಾದ ಕಾಲದಲ್ಲಿ ಮೇಲೆ ಹೇಳಿದಂತೆ ಶಿಫಾರಸು ಮಾಡಲು ತಪ್ಪಿದರೆ, ಸಮುಚಿತ ಸರ್ಕಾರವು, ಆ ಪಕ್ಷಕಾರನನ್ನು ಪ್ರತಿನಿಧಿಸಲು ತಾನು ಸೂಕ್ತವೆಂದು ಭಾವಿಸುವಂಥ ವ್ಯಕ್ತಿಗಳನ್ನು ನೇಮಕ ಮಾಡತಕ್ಕುದು.

(4) ನಿಯಮಿಸಿದ ಕೋರಂ ಹೊಂದಿರುವ ಮಂಡಲಿಯು, ಅಧ್ಯಕ್ಷ ಅಥವಾ ಅದರ ಸದಸ್ಯರಲ್ಲಿ ಯಾರೊಬ್ಬರು ಗೈರುಹಾಜರಾಗಿದ್ದರೂ ಅಥವಾ ಅದರ ಸಂಖ್ಯೆಯಲ್ಲಿ ಯಾವುದೇ ಸ್ಥಾನ ಖಾಲಿ ಇದ್ದರೂ ಕಾರ್ಯವನ್ನು ನಿರ್ವಹಿಸಬಹುದು:

ಪರಂತು, ಸಮುಚಿತ ಸರ್ಕಾರವು, ಅಧ್ಯಕ್ಷ ಅಥವಾ ಇತರ ಯಾವನೇ ಸದಸ್ಯನ ಸೇವೆಯು ಲಭ್ಯವಿಲ್ಲವೆಂದು ಮಂಡಲಿಗೆ ಅಧಿಸೂಚಿಸಿದರೆ, ಮಂಡಲಿಯು, ಸಂದರ್ಭಾನುಸಾರ, ಹೊಸ ಅಧ್ಯಕ್ಷ ಅಥವಾ ಸದಸ್ಯನನ್ನು ನೇಮಕ ಮಾಡುವವರೆಗೆ ಕಾರ್ಯವನ್ನು ನಿರ್ವಹಿಸತಕ್ಕುದಲ್ಲ.

6. **ವಿಚಾರಣಾ ನ್ಯಾಯಾಲಯಗಳು.**- (1) ಸಮುಚಿತ ಸರ್ಕಾರವು, ಸಂದರ್ಭವು ಉದ್ಭವಿಸಿದರೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದುದೆಂದು ಅಥವಾ ಅದಕ್ಕೆ ಸುಸಂಗತವಾಗಿದೆಯೆಂದು ಕಂಡುಬರುವ ಯಾವುದೇ ವಿಷಯದ ಬಗ್ಗೆ ವಿಚಾರಣೆಯನ್ನು ನಡೆಸಲು ವಿಚಾರಣಾ ನ್ಯಾಯಾಲಯವನ್ನು ರಚಿಸಬಹುದು.

(2) ನ್ಯಾಯಾಲಯವು, ಒಬ್ಬ ಸ್ವತಂತ್ರ ವ್ಯಕ್ತಿಯನ್ನು ಅಥವಾ ಸಮುಚಿತ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಷ್ಟು ಸ್ವತಂತ್ರ ವ್ಯಕ್ತಿಗಳನ್ನು ಒಳಗೊಂಡಿರಬಹುದು ಮತ್ತು ನ್ಯಾಯಾಲಯವು ಇಬ್ಬರು ಅಥವಾ ಹೆಚ್ಚು ಸದಸ್ಯರನ್ನು ಒಳಗೊಂಡಿರುವಲ್ಲಿ, ಅವರಲ್ಲಿ ಒಬ್ಬನನ್ನು ಅಧ್ಯಕ್ಷನನ್ನಾಗಿ ನೇಮಕ ಮಾಡತಕ್ಕುದು.

(3) ನಿಯಮಿಸಿದ ಕೋರಂ ಹೊಂದಿರುವ ನ್ಯಾಯಾಲಯವು, ಅಧ್ಯಕ್ಷ ಅಥವಾ ಅದರ ಸದಸ್ಯರಲ್ಲಿ ಯಾರೊಬ್ಬರು ಗೈರು ಹಾಜರಾಗಿದ್ದರೂ ಅಥವಾ ಅದರ ಸಂಖ್ಯೆಯಲ್ಲಿ ಯಾವುದೇ ಸ್ಥಾನ ಖಾಲಿ ಇದ್ದರೂ ಕಾರ್ಯವನ್ನು ನಿರ್ವಹಿಸಬಹುದು:

ಪರಂತು, ಸಮುಚಿತ ಸರ್ಕಾರವು ಅಧ್ಯಕ್ಷನ ಸೇವೆಯು ಲಭ್ಯವಿಲ್ಲವೆಂದು ನ್ಯಾಯಾಲಯಕ್ಕೆ ಅಧಿಸೂಚಿಸಿದರೆ, ನ್ಯಾಯಾಲಯವು, ಹೊಸ ಅಧ್ಯಕ್ಷನನ್ನು ನೇಮಕ ಮಾಡುವವರೆಗೆ ಕಾರ್ಯವನ್ನು ನಿರ್ವಹಿಸತಕ್ಕುದಲ್ಲ.

7. **ಕಾರ್ಮಿಕ ನ್ಯಾಯಾಲಯಗಳು.**- (1) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದ ಕೈಗಾರಿಕಾ ವಿವಾದಗಳ ನ್ಯಾಯ ನಿರ್ಣಯಕ್ಕಾಗಿ ಮತ್ತು ಈ ಅಧಿನಿಯಮದ ಮೇರೆಗೆ ಅವುಗಳಿಗೆ ವಹಿಸಿಕೊಡಬಹುದಾದಂಥ ಇತರ ಪ್ರಕಾರ್ಯಗಳ ನಿರ್ವಹಣೆಗಾಗಿ ಒಂದು ಅಥವಾ ಹೆಚ್ಚು ಕಾರ್ಮಿಕ ನ್ಯಾಯಾಲಯಗಳನ್ನು ರಚಿಸಬಹುದು.

(2) ಕಾರ್ಮಿಕ ನ್ಯಾಯಾಲಯವು, ಸಮುಚಿತ ಸರ್ಕಾರವು ನೇಮಕ ಮಾಡತಕ್ಕ ಒಬ್ಬ ವ್ಯಕ್ತಿಯನ್ನು ಮಾತ್ರ ಒಳಗೊಂಡಿರತಕ್ಕುದು.

(3) ಒಬ್ಬ ವ್ಯಕ್ತಿಯು,-

(ಎ) ಅವನು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ಹೊರತು; ಅಥವಾ

(ಬಿ) ಅವನು ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಗೆ ಜಿಲ್ಲಾ ನ್ಯಾಯಾಧೀಶ ಅಥವಾ ಅಡಿಷನಲ್ ಜಿಲ್ಲಾ ನ್ಯಾಯಾಧೀಶನಾಗಿದ್ದ ಹೊರತು; ಅಥವಾ

(ಸಿ) * * *

(ಡಿ) ಅವನು ಏಳು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗೆ ಭಾರತದಲ್ಲಿ ಯಾವುದೇ ನ್ಯಾಯಿಕ ಪದವನ್ನು ಹೊಂದಿದ್ದ ಹೊರತು; ಅಥವಾ

(ಇ) ಇವನು ಯಾವುದೇ ಪ್ರಾಂತೀಯ ಅಧಿನಿಯಮ ಅಥವಾ ರಾಜ್ಯ ಅಧಿನಿಯಮದ ಮೇರೆಗೆ ರಚಿಸಿದ ಕಾರ್ಮಿಕ ನ್ಯಾಯಾಲಯದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗೆ ಅಧ್ಯಕ್ಷಾಧಿಕಾರಿಯಾಗಿದ್ದ ಹೊರತು

- ಕಾರ್ಮಿಕ ನ್ಯಾಯಾಲಯದ ಅಧ್ಯಕ್ಷಾಧಿಕಾರಿಯಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕುದಲ್ಲ.

7ಎ. **ನ್ಯಾಯಾಧಿಕರಣಗಳು.**- (1) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಎರಡನೇ ಅನುಸೂಚಿಯಲ್ಲಾಗಲಿ ಅಥವಾ ಮೂರನೇ ಅನುಸೂಚಿಯಲ್ಲಾಗಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದ ಕೈಗಾರಿಕಾ ವಿವಾದಗಳ ನ್ಯಾಯ ನಿರ್ಣಯಕ್ಕಾಗಿ ಮತ್ತು ಈ ಅಧಿನಿಯಮದ ಮೇರೆಗೆ ಅವುಗಳಿಗೆ ವಹಿಸಬಹುದಾದಂಥ ಇತರ ಪ್ರಕಾರ್ಯಗಳ ನಿರ್ವಹಣೆಗಾಗಿ ಒಂದು ಅಥವಾ ಹೆಚ್ಚು ಕೈಗಾರಿಕಾ ನ್ಯಾಯಾಧಿಕರಣಗಳನ್ನು ರಚಿಸಬಹುದು.

(2) ನ್ಯಾಯಾಧಿಕರಣವು, ಸಮುಚಿತ ಸರ್ಕಾರವು ನೇಮಕ ಮಾಡತಕ್ಕ ಒಬ್ಬ ವ್ಯಕ್ತಿಯನ್ನು ಮಾತ್ರ ಒಳಗೊಂಡಿರತಕ್ಕುದು.

(3) ಒಬ್ಬ ವ್ಯಕ್ತಿಯು,-

(ಎ) ಅವನು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ, ಅಥವಾ ನ್ಯಾಯಾಧೀಶನಾಗಿದ್ದ ಹೊರತು; ಅಥವಾ

(ಎಎ) ಅವನು ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗೆ, ಜಿಲ್ಲಾ ನ್ಯಾಯಾಧೀಶ ಅಥವಾ ಅಡಿಷನಲ್ ಜಿಲ್ಲಾ ನ್ಯಾಯಾಧೀಶನಾಗಿದ್ದ ಹೊರತು

- ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕುದಲ್ಲ.

(ಬಿ) * * *

(4) ಸಮುಚಿತ ಸರ್ಕಾರವು, ತಾನು ಸೂಕ್ತವೆಂದು ಭಾವಿಸಿದರೆ, ನ್ಯಾಯಾಧಿಕರಣದ ಮುಂದೆ ಇರುವ ವ್ಯವಹರಣೆಯಲ್ಲಿ ಅದಕ್ಕೆ ಸಲಹೆ ನೀಡಲು ನಿರ್ಧಾರಕರನ್ನಾಗಿ ಇಬ್ಬರು ವ್ಯಕ್ತಿಗಳನ್ನು ನೇಮಕ ಮಾಡಬಹುದು.

**7ಬಿ. ರಾಷ್ಟ್ರೀಯ ನ್ಯಾಯಾಧಿಕರಣಗಳು.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ರಾಷ್ಟ್ರೀಯ ಮಹತ್ವದ ಅಥವಾ ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಇರುವ ಅಂಥ ವಿವಾದಗಳಲ್ಲಿ ಹಿತಾಸಕ್ತಿ ಹೊಂದಿರಬಹುದಾದ ಅಥವಾ ಅವುಗಳಿಂದ ಬಾಧಿತವಾಗಬಹುದಾದ ಸ್ವಭಾವದ ವಿಷಯಗಳನ್ನು ಒಳಗೊಂಡಿರುವಂಥ ಕೈಗಾರಿಕಾ ವಿವಾದಗಳ ನ್ಯಾಯ ನಿರ್ಣಯಕ್ಕಾಗಿ ಒಂದು ಅಥವಾ ಹೆಚ್ಚು ರಾಷ್ಟ್ರೀಯ ಕೈಗಾರಿಕಾ ನ್ಯಾಯಾಧಿಕರಣಗಳನ್ನು ರಚಿಸಬಹುದು.

(2) ರಾಷ್ಟ್ರೀಯ ನ್ಯಾಯಾಧಿಕರಣವು, ಕೇಂದ್ರ ಸರ್ಕಾರವು ನೇಮಕ ಮಾಡತಕ್ಕ ಒಬ್ಬ ವ್ಯಕ್ತಿಯನ್ನು ಮಾತ್ರ ಒಳಗೊಂಡಿರತಕ್ಕುದು.

(3) ಒಬ್ಬ ವ್ಯಕ್ತಿಯು, ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಹೊರತು, ಅವನು ರಾಷ್ಟ್ರೀಯ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯಾಗಿ ನೇಮಕ ಹೊಂದಲು ಅರ್ಹನಾಗಿರತಕ್ಕುದಲ್ಲ.

(4) ಕೇಂದ್ರ ಸರ್ಕಾರವು, ಯೋಗ್ಯವೆಂದು ಭಾವಿಸಿದರೆ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಗಳ ಬಗ್ಗೆ ಸಲಹೆ ನೀಡಲು ನಿರ್ಧಾರಕರನ್ನಾಗಿ ಇಬ್ಬರು ವ್ಯಕ್ತಿಗಳನ್ನು ನೇಮಕ ಮಾಡಬಹುದು.

**7ಸಿ. ಕಾರ್ಮಿಕ ನ್ಯಾಯಾಲಯಗಳು, ನ್ಯಾಯಾಧಿಕರಣಗಳು ಮತ್ತು ರಾಷ್ಟ್ರೀಯ ನ್ಯಾಯಾಧಿಕರಣಗಳ ಅಧ್ಯಕ್ಷಾಧಿಕಾರಿಗಳ ಅನರ್ಹತೆಗಳು.**- ಯಾವನೇ ವ್ಯಕ್ತಿಯು,-

(ಎ) ಅವನು ಒಬ್ಬ ಸ್ವತಂತ್ರ ವ್ಯಕ್ತಿ ಆಗಿಲ್ಲದಿದ್ದರೆ; ಅಥವಾ

(ಬಿ) ಅವನಿಗೆ ಅರವತ್ತೈದು ವರ್ಷ ವಯಸ್ಸಾಗಿದ್ದರೆ

- ಅವನನ್ನು ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯ ಪದಕ್ಕೆ ನೇಮಕ ಮಾಡತಕ್ಕುದಲ್ಲ ಅಥವಾ ಅದರಲ್ಲಿ ಮುಂದುವರೆಸತಕ್ಕುದಲ್ಲ.

**8. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು.**- ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿ ಪದವು ಅಥವಾ ಮಂಡಲಿ ಅಥವಾ ನ್ಯಾಯಾಲಯದ ಅಧ್ಯಕ್ಷನ ಅಥವಾ ಯಾವನೇ ಇತರ ಸದಸ್ಯನ ಪದವು (ತಾತ್ಕಾಲಿಕ ಗೈರುಹಾಜರಿಯನ್ನು

ಹೊರತು ಪಡಿಸಿ) ಯಾವುದೇ ಕಾರಣಕ್ಕಾಗಿ ಖಾಲಿಯಾದರೆ, ಆಗ, ರಾಷ್ಟ್ರೀಯ ನ್ಯಾಯಾಧಿಕರಣದ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು, ಮತ್ತು ಯಾವುದೇ ಇತರ ಸಂದರ್ಭದಲ್ಲಿ ಸಮುಚಿತ ಸರ್ಕಾರವು, ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಇರುವ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ, ಮತ್ತೊಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕುದು ಮತ್ತು ಖಾಲಿ ಸ್ಥಾನವನ್ನು ಭರ್ತಿ ಮಾಡಿರುವ ಹಂತದಿಂದ ಸಂದರ್ಭಾನುಸಾರ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ, ರಾಷ್ಟ್ರೀಯ ನ್ಯಾಯಾಧಿಕರಣ, ಮಂಡಲಿ ಅಥವಾ ನ್ಯಾಯಾಲಯದ ಮುಂದೆ ವ್ಯವಹರಣೆಗಳನ್ನು ಮುಂದುವರೆಸಬಹುದು.

**9. ಮಂಡಲಿ, ಇತ್ಯಾದಿಗಳನ್ನು ರಚಿಸುವ ಆದೇಶಗಳ ಅಂತಿಮತೆ.**- (1) ಮಂಡಲಿ ಅಥವಾ ನ್ಯಾಯಾಲಯದ ಅಧ್ಯಕ್ಷ ಅಥವಾ ಯಾವನೇ ಇತರ ಸದಸ್ಯನನ್ನಾಗಿ ಅಥವಾ ಕಾರ್ಮಿಕ ನ್ಯಾಯಾಲಯದ, ನ್ಯಾಯಾಧಿಕರಣದ, ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯನ್ನಾಗಿ ಯಾವನೇ ವ್ಯಕ್ತಿಯನ್ನು ನೇಮಕ ಮಾಡುವ ಸಮುಚಿತ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಯಾವುದೇ ಆದೇಶವನ್ನು ಯಾವುದೇ ರೀತಿಯಲ್ಲಿ ಪ್ರಶ್ನಿಸತಕ್ಕುದಲ್ಲ ಮತ್ತು ಯಾವುದೇ ಮಂಡಲಿ ಅಥವಾ ನ್ಯಾಯಾಲಯದ ಮುಂದಿರುವ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು ಅಂಥ ಮಂಡಲಿ ಅಥವಾ ನ್ಯಾಯಾಲಯದಲ್ಲಿ ಯಾವುದೇ ಖಾಲಿ ಹುದ್ದೆಯು ಇರುವ ಅಥವಾ ಅವುಗಳ ರಚನೆಯಲ್ಲಿ ನ್ಯೂನತೆಯು ಇರುವ ಕಾರಣ ಮಾತ್ರದಿಂದ ಯಾವುದೇ ರೀತಿಯಲ್ಲಿ ಪ್ರಶ್ನಿಸತಕ್ಕುದಲ್ಲ.

(2) ಸಂಧಾನ ವ್ಯವಹರಣೆಯ ಕ್ರಮದಲ್ಲಿ ಮಾಡಿಕೊಂಡ ಯಾವುದೇ ಒಪ್ಪಂದವು, ಸಂದರ್ಭಾನುಸಾರ, 12 ನೇ ಪ್ರಕರಣದ (6)ನೇ ಉಪ-ಪ್ರಕರಣದ ಅಥವಾ 13ನೇ ಪ್ರಕರಣದ (5)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಅವಧಿಯ ಮುಕ್ತಾಯದ ತರುವಾಯ ಅಂಥ ಒಪ್ಪಂದವನ್ನು ಮಾಡಿಕೊಳ್ಳಲಾಗಿತ್ತು ಎಂಬ ಸಂಗತಿಯ ಕಾರಣ ಮಾತ್ರದಿಂದ ಅಸಿಂಧುವಾಗತಕ್ಕುದಲ್ಲ.

(3) ಮಂಡಲಿಯ ಮುಂದೆ ಸಂಧಾನ ವ್ಯವಹರಣೆಯ ಕ್ರಮದಲ್ಲಿ ಮಾಡಿಕೊಂಡ ಯಾವುದೇ ವರದಿಗೆ ಮಂಡಲಿಯ ಅಧ್ಯಕ್ಷರು ಮತ್ತು ಎಲ್ಲಾ ಇತರ ಸದಸ್ಯರುಗಳು ಸಹಿ ಮಾಡಿರುವಲ್ಲಿ, ಯಾವುದೇ ಅಂಥ ಒಪ್ಪಂದವು, ವ್ಯವಹರಣೆಯ ಯಾವುದೇ ಹಂತದಲ್ಲಿ ಮಂಡಲಿಯ (ಅಧ್ಯಕ್ಷನೂ ಸೇರಿದಂತೆ) ಯಾವನೇ ಸದಸ್ಯನ ಆಕಸ್ಮಿಕ ಅಥವಾ ಅನಿರೀಕ್ಷಿತ ಗೈರು ಹಾಜರಿಯ ಕಾರಣ ಮಾತ್ರದಿಂದ ಅಸಿಂಧುವಾಗತಕ್ಕುದಲ್ಲ.

## ಅಧ್ಯಾಯ - II ಎ

## ಬದಲಾವಣೆ ನೋಟೀಸು

**9ಎ. ಬದಲಾವಣೆ ನೋಟೀಸು.**- ನಾಲ್ಕನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯದ ಸಂಬಂಧದಲ್ಲಿ ಯಾವನೇ ಕೆಲಸಗಾರನಿಗೆ ಅನ್ವಯವಾಗುವ ಸೇವಾ ಷರತ್ತುಗಳಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಉದ್ದೇಶಿಸಿರುವ ಯಾವನೇ ನಿಯೋಜಕನು,-

(ಎ) ಮಾಡಲು ಉದ್ದೇಶಿಸಿದ ಬದಲಾವಣೆಯ ಸ್ವರೂಪವನ್ನು, ನಿಯಮಿಸಿದ ವಿಧಾನದಲ್ಲಿ ನೋಟೀಸನ್ನು ಅಂಥ ಬದಲಾವಣೆಯಿಂದ ಬಾಧಿತನಾಗುವ ಸಂಭವವಿರುವ ಕೆಲಸಗಾರನಿಗೆ ಕೊಟ್ಟ ಹೊರತು; ಅಥವಾ

(ಬಿ) ಅಂಥ ನೋಟೀಸನ್ನು ಕೊಟ್ಟ ಇಪ್ಪತ್ತೊಂದು ದಿವಸಗಳ ಒಳಗಾಗಿ,

- ಅಂಥ ಬದಲಾವಣೆಯನ್ನು ಮಾಡತಕ್ಕುದಲ್ಲ:

ಪರಂತು,–

(ಎ) ಯಾವುದೇ ಒಪ್ಪಂದ ಅಥವಾ ಐತೀರ್ಪನ್ನು ಅನುಸರಿಸಿ ಬದಲಾವಣೆಯನ್ನು ಮಾಡಿರುವಲ್ಲಿ; ಅಥವಾ

(ಬಿ) ಆ ಬದಲಾವಣೆಯಿಂದ ಬಾಧಿತರಾಗುವ ಸಂಭವವಿರುವ ಕೆಲಸಗಾರರು ಯಾವ ವ್ಯಕ್ತಿಗಳಿಗೆ ಮೂಲಭೂತ ಮತ್ತು ಪೂರಕ ನಿಯಮಗಳು, ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, ಸಿವಿಲ್ ಸೇವಾ (ತಾತ್ಕಾಲಿಕ ಸೇವೆ) ನಿಯಮಗಳು, ಪರಿಷ್ಕೃತ ರಜೆ ನಿಯಮಗಳು, ಸಿವಿಲ್ ಸೇವಾ ವಿನಿಯಮನಗಳು, ರಕ್ಷಣಾ ಸೇವೆಯಲ್ಲಿನ ನಾಗರಿಕ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು ಅಥವಾ ಭಾರತ ರೈಲ್ವೆ ಸಿಬ್ಬಂದಿ ಸಂಹಿತೆ ಅಥವಾ ರಾಜಪತ್ರದಲ್ಲಿ ಸಮುಚಿತ ಸರ್ಕಾರವು ಈ ಬಗ್ಗೆ ಅಧಿಸೂಚಿಸಬಹುದಾದ ಯಾವುವೇ ಇತರ ನಿಯಮಗಳು ಅಥವಾ ವಿನಿಯಮನಗಳು ಅನ್ವಯವಾಗುವುವೋ ಆ ವ್ಯಕ್ತಿಗಳಾಗಿರುವಲ್ಲಿ–

– ಯಾವುದೇ ಅಂಥ ಬದಲಾವಣೆಯನ್ನು ಮಾಡುವುದಕ್ಕಾಗಿ ಯಾವುದೇ ನೋಟೀಸಿನ ಅಗತ್ಯ ಇರತಕ್ಕುದಲ್ಲ.

**9ಬಿ. ವಿನಾಯಿತಿ ನೀಡಲು ಸರ್ಕಾರದ ಅಧಿಕಾರ.–** ಸಮುಚಿತ ಸರ್ಕಾರವು, ಕೈಗಾರಿಕಾ ಕಾರ್ಯಸಂಸ್ಥೆಗಳ ಯಾವುದೇ ವರ್ಗ ಅಥವಾ ಯಾವುದೇ ಕೈಗಾರಿಕಾ ಕಾರ್ಯಸಂಸ್ಥೆಯಲ್ಲಿ ನಿಯೋಜಿತರಾದ ಕೆಲಸಗಾರರ ಯಾವುದೇ ವರ್ಗಕ್ಕೆ 9ಎ ಪ್ರಕರಣದ ಉಪಬಂಧಗಳ ಅನ್ವಯವು ಅದಕ್ಕೆ ಸಂಬಂಧಪಟ್ಟ ನಿಯೋಜಕರಿಗೆ ಸಂಬಂಧಪಟ್ಟ ಕೈಗಾರಿಕೆಯ ಮೇಲೆ ತೀವ್ರ ಪರಿಣಾಮ ಉಂಟಾಗಬಹುದಾದಂತೆ ಅಂಥ ಅನ್ವಯವು ಪ್ರತಿಕೂಲವಾಗಿ ಬಾಧಿಸುವುದೆಂದು ಸಮುಚಿತ ಸರ್ಕಾರವು ಅಭಿಪ್ರಾಯಪಟ್ಟರೆ, ಆ ಸಮುಚಿತ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಸದರಿ ಪ್ರಕರಣದ ಉಪಬಂಧಗಳು ಕೈಗಾರಿಕಾ ಸ್ಥಾಪನೆಗಳ ಆ ವರ್ಗಕ್ಕೆ ಅಥವಾ ಯಾವುದೇ ಕೈಗಾರಿಕಾ ಸ್ಥಾಪನೆಯಲ್ಲಿ ನಿಯೋಜಿತರಾದ ಕೆಲಸಗಾರರ ಆ ವರ್ಗಕ್ಕೆ ಅನ್ವಯವಾಗತಕ್ಕುದಲ್ಲ ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಷರತ್ತುಗಳಿಗೊಳಪಟ್ಟು ಅನ್ವಯವಾಗತಕ್ಕುದೆಂದು ನಿರ್ದೇಶಿಸಬಹುದು.

## ಅಧ್ಯಾಯ – III

### ಮಂಡಲಿಗಳು, ನ್ಯಾಯಾಲಯಗಳು ಅಥವಾ ನ್ಯಾಯಾಧಿಕರಣಗಳಿಗೆ ವಿವಾದಗಳ ಉಲ್ಲೇಖ

**10. ಮಂಡಲಿಗಳು, ನ್ಯಾಯಾಲಯಗಳು ಅಥವಾ ನ್ಯಾಯಾಧಿಕರಣಗಳಿಗೆ ವಿವಾದಗಳ ಉಲ್ಲೇಖ.–** (1) ಸಮುಚಿತ ಸರ್ಕಾರವು, ಯಾವುದೇ ಕೈಗಾರಿಕಾ ವಿವಾದ ಇರುವುದೆಂದು ಅಥವಾ ಅದು ಉಂಟಾಗುವುದೆಂದು ಅಭಿಪ್ರಾಯಪಡುವಲ್ಲಿ, ಅದು ಯಾವುದೇ ಸಮಯದಲ್ಲಿ ಲಿಖಿತ ಆದೇಶದ ಮೂಲಕ;

(ಎ) ವಿವಾದವನ್ನು ಅದರ ಇತ್ಯರ್ಥಕ್ಕಾಗಿ ಮಂಡಲಿಗೆ ಉಲ್ಲೇಖಿಸಬಹುದು;

(ಬಿ) ವಿವಾದಕ್ಕೆ ಸಂಬಂಧಿಸಿದೆಯೆಂದು ಅಥವಾ ಸುಸಂಗತವಾಗಿದೆಯೆಂದು ಕಂಡುಬರುವ ಯಾವುದೇ ವಿಷಯವನ್ನು ವಿಚಾರಣೆಗಾಗಿ ನ್ಯಾಯಾಲಯಕ್ಕೆ ಉಲ್ಲೇಖಿಸಬಹುದು; ಅಥವಾ

(ಸಿ) ವಿವಾದಕ್ಕೆ ಸಂಬಂಧಿಸಿದೆಯೆಂದು ಅಥವಾ ಸುಸಂಗತವಾಗಿದೆಯೆಂದು ಕಂಡುಬರುವ ವಿವಾದ ಅಥವಾ ಯಾವುದೇ ವಿಷಯವನ್ನು, ಅದು ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟಿದ್ದರೆ, ನ್ಯಾಯನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯಕ್ಕೆ ಉಲ್ಲೇಖಿಸಬಹುದು; ಅಥವಾ

(ಡಿ) ವಿವಾದಕ್ಕೆ ಸಂಬಂಧಿಸಿದೆಯೆಂದು ಅಥವಾ ಸುಸಂಗತವಾಗಿದೆಯೆಂದು ಕಂಡುಬರುವ ವಿವಾದ ಅಥವಾ ಯಾವುದೇ ವಿಷಯವನ್ನು, ಅದು ಎರಡನೇ ಅನುಸೂಚಿ ಅಥವಾ ಮೂರನೇ ಅನುಸೂಚಿಯಲ್ಲಿ

ನಿರ್ದಿಷ್ಟಪಡಿಸಿರುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟಿರಲಿ ಅಥವಾ ಇಲ್ಲದಿರಲಿ, ನ್ಯಾಯ ನಿರ್ಣಯಕ್ಕಾಗಿ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಬಹುದು:

ಪರಂತು, ವಿವಾದವು ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿರುವಲ್ಲಿ ಮತ್ತು ಒಂದು ನೂರಕ್ಕಿಂತ ಹೆಚ್ಚು ಕೆಲಸಗಾರರಿಗೆ ಬಾಧಕವಾಗುವ ಸಂಭವವಿಲ್ಲದಿರುವಲ್ಲಿ, ಸಮುಚಿತ ಸರ್ಕಾರವು, ಅದು ಸೂಕ್ತವೆಂದು ಭಾವಿಸಿದರೆ, (ಸಿ) ಖಂಡದ ಮೇರೆಗೆ ಕಾರ್ಮಿಕ ನ್ಯಾಯಾಲಯಕ್ಕೆ ಉಲ್ಲೇಖ ಮಾಡಬಹುದು:

ಮತ್ತೂ ಪರಂತು, ವಿವಾದವು ಸಾರ್ವಜನಿಕ ಉಪಯೋಗ ಸೇವೆಗೆ ಸಂಬಂಧಿಸಿರುವಲ್ಲಿ ಮತ್ತು 22ನೇ ಪ್ರಕರಣದ ಮೇರೆಗೆ ನೋಟೀಸನ್ನು ಕೊಟ್ಟಿರುವಲ್ಲಿ, ಸಮುಚಿತ ಸರ್ಕಾರವು, ನೋಟೀಸನ್ನು ಕ್ಷುದ್ರವಾಗಿ ಅಥವಾ ಕಿರುಕುಳಕಾರಿಯಾಗಿ ಕೊಡಲಾಗಿದೆಯೆಂದು ಅಥವಾ ಹಾಗೆ ಮಾಡುವುದು ವಿಹಿತವಲ್ಲವೆಂದು ಪರಿಗಣಿಸಿದ ಹೊರತು, ಈ ಅಧಿನಿಯಮದ ಮೇರೆಗೆ ಆ ವಿವಾದಕ್ಕೆ ಸಂಬಂಧಿಸಿ ಯಾವುದೇ ಇತರ ವ್ಯವಹರಣೆಗಳು ಪ್ರಾರಂಭವಾಗಿದ್ದರೂ, ಈ ಉಪ-ಪ್ರಕರಣದ ಮೇರೆಗೆ ಉಲ್ಲೇಖಮಾಡಬಹುದು:

ಮತ್ತೂ ಪರಂತು, ಯಾವ ವಿವಾದದ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಸಮುಚಿತ ಸರ್ಕಾರವಾಗಿರುವುದೋ, ಆ ವಿವಾದವನ್ನು ರಾಜ್ಯ ಸರ್ಕಾರವು ರಚಿಸಿದ ಕಾರ್ಮಿಕ ನ್ಯಾಯಾಲಯ ಅಥವಾ ಸಂದರ್ಭಾನುಸಾರ, ಒಂದು ಕೈಗಾರಿಕಾ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಲು ಆ ಸರ್ಕಾರವು ಸಕ್ಷಮವಾಗಿರತಕ್ಕುದು.

(1ಎ) ಕೇಂದ್ರ ಸರ್ಕಾರವು, ಕೈಗಾರಿಕಾ ವಿವಾದವು ಇರುವುದೆಂದು ಅಥವಾ ಅದನ್ನು ಶಂಕಿಸಲಾಗಿದೆಯೆಂದು ಮತ್ತು ವಿವಾದವು ರಾಷ್ಟ್ರೀಯ ಪ್ರಾಮುಖ್ಯತೆಯ ಯಾವುದೇ ವಿಷಯವನ್ನು ಒಳಗೊಂಡಿದ್ದು ಅಥವಾ ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಇರುವ ಕೈಗಾರಿಕಾ ಕಾರ್ಯಸಂಸ್ಥೆಗಳು ಅಂಥ ವಿವಾದದಲ್ಲಿ ಹಿತಾಸಕ್ತಿ ಹೊಂದುವ ಅಥವಾ ಅದರಿಂದ ಬಾಧಿತವಾಗುವ ಸಂಭವವಿರುವಂಥ ಸ್ವರೂಪದ್ದಾಗಿದೆಯೆಂದು ಮತ್ತು ವಿವಾದವನ್ನು ರಾಷ್ಟ್ರೀಯ ನ್ಯಾಯಾಧಿಕರಣವು ನ್ಯಾಯನಿರ್ಣಯ ಮಾಡಬೇಕೆಂದು ಅಭಿಪ್ರಾಯಪಟ್ಟಿರುವಲ್ಲಿ, ಆಗ ಕೇಂದ್ರ ಸರ್ಕಾರವು ಅಂಥ ವಿವಾದದ ಸಂಬಂಧದಲ್ಲಿ ಸಮುಚಿತ ಸರ್ಕಾರವಾಗಿರಲಿ ಅಥವಾ ಆಗಿಲ್ಲದಿರಲಿ, ಯಾವುದೇ ಕಾಲದಲ್ಲಿ ಲಿಖಿತ ಆದೇಶದ ಮೂಲಕ ವಿವಾದವನ್ನು ಅಥವಾ ವಿವಾದಕ್ಕೆ ಸಂಬಂಧಪಡುವುದೆಂದು ಅಥವಾ ಸುಸಂಗತವಾಗಿದೆಯೆಂದು ಕಂಡುಬರುವ ಯಾವುದೇ ವಿಷಯವನ್ನು ಅದು ಎರಡನೇ ಅನುಸೂಚಿ ಅಥವಾ ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟಿರಲಿ ಅಥವಾ ಇಲ್ಲದಿರಲಿ, ನ್ಯಾಯನಿರ್ಣಯಕ್ಕಾಗಿ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಬಹುದು.

(2) ಒಂದು ಕೈಗಾರಿಕಾ ವಿವಾದದ ಪಕ್ಷಕಾರರು ನಿಯಮಿಸಿದ ವಿಧಾನದಲ್ಲಿ, ಜಂಟಿಯಾಗಿಯಾಗಲಿ ಅಥವಾ ಪ್ರತ್ಯೇಕವಾಗಿಯಾಗಲಿ, ವಿವಾದವನ್ನು ಮಂಡಲಿ, ನ್ಯಾಯಾಲಯ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖ ಮಾಡುವುದಕ್ಕಾಗಿ ಅರ್ಜಿ ಸಲ್ಲಿಸಿರುವಲ್ಲಿ, ಸಮುಚಿತ ಸರ್ಕಾರವು, ಅರ್ಜಿ ಸಲ್ಲಿಸಿದ ವ್ಯಕ್ತಿಗಳು ಪ್ರತಿಯೊಂದು ಪಕ್ಷದ ಪೈಕಿ ಬಹುಸಂಖ್ಯೆಯನ್ನು ಪ್ರತಿನಿಧಿಸುತ್ತಾರೆಂದು ಮನದಟ್ಟು ಮಾಡಿಕೊಂಡರೆ, ತದನುಸಾರವಾಗಿ ಅದನ್ನು ಉಲ್ಲೇಖಿಸತಕ್ಕುದು.

(2ಎ) ಈ ಪ್ರಕರಣದ ಮೇರೆಗೆ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಕೈಗಾರಿಕಾ ವಿವಾದವನ್ನು ಉಲ್ಲೇಖಿಸುವ ಆದೇಶದಲ್ಲಿ, ಅಂಥ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು ಅಂಥ ವಿವಾದದ ಬಗ್ಗೆ ಅದರ ಐತೀರ್ಪನ್ನು ಯಾವ ಅವಧಿಯೊಳಗೆ ಸಮುಚಿತ ಸರ್ಕಾರಕ್ಕೆ ಸಲ್ಲಿಸತಕ್ಕುದು ಎಂಬುದನ್ನು ನಿರ್ದಿಷ್ಟಪಡಿಸತಕ್ಕುದು:

ಪರಂತು, ಅಂಥ ವಿವಾದವು ಒಬ್ಬ ಕೆಲಸಗಾರನಿಗೆ ಸಂಬಂಧಿಸಿರುವಲ್ಲಿ, ಅಂಥ ಅವಧಿಯು ಮೂರು ತಿಂಗಳುಗಳನ್ನು ಮೀರತಕ್ಕುದಲ್ಲ:

ಮತ್ತೂ ಪರಂತು, ಒಂದು ಕೈಗಾರಿಕಾ ವಿವಾದದ ಪಕ್ಷಕಾರರು ನಿಯಮಿಸಿದ ವಿಧಾನದಲ್ಲಿ ಜಂಟಿಯಾಗಿ ಆಗಲಿ ಅಥವಾ ಪ್ರತ್ಯೇಕವಾಗಿ ಆಗಲಿ ಅಂಥ ಅವಧಿಯ ವಿಸ್ತರಣೆಗಾಗಿ ಅಥವಾ ಯಾವುದೇ ಇತರ ಕಾರಣಕ್ಕಾಗಿ ಅರ್ಜಿ ಸಲ್ಲಿಸಿದ್ದು, ಅಂಥ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯು ಅಂಥ ಅವಧಿಯನ್ನು ವಿಸ್ತರಿಸುವುದು ಅವಶ್ಯವಾಗಿದೆ ಅಥವಾ ಯುಕ್ತವಾಗಿದೆಯೆಂದು ಪರಿಗಣಿಸುವಲ್ಲಿ, ಅವನು ಕಾರಣಗಳನ್ನು ಬರಹದಲ್ಲಿ ದಾಖಲುಮಾಡಿ, ಅಂಥ ಅವಧಿಯನ್ನು ಅವನು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಯವರೆಗೆ ವಿಸ್ತರಿಸಬಹುದು:

ಮತ್ತೂ ಪರಂತು, ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಗಳಿಗೆ ನೀಡಲಾಗಿರುವ ಸಿವಿಲ್ ನ್ಯಾಯಾಲಯದ ನಿರ್ಬಂಧಕಾಜ್ಞೆ ಅಥವಾ ಆದೇಶದ ಮೂಲಕ ನೀಡಿದ ತಡೆಯ ಅವಧಿ ಯಾವುದಾದರೂ ಇದ್ದರೆ, ಆ ಅವಧಿಯನ್ನು ಬಿಟ್ಟುಬಿಡತಕ್ಕುದು.

ಅಷ್ಟೇ ಅಲ್ಲದೆ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ, ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಗಳು, ಈ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಯಾವುದೇ ಅವಧಿಯು ಪೂರ್ಣಗೊಳಿಸಲಾದ ಅಂಥ ವ್ಯವಹರಣೆಗಳನ್ನು ಪೂರ್ಣಗೊಳಿಸದೆ ಮುಕ್ತಾಯವಾಗಿದೆ ಎಂಬ ಆಧಾರ ಮಾತ್ರದಿಂದ ರದ್ದಾಗತಕ್ಕುದಲ್ಲ.

(3) ಈ ಪ್ರಕರಣದ ಮೇರೆಗೆ ಕೈಗಾರಿಕಾ ವಿವಾದವನ್ನು ಮಂಡಲಿ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಲಾಗಿರುವಲ್ಲಿ, ಸಮುಚಿತ ಸರ್ಕಾರವು, ಆದೇಶದ ಮೂಲಕ ಉಲ್ಲೇಖಿಸಿದ ದಿನಾಂಕದಂದು ಅಸ್ತಿತ್ವದಲ್ಲಿರುವ ವಿವಾದದ ಸಂಬಂಧದಲ್ಲಿ ಯಾವುದೇ ಮುಷ್ಕರ ಅಥವಾ ಬೀಗಮುದ್ರೆಯ ಮುಂದುವರಿಕೆಯನ್ನು ನಿಷೇಧಿಸಬಹುದು.

(4) ಈ ಪ್ರಕರಣದ ಮೇರೆಗೆ ಕೈಗಾರಿಕಾ ವಿವಾದವನ್ನು ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖಿಸುವ ಆದೇಶದಲ್ಲಿ ಅಥವಾ ತರುವಾಯದ ಆದೇಶದಲ್ಲಿ, ಸಮುಚಿತ ಸರ್ಕಾರವು, ನ್ಯಾಯನಿರ್ಣಯಕ್ಕಾಗಿ ವಿವಾದದ ಅಂಶಗಳನ್ನು ನಿರ್ದಿಷ್ಟಪಡಿಸಿರುವಲ್ಲಿ, ಸಂದರ್ಭಾನುಸಾರ, ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು, ಆ ಅಂಶಗಳು ಮತ್ತು ಅವುಗಳಿಗೆ ಪ್ರಾಸಂಗಿಕವಾದ ವಿಷಯಗಳಿಗೆ ತಮ್ಮ ನ್ಯಾಯನಿರ್ಣಯವನ್ನು ಸೀಮಿತಗೊಳಿಸತಕ್ಕುದು.

(5) ಈ ಪ್ರಕರಣದ ಮೇರೆಗೆ ಯಾವುದೇ ಕಾರ್ಯಸಂಸ್ಥೆಗೆ ಅಥವಾ ಕಾರ್ಯಸಂಸ್ಥೆಗಳಿಗೆ ಸಂಬಂಧಿಸಿದ ಯಾವೊಂದು ವಿವಾದವನ್ನು ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಲಾಗಿರುವಲ್ಲಿ ಅಥವಾ ಉಲ್ಲೇಖಿಸಬೇಕಾಗಿರುವಲ್ಲಿ ಮತ್ತು ಸಮುಚಿತ ಸರ್ಕಾರವು, ಈ ಬಗ್ಗೆ ಅದಕ್ಕೆ ಸಲ್ಲಿಸಿದ ಅರ್ಜಿಯ ಮೇಲೆ ಅಥವಾ ಅನ್ಯಥಾ, ಆ ವಿವಾದವು, ಯಾವುದೇ ಇತರ ಸಂಸ್ಥೆಯು ಅದೇ ಬಗೆಯ ಸಂಸ್ಥೆಗಳ ಸಮೂಹ ಅಥವಾ ವರ್ಗವು ಅಂಥ ವಿವಾದದಲ್ಲಿ ಹಿತಾಸಕ್ತಿ ಹೊಂದಿರಬಹುದಾದಂಥ ಅಥವಾ ಅದರಿಂದ ಬಾಧಿತವಾಗಬಹುದಾದಂಥ ಬಗೆಯ ವಿವಾದವಾಗಿದೆ ಎಂದು ಅಭಿಪ್ರಾಯ ಪಡುವಲ್ಲಿ, ಸಮುಚಿತ ಸರ್ಕಾರವು, ಉಲ್ಲೇಖವನ್ನು ಮಾಡುವ ಸಮಯದಲ್ಲಿ ಅಥವಾ ಅದರ ತರುವಾಯ ಯಾವುದೇ ನಿಯಮಕ್ಕೆ ಆದರೆ ಐತೀರ್ಪನ್ನು ಒಪ್ಪಿಸುವುದಕ್ಕೆ ಮುಂಚೆ, ಆ ಉಲ್ಲೇಖದಲ್ಲಿ ಅಂಥ ಸಂಸ್ಥೆ, ಸಂಸ್ಥೆಗಳ ಸಮೂಹ ಅಥವಾ ವರ್ಗವನ್ನು ಸೇರಿಸುವ ಸಮಯಕ್ಕೆ ಆ ಸಂಸ್ಥೆಯಲ್ಲಿ, ಸಂಸ್ಥೆಗಳ ಸಮೂಹ ಅಥವಾ ವರ್ಗದಲ್ಲಿ ಯಾವುದೇ ವಿವಾದವು ಅಸ್ತಿತ್ವದಲ್ಲಿರಲಿ ಅಥವಾ ಅದನ್ನು ಶಂಕಿಸಿರಲಿ, ಹಾಗೆ ಸೇರಿಸಬಹುದು.

(6) (1ಎ) ಉಪ-ಪ್ರಕರಣದ ಮೇರೆಗೆ ಯಾವುದೇ ಉಲ್ಲೇಖವನ್ನು ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಮಾಡಿರುವಾಗ, ಈ ಅಧಿನಿಯಮದಲ್ಲಿ ಏನೇ ಇದ್ದರೂ, ಯಾವುದೇ ಕಾರ್ಮಿಕ ನ್ಯಾಯಾಲಯ ಅಥವಾ

ನ್ಯಾಯಾಧಿಕರಣವು, ರಾಷ್ಟ್ರೀಯ ನ್ಯಾಯಾಧಿಕರಣದ ಮುಂದೆ ನ್ಯಾಯನಿರ್ಣಯದಲ್ಲಿರುವ ಯಾವುದೇ ವಿಷಯದ ಬಗ್ಗೆ ನ್ಯಾಯನಿರ್ಣಯ ಮಾಡಲು ಅಧಿಕಾರ ವ್ಯಾಪ್ತಿ ಹೊಂದಿರತಕ್ಕುದಲ್ಲ ಮತ್ತು ತದನುಸಾರವಾಗಿ,-

(ಎ) ರಾಷ್ಟ್ರೀಯ ನ್ಯಾಯಾಧಿಕರಣದ ಮುಂದೆ ನ್ಯಾಯ ನಿರ್ಣಯದಲ್ಲಿರುವ ವಿಷಯವು ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಯಲ್ಲಿ ಇತ್ಯರ್ಥದಲ್ಲಿದ್ದರೆ, ಸಂದರ್ಭಾನುಸಾರ, ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಯು ಅಂಥ ವಿಷಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖ ಮಾಡಿದ ಮೇಲೆ ಅದನ್ನು ರದ್ದುಪಡಿಸಲಾಗಿರುವುದಾಗಿ ಭಾವಿಸತಕ್ಕುದು; ಮತ್ತು

(ಬಿ) ಸಮುಚಿತ ಸರ್ಕಾರವು, ರಾಷ್ಟ್ರೀಯ ನ್ಯಾಯಾಧಿಕರಣದ ಮುಂದಿರುವ ಅಂಥ ವಿಷಯಕ್ಕೆ ಸಂಬಂಧಿಸಿದ ವ್ಯವಹರಣೆಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದೆ ನ್ಯಾಯನಿರ್ಣಯದಲ್ಲಿರುವ ವಿಷಯವನ್ನು ನ್ಯಾಯನಿರ್ಣಯಕ್ಕಾಗಿ ಯಾವುದೇ ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣಕ್ಕೆ ಉಲ್ಲೇಖಿಸುವುದು ಕಾನೂನು ಸಮ್ಮತವಾಗಿರತಕ್ಕುದಲ್ಲ.

**ವಿವರಣೆ:-** ಈ ಉಪ-ಪ್ರಕರಣದಲ್ಲಿರುವ "ಕಾರ್ಮಿಕ ನ್ಯಾಯಾಲಯ" ಅಥವಾ "ನ್ಯಾಯಾಧಿಕರಣ" ಇದು, ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ ಕೈಗಾರಿಕಾ ವಿವಾದಗಳ ತನಿಖೆ ಮತ್ತು ಇತ್ಯರ್ಥಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ಮೇರೆಗೆ ರಚಿತವಾದ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ಯಾವುದೇ ಇತರ ಪ್ರಾಧಿಕಾರವನ್ನು ಒಳಗೊಳ್ಳುತ್ತದೆ.

(7) ಯಾವ ಕೈಗಾರಿಕಾ ವಿವಾದದ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಸಮುಚಿತ ಸರ್ಕಾರವಲ್ಲವೋ ಆ ಯಾವುದೇ ಕೈಗಾರಿಕಾ ವಿವಾದವನ್ನು ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಿದಾಗ, ಈ ಅಧಿನಿಯಮದಲ್ಲಿ ಏನೇ ಇದ್ದರೂ, ಅಂಥ ವಿವಾದಕ್ಕೆ ಸಂಬಂಧಿಸಿ, ಸಮುಚಿತ ಸರ್ಕಾರಕ್ಕೆ 15ನೇ ಪ್ರಕರಣ, 17ನೇ ಪ್ರಕರಣ, 19ನೇ ಪ್ರಕರಣ, 33ಎ ಪ್ರಕರಣ, 33ಬಿ ಪ್ರಕರಣ ಮತ್ತು 36ಎ ಪ್ರಕರಣ ಇವುಗಳಲ್ಲಿ ಮಾಡಲಾದ ಯಾವುದೇ ಉಲ್ಲೇಖವನ್ನು ಕೇಂದ್ರ ಸರ್ಕಾರಕ್ಕೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕುದು, ಆದರೆ ಮೇಲೆ ಹೇಳಿದಂತೆ ಮತ್ತು ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವಂತೆ ಹೊರತು, ಆ ವಿವಾದದ ಸಂಬಂಧದಲ್ಲಿ ಸಮುಚಿತ ಸರ್ಕಾರಕ್ಕೆ ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿ ಮಾಡಲಾದ ಯಾವುದೇ ಉಲ್ಲೇಖವನ್ನು ರಾಜ್ಯ ಸರ್ಕಾರಕ್ಕೆ ಮಾಡಲಾದ ಉಲ್ಲೇಖ ಎಂದು ಅರ್ಥೈಸತಕ್ಕುದು.

(8) ಕೈಗಾರಿಕಾ ವಿವಾದದ ಸಂಬಂಧದಲ್ಲಿ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದೆ ಇತ್ಯರ್ಥದಲ್ಲಿರುವ ಯಾವುವೇ ವ್ಯವಹರಣೆಗಳು ವಿವಾದದ ಪಕ್ಷಕಾರರಲ್ಲಿ ಒಬ್ಬ ಪಕ್ಷಕಾರನಾಗಿರತಕ್ಕ ಕೆಲಸಗಾರನ ಮರಣದ ಕಾರಣ ಮಾತ್ರದಿಂದ ರದ್ದಾಗತಕ್ಕುದಲ್ಲ ಮತ್ತು ಅಂಥ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು ಅಂಥ ವ್ಯವಹರಣೆಗಳನ್ನು ಪೂರ್ಣಗೊಳಿಸಿ ತನ್ನ ಐತೀರ್ಪನ್ನು ಸಮುಚಿತ ಸರ್ಕಾರಕ್ಕೆ ಒಪ್ಪಿಸತಕ್ಕುದು.

**10ಎ. ವಿವಾದಗಳನ್ನು ಸ್ವಯಿಚ್ಛೆಯಿಂದ ಮಧ್ಯಸ್ಥಿಕೆಗೆ ಉಲ್ಲೇಖಿಸುವುದು.-** (1) ಯಾವುದೇ ಕೈಗಾರಿಕಾ ವಿವಾದವು ಅಸ್ತಿತ್ವದಲ್ಲಿರುವಲ್ಲಿ ಅಥವಾ ಅದನ್ನು ಶಂಕಿಸಲಾಗಿರುವಲ್ಲಿ ಮತ್ತು ನಿಯೋಜಕನು ಮತ್ತು ಕೆಲಸಗಾರರು ವಿವಾದವನ್ನು ಮಧ್ಯಸ್ಥಿಕೆಗೆ ಉಲ್ಲೇಖಿಸಲು ಒಪ್ಪಿರುವಲ್ಲಿ, ಅವರು ಆ ವಿವಾದವನ್ನು 10ನೇ ಪ್ರಕರಣದ ಮೇರೆಗೆ ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖಿಸುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಲಿಖಿತ ಒಪ್ಪಂದದ ಮೂಲಕ ಆ ವಿವಾದವನ್ನು ಮಧ್ಯಸ್ಥಿಕೆಗೆ ಉಲ್ಲೇಖಿಸಬಹುದು ಮತ್ತು ಆ ಉಲ್ಲೇಖವನ್ನು ಮಧ್ಯಸ್ಥಿಕೆ ಒಪ್ಪಂದದಲ್ಲಿ ಮಧ್ಯಸ್ಥಗಾರ ಅಥವಾ ಮಧ್ಯಸ್ಥಗಾರರೆಂದು ನಿರ್ದಿಷ್ಟಪಡಿಸಬಹುದಾದಂಥ (ಕಾರ್ಮಿಕ ನ್ಯಾಯಾಲಯ

ಅಥವಾ ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯೂ ಸೇರಿ) ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಉಲ್ಲೇಖಿಸತಕ್ಕುದು.

(1ಎ) ಮಧ್ಯಸ್ಥಿಕೆಯ ಒಪ್ಪಂದದಲ್ಲಿ ಸಮಸಂಖ್ಯೆಯ ಮಧ್ಯಸ್ಥಿಕೆಗಾರರಿಗೆ ವಿವಾದವನ್ನು ಉಲ್ಲೇಖಿಸಲು ಉಪಬಂಧಿಸಿರುವಲ್ಲಿ, ಆ ಒಪ್ಪಂದವು ನ್ಯಾಯ ನಿರ್ಣಾಯಕನಾಗಿ ಇನ್ನೊಬ್ಬ ವ್ಯಕ್ತಿಯ ನೇಮಕಾತಿಗೆ ಅವಕಾಶ ಕಲ್ಪಿಸತಕ್ಕದ್ದು, ಮತ್ತು ಮಧ್ಯಸ್ಥಗಾರರು ಸಮವಾಗಿ ಭಿನ್ನಾಭಿಪ್ರಾಯವನ್ನು ಹೊಂದಿರುವಲ್ಲಿ, ನ್ಯಾಯ ನಿರ್ಣಯಕಾರನು ಆ ಉಲ್ಲೇಖದಲ್ಲಿ ತನ್ನ ಕರ್ತವ್ಯ ನಿರ್ವಹಿಸತಕ್ಕುದು ಮತ್ತು ನ್ಯಾಯನಿರ್ಣಾಯಕನ ಮೇಲುಗೈ ಐತೀರ್ಪು ಆಗಿರತಕ್ಕುದು ಮತ್ತು ಅದನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಮಧ್ಯಸ್ಥಿಕೆ ಐತೀರ್ಪು ಎಂಬುದಾಗಿ ಭಾವಿಸತಕ್ಕುದು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಮಧ್ಯಸ್ಥಿಕೆ ಒಪ್ಪಂದವು ನಿಯಮಿಸಲಾದಂಥ ನಮೂನೆಯಲ್ಲಿರತಕ್ಕುದು ಮತ್ತು ಅದರ ಪಕ್ಷಕಾರರು ನಿಯಮಿಸಬಹುದಾದಂಥ ರೀತಿಯಲ್ಲಿ ಸಹಿಮಾಡತಕ್ಕುದು.

(3) ಮಧ್ಯಸ್ಥಿಕೆ ಒಪ್ಪಂದದ ಒಂದು ಪ್ರತಿಯನ್ನು ಸಮುಚಿತ ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಸಂಧಾನಾಧಿಕಾರಿ ಮತ್ತು ಸಮುಚಿತ ಸರ್ಕಾರವು ಅಂಥ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಅದನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

(3ಎ) ಕೈಗಾರಿಕಾ ವಿವಾದವನ್ನು ಮಧ್ಯಸ್ಥಿಕೆಗೆ ಉಲ್ಲೇಖಿಸಲಾಗಿರುವಲ್ಲಿ ಮತ್ತು ಸಮುಚಿತ ಸರ್ಕಾರಕ್ಕೆ ಉಲ್ಲೇಖ ಮಾಡುವ ವ್ಯಕ್ತಿಗಳು ಪ್ರತಿಯೊಂದು ಪಕ್ಷದ ಪೈಕಿ ಬಹುಸಂಖ್ಯೆಯನ್ನು ಪ್ರತಿನಿಧಿಸುತ್ತಾರೆಂದು ಮನದಟ್ಟಾದರೆ, ಸಮುಚಿತ ಸರ್ಕಾರವು, (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಕಾಲದೊಳಗೆ, ನಿಯಮಿಸಬಹುದಾದಂಥ ರೀತಿಯಲ್ಲಿ ಅಧಿಸೂಚನೆಯನ್ನು ಹೊರಡಿಸಬಹುದು; ಮತ್ತು ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸಿರುವಾಗ ಮಧ್ಯಸ್ಥಿಕೆ ಒಪ್ಪಂದಕ್ಕೆ ಪಕ್ಷಕಾರರಾಗಿಲ್ಲದ ಆದರೆ ವಿವಾದಕ್ಕೆ ಸಂಬಂಧಿಸಿರುವ ನಿಯೋಜಕರು ಮತ್ತು ಕೆಲಸಗಾರರಿಗೆ, ಮಧ್ಯಸ್ಥಗಾರ ಅಥವಾ ಮಧ್ಯಸ್ಥಗಾರರ ಮುಂದೆ ತಮ್ಮ ಪ್ರಕರಣವನ್ನು ಮಂಡಿಸಲು ಅವಕಾಶವನ್ನು ನೀಡತಕ್ಕುದು.

(4) ಮಧ್ಯಸ್ಥಗಾರ ಅಥವಾ ಮಧ್ಯಸ್ಥಗಾರರು ವಿವಾದದ ಬಗ್ಗೆ ತನಿಖೆ ನಡೆಸತಕ್ಕುದು ಮತ್ತು ಸಂದರ್ಭಾನುಸಾರ, ಮಧ್ಯಸ್ಥಗಾರ ಅಥವಾ ಎಲ್ಲ ಮಧ್ಯಸ್ಥಗಾರರು ಸಹಿಮಾಡಿದ ಮಧ್ಯಸ್ಥಿಕೆ ಐತೀರ್ಪನ್ನು ಸಮುಚಿತ ಸರ್ಕಾರಕ್ಕೆ ಸಲ್ಲಿಸತಕ್ಕುದು.

(4ಎ) ಕೈಗಾರಿಕಾ ವಿವಾದವನ್ನು ಮಧ್ಯಸ್ಥಿಕೆಗೆ ಉಲ್ಲೇಖಿಸಲಾಗಿದ್ದು, (3ಎ) ಉಪ-ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಲಾಗಿರುವಲ್ಲಿ, ಸಮುಚಿತ ಸರ್ಕಾರವು, ಆದೇಶದ ಮೂಲಕ, ಉಲ್ಲೇಖದ ದಿನಾಂಕದಂದು ಅಸ್ತಿತ್ವದಲ್ಲಿರುವ ವಿವಾದದ ಸಂಬಂಧದಲ್ಲಿ ಯಾವುದೇ ಮುಷ್ಕರ ಅಥವಾ ಬೀಗಮುದ್ರೆಯ ಮುಂದುವರಿಕೆಯನ್ನು ನಿಷೇಧಿಸಬಹುದು.

(5) ಮಧ್ಯಸ್ಥಿಕೆ ಅಧಿನಿಯಮ, 1940 ರಲ್ಲಿ (1940ರ 10) ಇರುವುದು ಯಾವುದೂ, ಈ ಪ್ರಕರಣದ ಮೇರೆಗಿನ ಮಧ್ಯಸ್ಥಿಕೆಗಳಿಗೆ ಅನ್ವಯವಾಗತಕ್ಕುದಲ್ಲ.

## ಅಧ್ಯಾಯ - IV

## ಪ್ರಾಧಿಕಾರಗಳ ಪ್ರಕ್ರಿಯೆ, ಅಧಿಕಾರಗಳು ಮತ್ತು ಕರ್ತವ್ಯಗಳು

**11. ಸಂಧಾನಾಧಿಕಾರಿಗಳು, ಮಂಡಲಿಗಳು, ನ್ಯಾಯಾಲಯಗಳು ಮತ್ತು ನ್ಯಾಯಾಧಿಕರಣಗಳ ಪ್ರಕ್ರಿಯೆ ಮತ್ತು ಅಧಿಕಾರಗಳು.**- (1) ಈ ಬಗ್ಗೆ ರಚಿಸಬಹುದಾದ ಯಾವುವೇ ನಿಯಮಗಳಿಗೊಳಪಟ್ಟು, ಮಧ್ಯಸ್ಥಗಾರ, ಮಂಡಲಿ, ನ್ಯಾಯಾಲಯ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ

ನ್ಯಾಯಾಧಿಕರಣವು ಮಧ್ಯಸ್ಥಗಾರ ಅಥವಾ ಸಂಬಂಧಪಟ್ಟ ಇತರ ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸತಕ್ಕುದು.

(2) ಸಂಧಾನಾಧಿಕಾರಿ ಅಥವಾ ಮಂಡಲಿಯ ಸದಸ್ಯ ಅಥವಾ ನ್ಯಾಯಾಲಯ ಅಥವಾ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯು, ಅಸ್ತಿತ್ವದಲ್ಲಿರುವ ಅಥವಾ ಶಂಕಿಸಲಾದ ಯಾವುದೇ ಕೈಗಾರಿಕಾ ವಿವಾದದ ಬಗ್ಗೆ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ಯುಕ್ತ ನೋಟೀಸನ್ನು ನೀಡಿದ ತರುವಾಯ, ವಿವಾದಕ್ಕೆ ಸಂಬಂಧಪಟ್ಟ ಯಾವುದೇ ಸಂಸ್ಥೆಯ ಸ್ವಾಧೀನದಲ್ಲಿರುವ ಆವರಣಗಳನ್ನು ಪ್ರವೇಶಿಸಬಹುದು.

(3) ಪ್ರತಿಯೊಂದು ಮಂಡಲಿ, ನ್ಯಾಯಾಲಯ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಮತ್ತು ರಾಷ್ಟ್ರೀಯ ನ್ಯಾಯಾಧಿಕರಣವು, ಈ ಕೆಳಕಂಡ ವಿಷಯಗಳ ಸಂಬಂಧದಲ್ಲಿ, ದಾವೆಯ ಬಗ್ಗೆ ವಿಚಾರಣೆಯನ್ನು ನಡೆಸುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾದ ಅವೇ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ:-

(ಎ) ಯಾವನೇ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಅವನನ್ನು ಪ್ರಮಾಣಮಾಡಿಸಿ ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳು ಮತ್ತು ಭೌತಿಕ ಪದಾರ್ಥಗಳನ್ನು ಹಾಜರ್ಪಡಿಸಲು ಒತ್ತಾಯಪಡಿಸುವುದು;

(ಸಿ) ಸಾಕ್ಷಿದಾರರನ್ನು ಪರೀಕ್ಷಿಸಲು ಕಮಿಷನ್ನುಗಳನ್ನು ಹೊರಡಿಸುವುದು;

(ಡಿ) ನಿಯಮಿಸಬಹುದಾದಂಥ ಇತರ ವಿಷಯಗಳು ಮತ್ತು ಮಂಡಲಿ, ನ್ಯಾಯಾಲಯ,ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು ನಡೆಸುವ ಪ್ರತಿಯೊಂದು ವಿಚಾರಣೆ ಅಥವಾ ತನಿಖೆಯನ್ನು, ಭಾರತ ದಂಡ ಸಂಹಿತೆ, 1860ರ (1860ರ 45) 193ನೇ ಮತ್ತು 228ನೇ ಪ್ರಕರಣಗಳ ಅರ್ಥದಲ್ಲಿ ನ್ಯಾಯಿಕ ವ್ಯವಹರಣೆ ಎಂದು ಭಾವಿಸತಕ್ಕುದು.

(4) ಸಂಧಾನಾಧಿಕಾರಿಯು, ಯಾವನೇ ವ್ಯಕ್ತಿಯನ್ನು ಪರೀಕ್ಷಿಸುವ ಉದ್ದೇಶಕ್ಕಾಗಿ, ಅಂಥ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಪಡಿಸಬಹುದು ಅಥವಾ ಕೈಗಾರಿಕಾ ವಿವಾದಕ್ಕೆ ಸುಸಂಗತವಾಗಿರುವುದಾಗಿ ಪರಿಗಣಿಸಲು ತನಗೆ ಆಧಾರ ಇರುವಂತಹ ಅಥವಾ ಯಾವುದೇ ಐತೀರ್ಪಿನ ಜಾರಿಯನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ಅಥವಾ ಈ ಅಧಿನಿಯಮದ ಮೇರೆಗೆ ಅವನಿಗೆ ವಿಧಿಸಿದ ಯಾವುದೇ ಇತರ ಕರ್ತವ್ಯವನ್ನು ನಿರ್ವಹಿಸಲು ಅವಶ್ಯವಿರುವ ಯಾವುವೇ ದಸ್ತಾವೇಜುಗಳನ್ನು ತರಿಸಿಕೊಳ್ಳಬಹುದು ಮತ್ತು ಪರಿಶೀಲಿಸಬಹುದು, ಮತ್ತು ಮೇಲೆ ಹೇಳಿದ ಉದ್ದೇಶಗಳಿಗಾಗಿ, ಸಂಧಾನಾಧಿಕಾರಿಯು, ಯಾವನೇ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಪಡಿಸುವ ಮತ್ತು ಅವನನ್ನು ಪರೀಕ್ಷಿಸುವ ಅಥವಾ ದಸ್ತಾವೇಜುಗಳನ್ನು ಹಾಜರ್ಪಡಿಸಲು ಒತ್ತಾಯಿಸುವುದಕ್ಕೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾದ ಅವೇ ಅಧಿಕಾರಗಳನ್ನು ಹೊಂದಿರತಕ್ಕುದು.

(5) ನ್ಯಾಯಾಲಯ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು ತನ್ನ ಮುಂದಿರುವ ವ್ಯವಹರಣೆಗಳಲ್ಲಿ ಸಲಹೆ ನೀಡಲು ನಿರ್ಧಾರಕ ಅಥವಾ ನಿರ್ಧಾರಕರನ್ನಾಗಿ ಪರ್ಯಾಲೋಚನೆಯಲ್ಲಿರುವ ವಿಷಯದ ವಿಶೇಷ ಜ್ಞಾನವನ್ನು ಹೊಂದಿರುವ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ನೇಮಕ ಮಾಡುವುದು ಸೂಕ್ತವೆಂದು ಭಾವಿಸಿದರೆ ಹಾಗೆ ಮಾಡಬಹುದು.

(6) ಎಲ್ಲ ಸಂಧಾನಾಧಿಕಾರಿಗಳು, ಮಂಡಲಿ ಅಥವಾ ನ್ಯಾಯಾಲಯದ ಸದಸ್ಯರು ಮತ್ತು ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಗಳನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥದಲ್ಲಿ ಸರ್ಕಾರಿ ನೌಕರರೆಂದು ಭಾವಿಸತಕ್ಕುದು.

(7) ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುವೇ ನಿಯಮಗಳಿಗೊಳಪಟ್ಟು ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದೆ ಇರುವ ಯಾವುದೇ ವ್ಯವಹರಣೆಯ ವೆಚ್ಚಗಳು ಮತ್ತು ಅದಕ್ಕೆ ಪ್ರಾಸಂಗಿಕ ವೆಚ್ಚಗಳು ಆ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ವಿವೇಚನೆಗೆ ಅನುಸಾರವಾಗಿರತಕ್ಕುದು ಮತ್ತು ಸಂದರ್ಭಾನುಸಾರ ಆ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು, ಅಂಥ ವೆಚ್ಚಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ಯಾರು ಯಾರಿಗೆ ಮತ್ತು ಎಷ್ಟರ ಮಟ್ಟಿಗೆ ಮತ್ತು ಯಾವ ಷರತ್ತುಗಳಿಗೊಳಪಟ್ಟು ಸಂದಾಯಮಾಡತಕ್ಕುದು ಎಂಬುದನ್ನು ನಿರ್ಧರಿಸುವ ಮತ್ತು ಮೇಲೆ ಹೇಳಿದ ಉದ್ದೇಶಗಳಿಗಾಗಿ ಎಲ್ಲ ಅವಶ್ಯಕ ನಿರ್ದೇಶನಗಳನ್ನು ನೀಡುವ ಪೂರ್ಣ ಅಧಿಕಾರವನ್ನು ಹೊಂದಿರತಕ್ಕುದು ಮತ್ತು ಅಂಥ ವೆಚ್ಚಗಳನ್ನು, ಹಕ್ಕುಳ್ಳ ವ್ಯಕ್ತಿಯು ಸಮುಚಿತ ಸರ್ಕಾರಕ್ಕೆ ಅರ್ಜಿಸಲ್ಲಿಸಿದ ಮೇಲೆ ಆ ಸರ್ಕಾರವು ಭೂಕಂದಾಯದ ಬಾಕಿಯನ್ನು ವಸೂಲು ಮಾಡುವ ರೀತಿಯಲ್ಲಿಯೇ ವಸೂಲು ಮಾಡಬಹುದು.

(8) ಪ್ರತಿಯೊಂದು ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 345, 346 ಮತ್ತು 348 ನೇ ಪ್ರಕರಣಗಳ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕುದು.

**11ಎ. ಕೆಲಸಗಾರನನ್ನು ಕೆಲಸದಿಂದ ಬಿಡುಗಡೆ ಮಾಡುವ ಅಥವಾ ವಜಾ ಮಾಡುವ ಸಂದರ್ಭದಲ್ಲಿ ಸಮುಚಿತ ಪರಿಹಾರವನ್ನು ಕೊಡುವ ಬಗ್ಗೆ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಮತ್ತು ರಾಷ್ಟ್ರೀಯ ನ್ಯಾಯಾಧಿಕರಣಗಳ ಅಧಿಕಾರಗಳು.**- ಕೆಲಸಗಾರನನ್ನು ಕೆಲಸದಿಂದ ಬಿಡುಗಡೆ ಮಾಡುವುದಕ್ಕೆ ಅಥವಾ ವಜಾ ಮಾಡುವುದಕ್ಕೆ ಸಂಬಂಧಿಸಿದ ಕೈಗಾರಿಕಾ ವಿವಾದವನ್ನು ನ್ಯಾಯನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಲಾಗಿರುವಲ್ಲಿ ಮತ್ತು ನ್ಯಾಯನಿರ್ಣಯದ ವ್ಯವಹರಣೆಯ ಕ್ರಮದಲ್ಲಿ, ಸಂದರ್ಭಾನುಸಾರ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಬಿಡುಗಡೆ ಅಥವಾ ವಜಾ ಆದೇಶವು ಸಮರ್ಥನೀಯವಾಗಿಲ್ಲವೆಂದು ಮನದಟ್ಟಾದರೆ, ಅದು ತನ್ನ ಐತೀರ್ಪಿನ ಮೂಲಕ ಆ ಬಿಡುಗಡೆ ಅಥವಾ ವಜಾ ಆದೇಶವನ್ನು ತಳ್ಳಿಹಾಕಬಹುದು ಮತ್ತು ಅದು ಸೂಕ್ತವೆಂದು ಭಾವಿಸುವಂಥ ನಿಬಂಧನೆಗಳು ಮತ್ತು ಷರತ್ತುಗಳು ಯಾವುದಾದರೂ ಇದ್ದರೆ, ಅವುಗಳ ಮೇರೆಗೆ ಕೆಲಸಗಾರನನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ಅಥವಾ ಪ್ರಕರಣದ ಪರಿಸ್ಥಿತಿಗಳು ಅಗತ್ಯಪಡಿಸಬಹುದಾದಂತೆ ಬಿಡುಗಡೆ ಅಥವಾ ವಜಾ ಮಾಡುವುದಕ್ಕೆ ಬದಲಾಗಿ ಯಾವುದೇ ಕಡಿಮೆ ಶಿಕ್ಷೆಯ ಐತೀರ್ಪು ಸೇರಿ ಕೆಲಸಗಾರನಿಗೆ ಅಂಥ ಇತರ ಪರಿಹಾರವನ್ನು ಕೊಡುವಂತೆ ನಿರ್ದೇಶಿಸಬಹುದು:

ಪರಂತು, ಈ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ, ಸಂದರ್ಭಾನುಸಾರ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು, ದಾಖಲೆಯಲ್ಲಿರುವ ಸಾಮಗ್ರಿಗಳನ್ನು ಮಾತ್ರವೇ ಆಧರಿಸಿರತಕ್ಕುದು ಮತ್ತು ಆ ವಿಷಯಕ್ಕೆ ಸಂಬಂಧಿಸಿದ ಯಾವುದೇ ಹೊಸ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕುದಲ್ಲ.

**12. ಸಂಧಾನಾಧಿಕಾರಿಗಳ ಕರ್ತವ್ಯಗಳು.**- (1) ಯಾವುದೇ ಕೈಗಾರಿಕಾ ವಿವಾದವು ಅಸ್ತಿತ್ವದಲ್ಲಿ ಇರುವಲ್ಲಿ ಅಥವಾ ಅದನ್ನು ಶಂಕಿಸಲಾಗಿರುವಲ್ಲಿ ಸಂಧಾನಾಧಿಕಾರಿಯು, ನಿಯಮಿಸಿದ ರೀತಿಯಲ್ಲಿ ಸಂಧಾನ ವ್ಯವಹರಣೆಯನ್ನು ನಡೆಸಬಹುದು ಅಥವಾ ವಿವಾದವು ಸಾರ್ವಜನಿಕ ಪ್ರಯೋಜನಾ ಸೇವೆಗೆ ಸಂಬಂಧಿಸಿದ್ದು 22ನೇ ಪ್ರಕರಣದ ಮೇರೆಗೆ ನೋಟೀಸನ್ನು ನೀಡಲಾಗಿರುವಲ್ಲಿ ಅಂಥ ವ್ಯವಹರಣೆಗಳನ್ನು ನಡೆಸತಕ್ಕುದು.

(2) ವಿಳಂಬವಿಲ್ಲದೆ ಸಂಧಾನಾಧಿಕಾರಿಯು, ವಿವಾದವನ್ನು ಇತ್ಯರ್ಥಗೊಳಿಸುವ ಉದ್ದೇಶಕ್ಕಾಗಿ ವಿವಾದವನ್ನು ಮತ್ತು ವಿವಾದದ ಗುಣಾವಗುಣಗಳಿಗೆ ಮತ್ತು ಸೂಕ್ತ ಇತ್ಯರ್ಥಕ್ಕೆ ಸಂಬಂಧಪಡುವ ಎಲ್ಲ ವಿಷಯಗಳನ್ನು ತನಿಖೆ ಮಾಡತಕ್ಕುದು ಮತ್ತು ಪಕ್ಷಕಾರರು ವಿವಾದದ ಬಗ್ಗೆ ನಿಷ್ಪಕ್ಷಪಾತ ಮತ್ತು

ಸೌಹಾರ್ದಯುತ ಇತ್ಯರ್ಥಕ್ಕೆ ಬರುವಂತೆ ಮನವೊಲಿಸುವ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸುವಂಥ ಎಲ್ಲ ಕಾರ್ಯಗಳನ್ನು ಮಾಡಬಹುದು.

(3) ಸಂಧಾನ ವ್ಯವಹರಣೆಗಳ ಕ್ರಮದಲ್ಲಿ ವಿವಾದದ ಅಥವಾ ವಿವಾದದಲ್ಲಿರುವ ವಿಷಯಗಳಲ್ಲಿ ಯಾವುದಾದರೂ ಇತ್ಯರ್ಥವಾಗಿದ್ದರೆ ಸಂಧಾನಾಧಿಕಾರಿಯು, ಸಮುಚಿತ ಸರ್ಕಾರಕ್ಕೆ ಅಥವಾ ಸಮುಚಿತ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಅಧಿಕಾರಿಗೆ ಅದರ ವರದಿಯನ್ನು ವಿವಾದದ ಪಕ್ಷಕಾರರು ಸಹಿಮಾಡಿದ ಇತ್ಯರ್ಥದ ವಿವರಣೆಯ ಸಹಿತ ಕಳುಹಿಸತಕ್ಕುದು.

(4) ಅಂಥ ಯಾವುದೇ ಇತ್ಯರ್ಥಕ್ಕೆ ಬರಲಾಗದಿದ್ದರೆ ಸಂಧಾನಾಧಿಕಾರಿಯು, ತನಿಖೆಯು ಮುಗಿದ ನಂತರ ಸಾಧ್ಯವಾದಷ್ಟು ಬೇಗನೆ, ಸಮುಚಿತ ಸರ್ಕಾರಕ್ಕೆ, ವಿವಾದಕ್ಕೆ ಸಂಬಂಧಿಸಿದ ಸಂಗತಿಗಳು ಮತ್ತು ಪರಿಸ್ಥಿತಿಗಳನ್ನು ತಿಳಿದುಕೊಳ್ಳಲು ಮತ್ತು ಅದನ್ನು ಇತ್ಯರ್ಥಮಾಡಲು ಅವನು ಕೈಗೊಂಡ ಕ್ರಮಗಳನ್ನು ನಿರೂಪಿಸುತ್ತಾ, ಅಂಥ ಸಂಗತಿಗಳು ಮತ್ತು ಪರಿಸ್ಥಿತಿಗಳ ಮತ್ತು ಅವನ ಅಭಿಪ್ರಾಯದಲ್ಲಿ ಯಾವ ಕಾರಣಗಳಿಗಾಗಿ ಇತ್ಯರ್ಥ ಮಾಡಲು ಸಾಧ್ಯವಾಗಲಿಲ್ಲ ಎಂಬ ಬಗ್ಗೆ ಕಾರಣಗಳ ಪೂರ್ಣ ವಿವರಣೆಯೊಂದಿಗೆ ಪೂರ್ಣ ವರದಿಯನ್ನು ಕಳುಹಿಸತಕ್ಕುದು.

(5) (4)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ವರದಿಯನ್ನು ಪರ್ಯಾಲೋಚಿಸಿದ ಮೇಲೆ, ಸಮುಚಿತ ಸರ್ಕಾರಕ್ಕೆ ಮಂಡಲಿ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖ ಮಾಡುವುದು ಸಮರ್ಥನೀಯವೆಂದು ಮನದಟ್ಟಾದರೆ, ಅದು ಅಂಥ ಉಲ್ಲೇಖವನ್ನು ಮಾಡಬಹುದು. ಸಮುಚಿತ ಸರ್ಕಾರವು, ಅಂಥ ಉಲ್ಲೇಖವನ್ನು ಮಾಡದಿರುವಲ್ಲಿ, ಅದು ಆ ಬಗ್ಗೆ ಕಾರಣಗಳನ್ನು ದಾಖಲು ಮಾಡತಕ್ಕುದು ಮತ್ತು ಸಂಬಂಧಪಟ್ಟ ಪಕ್ಷಕಾರರಿಗೆ ತಿಳಿಸತಕ್ಕುದು.

(6) ಈ ಪ್ರಕರಣದ ಮೇರೆಗಿನ ವರದಿಯನ್ನು, ಸಂಧಾನದ ವ್ಯವಹರಣೆಗಳು ಪ್ರಾರಂಭವಾದ ಹದಿನಾಲ್ಕು ದಿವಸಗಳೊಳಗೆ ಅಥವಾ ಸಮುಚಿತ ಸರ್ಕಾರವು ನಿಗದಿಪಡಿಸಬಹುದಾದಂಥ ಅದಕ್ಕಿಂತ ಕಡಿಮೆ ಅವಧಿಯೊಳಗೆ ಸಲ್ಲಿಸತಕ್ಕುದು:

ಪರಂತು, ಸಂಧಾನಾಧಿಕಾರಿಯ ಅನುಮೋದನೆಗೊಳಪಟ್ಟು ಆ ವರದಿಯನ್ನು ಸಲ್ಲಿಸುವಿಕೆಯ ಸಮಯವನ್ನು ವಿವಾದದ ಎಲ್ಲ ಪಕ್ಷಕಾರರು ಲಿಖಿತದಲ್ಲಿ ಒಪ್ಪಿಕೊಳ್ಳಬಹುದಾದಂಥ ಅವಧಿಯವರೆಗೆ ವಿಸ್ತರಿಸಬಹುದು.

**13. ಮಂಡಲಿಯ ಕರ್ತವ್ಯಗಳು.**- (1) ಈ ಅಧಿನಿಯಮದ ಮೇರೆಗೆ ವಿವಾದವನ್ನು ಮಂಡಲಿಗೆ ಉಲ್ಲೇಖಿಸಲಾಗಿರುವಲ್ಲಿ, ಅದನ್ನು ಇತ್ಯರ್ಥಗೊಳಿಸುವ ಬಗ್ಗೆ ಪ್ರಯತ್ನಿಸುವುದು ಮಂಡಲಿಯ ಕರ್ತವ್ಯವಾಗಿರತಕ್ಕುದು ಮತ್ತು ಈ ಉದ್ದೇಶಕ್ಕಾಗಿ ಮಂಡಲಿಯು, ಅದು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಮತ್ತು ವಿಳಂಬ ಮಾಡದೆ ವಿವಾದವನ್ನು ಮತ್ತು ಅದರ ಗುಣಾವಗುಣಗಳಿಗೆ ಮತ್ತು ಸೂಕ್ತ ಇತ್ಯರ್ಥಕ್ಕೆ ಸಂಬಂಧಪಡುವ ಎಲ್ಲ ವಿಷಯಗಳನ್ನು ತನಿಖೆ ಮಾಡತಕ್ಕುದು ಮತ್ತು ಪಕ್ಷಕಾರರು ವಿವಾದದ ಬಗ್ಗೆ ನಿಷ್ಪಕ್ಷಪಾತ ಮತ್ತು ಸೌಹಾರ್ದಯುತ ಇತ್ಯರ್ಥಕ್ಕೆ ಬರುವಂತೆ ಮನವೊಲಿಸುವ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸುವಂಥ ಕಾರ್ಯಗಳನ್ನು ಮಾಡಬಹುದು.

(2) ಸಂಧಾನದ ವ್ಯವಹರಣೆಗಳ ಕ್ರಮದಲ್ಲಿ ವಿವಾದದ ಅಥವಾ ವಿವಾದದಲ್ಲಿರುವ ವಿಷಯಗಳಲ್ಲಿ ಯಾವುದಾದರೂ ಇತ್ಯರ್ಥವಾಗಿದ್ದರೆ, ಮಂಡಲಿಯು, ಸಮುಚಿತ ಸರ್ಕಾರಕ್ಕೆ ಅದರ ವರದಿಯನ್ನು ವಿವಾದದ ಪಕ್ಷಕಾರರು ಸಹಿಮಾಡಿದ ಇತ್ಯರ್ಥದ ವಿವರಣೆಯ ಸಹಿತ ಕಳುಹಿಸತಕ್ಕುದು.

(3) ಅಂಥ ಯಾವುದೇ ಇತ್ಯರ್ಥಕ್ಕೆ ಬರಲಾಗದಿದ್ದರೆ, ಮುಂಡಲಿಯು, ತನಿಖೆಯು ಮುಗಿದ ನಂತರ ಸಾಧ್ಯವಾದಷ್ಟು ಬೇಗನೆ ಸಮುಚಿತ ಸರ್ಕಾರಕ್ಕೆ, ವಿವಾದಕ್ಕೆ ಸಂಬಂಧಿಸಿದ ವ್ಯವಹರಣೆಗಳನ್ನು ಮತ್ತು ಸಂಗತಿಗಳು ಮತ್ತು ಪರಿಸ್ಥಿತಿಗಳನ್ನು ತಿಳಿದುಕೊಳ್ಳಲು ಮತ್ತು ಅದನ್ನು ಇತ್ಯರ್ಥಮಾಡಲು ಮಂಡಲಿಯು ಕೈಗೊಂಡ ಕ್ರಮಗಳನ್ನು ನಿರೂಪಿಸುವ ಪೂರ್ಣ ವರದಿಯನ್ನು ಅಂಥ ಸಂಗತಿಗಳು ಮತ್ತು ಪರಿಸ್ಥಿತಿಗಳು

ಮತ್ತು ಅದರ ನಿರ್ಣಯಗಳು, ಅದರ ಅಭಿಪ್ರಾಯದಲ್ಲಿ ಯಾವ ಕಾರಣಗಳಿಗಾಗಿ ಇತ್ಯರ್ಥಮಾಡಲು ಸಾಧ್ಯವಾಗಲಿಲ್ಲವೋ ಆ ಕಾರಣಗಳು ಮತ್ತು ವಿವಾದವನ್ನು ನಿರ್ಧರಿಸಲು ತಾನು ಮಾಡಿದ ಶಿಫಾರಸ್ಸುಗಳ ಪೂರ್ಣ ವಿವರಣೆಯೊಂದಿಗೆ ಕಳುಹಿಸತಕ್ಕುದು.

(4) ಸಾರ್ವಜನಿಕ ಪ್ರಯೋಜನಾ ಸೇವೆಗೆ ಸಂಬಂಧಿಸಿದ ವಿವಾದದ ಬಗ್ಗೆ (3) ನೇ ಉಪ-ಪ್ರಕರಣದ ಮೇರೆಗೆ ವರದಿಯನ್ನು ಸ್ವೀಕರಿಸಿದ ಮೇಲೆ, ಸಮುಚಿತ ಸರ್ಕಾರವು, 10ನೇ ಪ್ರಕರಣದ ಮೇರೆಗೆ ಅದನ್ನು ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖಿಸದಿದ್ದರೆ, ಅದು ಆ ಬಗ್ಗೆ ತನ್ನ ಕಾರಣಗಳನ್ನು ದಾಖಲು ಮಾಡಿ ಸಂಬಂಧಪಟ್ಟ ಪಕ್ಷಕಾರರಿಗೆ ಕಳುಹಿಸತಕ್ಕುದು.

(5) ಮಂಡಲಿಯು, ಈ ಪ್ರಕರಣದ ಮೇರೆಗೆ ತನ್ನ ವರದಿಯನ್ನು, ತನಗೆ ಆ ವಿವಾದವನ್ನು ಉಲ್ಲೇಖಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ಅಥವಾ ಸಮುಚಿತ ಸರ್ಕಾರವು ನಿಗದಿಪಡಿಸಬಹುದಾದಂಥ ಅದಕ್ಕಿಂತ ಕಡಿಮೆ ಅವಧಿಯೊಳಗೆ ಸಲ್ಲಿಸತಕ್ಕುದು:

ಪರಂತು, ಸಮುಚಿತ ಸರ್ಕಾರವು, ವರದಿಯನ್ನು ಸಲ್ಲಿಸುವ ಸಮಯವನ್ನು ಒಟ್ಟಿನಲ್ಲಿ ಎರಡು ತಿಂಗಳುಗಳನ್ನು ಮೀರದ ಇನ್ನಷ್ಟು ಅವಧಿಗಳವರೆಗೆ ಕಾಲಕಾಲಕ್ಕೆ ವಿಸ್ತರಿಸಬಹುದು:

ಮತ್ತೂ ಪರಂತು, ವರದಿಯನ್ನು ಸಲ್ಲಿಸುವ ಸಮಯವನ್ನು ವಿವಾದದ ಎಲ್ಲ ಪಕ್ಷಕಾರರು ಲಿಖಿತದಲ್ಲಿ ಒಪ್ಪಿಕೊಳ್ಳಬಹುದಾದಂಥ ಅವಧಿಯವರೆಗೆ ವಿಸ್ತರಿಸಬಹುದು.

**14. ನ್ಯಾಯಾಲಯಗಳ ಕರ್ತವ್ಯಗಳು.-** ನ್ಯಾಯಾಲಯವು, ತನಗೆ ಉಲ್ಲೇಖಿಸಿದ ವಿಷಯದ ಬಗ್ಗೆ, ವಿಚಾರಣೆ ಮಾಡತಕ್ಕುದು ಮತ್ತು ಸಾಮಾನ್ಯವಾಗಿ ತಾನು ನಡೆಸುವ ವಿಚಾರಣೆಯ ಪ್ರಾರಂಭದಿಂದ ಆರು ತಿಂಗಳುಗಳ ಅವಧಿಯೊಳಗೆ ಆ ಬಗ್ಗೆ ಸಮುಚಿತ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕುದು.

**15. ಕಾರ್ಮಿಕ ನ್ಯಾಯಾಲಯಗಳು, ನ್ಯಾಯಾಧಿಕರಣಗಳು ಮತ್ತು ರಾಷ್ಟ್ರೀಯ ನ್ಯಾಯಾಧಿಕರಣದ ಕರ್ತವ್ಯಗಳು.-** ಕೈಗಾರಿಕಾ ವಿವಾದವನ್ನು ನ್ಯಾಯನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಲಾಗಿರುವಲ್ಲಿ, ಅದು ತನ್ನ ವ್ಯವಹರಣೆಗಳನ್ನು ತ್ವರಿತವಾಗಿ ನಡೆಸತಕ್ಕುದು ಮತ್ತು ಅಂಥ ಕೈಗಾರಿಕಾ ವಿವಾದವನ್ನು ಉಲ್ಲೇಖಿಸಿದ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಥವಾ 10ನೇ ಪ್ರಕರಣದ 2(ಎ) ಉಪ ಪ್ರಕರಣದ ಎರಡನೇ ಪರಂತುಕದ ಮೇರೆಗೆ ವಿಸ್ತರಿಸಿದ ಇನ್ನಷ್ಟು ಅವಧಿಯೊಳಗೆ ತನ್ನ ಐತೀರ್ಪನ್ನು ಸಮುಚಿತ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**16. ವರದಿ ಅಥವಾ ಐತೀರ್ಪಿನ ನಮೂನೆ.-** (1) ಮಂಡಲಿ ಅಥವಾ ನ್ಯಾಯಾಲಯದ ವರದಿಯು ಲಿಖಿತದಲ್ಲಿರತಕ್ಕುದು ಮತ್ತು ಅದಕ್ಕೆ ಸಂದರ್ಭಾನುಸಾರ, ಮಂಡಲಿ ಅಥವಾ ನ್ಯಾಯಾಲಯದ ಎಲ್ಲ ಸದಸ್ಯರು ಸಹಿಮಾಡಿರತಕ್ಕುದು:

ಪರಂತು, ಈ ಪ್ರಕರಣದಲ್ಲಿ ಇರುವುದಾವುದೂ, ಮಂಡಲಿ ಅಥವಾ ನ್ಯಾಯಾಲಯದ ಯಾವನೇ ಸದಸ್ಯನನ್ನು ವರದಿಗೆ ಅಥವಾ ಅದರಲ್ಲಿ ಮಾಡಿದ ಯಾವುದೇ ಶಿಫಾರಸ್ಸಿಗೆ ಯಾವುದೇ ಭಿನ್ನಾಭಿಪ್ರಾಯದ ಟಿಪ್ಪಣಿಯನ್ನು ದಾಖಲು ಮಾಡದಂತೆ ತಡೆಯುವುದಾಗಿ ಭಾವಿಸತಕ್ಕುದಲ್ಲ.

(2) ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಐತೀರ್ಪು ಲಿಖಿತದಲ್ಲಿರತಕ್ಕುದು ಮತ್ತು ಅದಕ್ಕೆ ಅದರ ಅಧ್ಯಕ್ಷಾಧಿಕಾರಿಯು ಸಹಿಮಾಡತಕ್ಕುದು.

**17. ವರದಿಗಳು ಮತ್ತು ಐತೀರ್ಪುಗಳ ಪ್ರಕಟಣೆ.-** (1) ಮಂಡಲಿ ಅಥವಾ ನ್ಯಾಯಾಲಯದ ಪ್ರತಿಯೊಂದು ವರದಿಯನ್ನು ಅದರ ಜೊತೆ ದಾಖಲಿಸಿದ ಯಾವುದೇ ಭಿನ್ನಾಭಿಪ್ರಾಯದ ಟಿಪ್ಪಣಿ ಸಮೇತ ಪ್ರತಿಯೊಂದು ಮಧ್ಯಸ್ಥಿಕೆ ಐತೀರ್ಪನ್ನು ಮತ್ತು ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಪ್ರತಿಯೊಂದು ಐತೀರ್ಪನ್ನು ಸಮುಚಿತ ಸರ್ಕಾರವು ಸ್ವೀಕರಿಸಿದ

ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗೆ, ಸಮುಚಿತ ಸರ್ಕಾರವು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಪ್ರಕಟಿಸತಕ್ಕುದು.

(2) 17ಎ ಪ್ರಕರಣದ ಉಪಬಂಧಗಳಿಗೊಳಪಟ್ಟು, (1)ನೇ ಉಪ-ಪ್ರಕರಣದ ಮೇರೆಗೆ ಪ್ರಕಟಿಸಿದ ಐತೀರ್ಪು ಅಂತಿಮವಾಗಿರತಕ್ಕುದು ಮತ್ತು ಅದನ್ನು ಯಾವುದೇ ರೀತಿಯಲ್ಲಿ ಯಾವುದೇ ನ್ಯಾಯಾಲಯವು ಪ್ರಶ್ನಿಸತಕ್ಕುದಲ್ಲ.

**17ಎ. ಐತೀರ್ಪಿನ ಪ್ರಾರಂಭ.**- (1) ಐತೀರ್ಪು (ಮಧ್ಯಸ್ಥಿಕೆ ಐತೀರ್ಪು ಸೇರಿದಂತೆ 17ನೇ ಪ್ರಕರಣದ ಮೇರೆಗೆ ಅದರ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿವಸಗಳು ಮುಕ್ತಾಯವಾದ ನಂತರ ಜಾರಿಗೆ ಬರತಕ್ಕುದು:

ಪರಂತು,-

(ಎ) ಸಮುಚಿತ ಸರ್ಕಾರವು ಪಕ್ಷಕಾರನಾಗಿರುವ ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿ ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ಐತೀರ್ಪನ್ನು ಕೊಟ್ಟಿರುವ ಯಾವುದೇ ಸಂದರ್ಭದಲ್ಲಿ, ಆ ಸಮುಚಿತ ಸರ್ಕಾರವು; ಅಥವಾ

(ಬಿ) ರಾಷ್ಟ್ರೀಯ ನ್ಯಾಯಾಧಿಕರಣವು ಐತೀರ್ಪು ಕೊಟ್ಟಿರುವ ಯಾವುದೇ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು-

-ಇಡೀ ತೀರ್ಪನ್ನು ಅಥವಾ ಅದರ ಯಾವುದೇ ಭಾಗವನ್ನು ಜಾರಿಗೊಳಿಸಿದರೆ, ಅದು ರಾಷ್ಟ್ರದ ಅರ್ಥ ವ್ಯವಸ್ಥೆಗೆ ಅಥವಾ ಸಾಮಾಜಿಕ ನ್ಯಾಯಕ್ಕೆ ಬಾಧಕವಾಗುವುದೆಂಬ ಸಾರ್ವಜನಿಕ ಕಾರಣಗಳ ಮೇಲೆ ವಿಹಿತವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟರೆ, ಸಂದರ್ಭಾನುಸಾರ, ಆ ಸಮುಚಿತ ಸರ್ಕಾರ ಅಥವಾ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಮೂವತ್ತು ದಿವಸಗಳ ಸದರಿ ಅವಧಿಯು ಮುಗಿದ ನಂತರ ಐತೀರ್ಪು ಜಾರಿಯಾಗತಕ್ಕುದಲ್ಲವೆಂದು ಘೋಷಿಸಬಹುದು.

(2) (1)ನೇ ಉಪ-ಪ್ರಕರಣದ ಪರಂತುಕದ ಮೇರೆಗೆ, ಐತೀರ್ಪಿನ ಸಂಬಂಧದಲ್ಲಿ ಯಾವುದೇ ಘೋಷಣೆಯನ್ನು ಮಾಡಿರುವಲ್ಲಿ, ಸಮುಚಿತ ಸರ್ಕಾರ ಅಥವಾ ಕೇಂದ್ರಸರ್ಕಾರವು, 17ನೇ ಪ್ರಕರಣದ ಮೇರೆಗೆ ಐತೀರ್ಪನ್ನು ಪ್ರಕಟಿಸಿದ ದಿನಾಂಕದಿಂದ ತೊಂಬತ್ತು ದಿವಸಗಳೊಳಗೆ, ಆ ಐತೀರ್ಪನ್ನು ತಿರಸ್ಕರಿಸುವ ಅಥವಾ ಮಾರ್ಪಾಟು ಮಾಡುವ ಆದೇಶವನ್ನು ಮಾಡಬಹುದು ಮತ್ತು ಲಭ್ಯವಾಗುವ ಮೊದಲ ಅವಕಾಶದಲ್ಲಿ, ಆ ಐತೀರ್ಪನ್ನು ಆದೇಶದ ಪ್ರತಿಯ ಜೊತೆಯಲ್ಲಿ, ಆದೇಶವನ್ನು ರಾಜ್ಯ ಸರ್ಕಾರವು ಮಾಡಿದ್ದರೆ ರಾಜ್ಯ ವಿಧಾನ ಮಂಡಲದ ಮುಂದೆ ಅಥವಾ ಆದೇಶವನ್ನು ಕೇಂದ್ರ ಸರ್ಕಾರವು ಮಾಡಿದ್ದರೆ ಸಂಸತ್ತಿನ ಮುಂದೆ ಇಡತಕ್ಕುದು.

(3) (2)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಆದೇಶದ ಮೂಲಕ ತಿರಸ್ಕರಿಸಲಾದಂತೆ ಅಥವಾ ಮಾರ್ಪಾಟುಗೊಳಿಸಲಾದಂತೆ ಯಾವುದೇ ಐತೀರ್ಪನ್ನು ರಾಜ್ಯದ ವಿಧಾನ ಮಂಡಲದ ಮುಂದೆ ಅಥವಾ ಸಂಸತ್ತಿನ ಮುಂದೆ ಮಂಡಿಸಿರುವಲ್ಲಿ, ಅಂಥ ಐತೀರ್ಪು ಅದನ್ನು ಹಾಗೆ ಮಂಡಿಸಿದ ದಿನಾಂಕದಿಂದ ಹದಿನೈದು ದಿನಗಳು ಮುಗಿದ ನಂತರ ಜಾರಿಯಾಗತಕ್ಕುದು ಮತ್ತು (1)ನೇ ಉಪ-ಪ್ರಕರಣದ ಪರಂತುಕದ ಮೇರೆಗಿನ ಘೋಷಣೆಯ ಅನುಸರಣೆಯಲ್ಲಿ (2) ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡದಿದ್ದರೆ, ಆ ಐತೀರ್ಪು, (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ತೊಂಬತ್ತು ದಿನಗಳು ಮುಗಿದ ಮೇಲೆ ಜಾರಿಯಾಗತಕ್ಕುದು.

(4) ಐತೀರ್ಪನ್ನು ಜಾರಿಗೊಳಿಸುವ ಬಗೆಗಿನ (1)ನೇ ಉಪ-ಪ್ರಕರಣದ ಮತ್ತು (3)ನೇ ಉಪ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಐತೀರ್ಪು ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕುದು, ಆದರೆ ಹಾಗೆ ಯಾವುದೇ ದಿನಾಂಕವನ್ನು ನಿರ್ದಿಷ್ಟಪಡಿಸದಿದ್ದರೆ, ಆ ಐತೀರ್ಪು,

ಸಂದರ್ಭಾನುಸಾರವಾಗಿ (1)ನೇ ಉಪ-ಪ್ರಕರಣದ ಅಥವಾ (3)ನೇ ಉಪ-ಪ್ರಕರಣದ ಮೇರೆಗೆ ಜಾರಿಯಾಗುವ ದಿನಾಂಕದಂದು ಪ್ರವರ್ತನೆಗೆ ಬರತಕ್ಕುದು.

**17ಬಿ. ಮೇಲಿನ ನ್ಯಾಯಾಲಯಗಳಲ್ಲಿ ವ್ಯವಹರಣೆಗಳು ಇತ್ಯರ್ಥದಲ್ಲಿರುವಾಗ ಕೆಲಸಗಾರನಿಗೆ ಪೂರ್ಣ ಮಜೂರಿಗಳ ಸಂದಾಯ.**- ಯಾವುದೇ ಪ್ರಕರಣದಲ್ಲಿ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು ತನ್ನ ಐತೀರ್ಪಿನ ಮೂಲಕ ಯಾವನೇ ಕೆಲಸಗಾರನನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ನಿರ್ದೇಶಿಸಿರುವಲ್ಲಿ ಮತ್ತು ನಿಯೋಜಕನು, ಅಂಥ ಐತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿ ಯಾವುದೇ ವ್ಯವಹರಣೆಗಳನ್ನು ಸಲ್ಲಿಸಿರುವಲ್ಲಿ, ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿ ಅಂಥ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಅಂಥ ಕೆಲಸಗಾರನಿಗೆ ನಿಯೋಜಕನು, ಅವನು ಕೊನೆಯಲ್ಲಿ ಪಡೆದ ಪೂರ್ಣ ಮಜೂರಿಗಳನ್ನು, ಅಂಥ ಅವಧಿಯಲ್ಲಿ ಆ ಕೆಲಸಗಾರನು ಯಾವುದೇ ಕಾರ್ಯಸಂಸ್ಥೆಯಲ್ಲಿ ನಿಯೋಜಿತನಾಗಿರದಿದ್ದರೆ ಮತ್ತು ಅಂಥ ನ್ಯಾಯಾಲಯದಲ್ಲಿ ಹಾಗೆಂದು ಅಂಥ ಕೆಲಸಗಾರನು ಶಪಥಪತ್ರವನ್ನು ಸಲ್ಲಿಸಿದ್ದರೆ ಯಾವುದೇ ನಿಯಮದ ಮೇರೆಗೆ ಅವನಿಗೆ ಅನುಮತಿಸಬಹುದಾಗಿದ್ದ ಯಾವುದೇ ಜೀವನಾಂಶ ಭತ್ಯವೂ ಸೇರಿ ಸಂದಾಯ ಮಾಡಲು ಬದ್ಧನಾಗಿರತಕ್ಕುದು:

ಪರಂತು, ಅಂಥ ಕೆಲಸಗಾರನು, ಅಂಥ ಯಾವುದೇ ಆ ಅವಧಿಯಲ್ಲಿ ಅಥವಾ ಆ ಅವಧಿಯ ಯಾವುದೇ ಭಾಗದಲ್ಲಿ ನಿಯೋಜಿತನಾಗಿದ್ದು, ಸಾಕಷ್ಟು ಪರಿಶ್ರಮ ಧನವನ್ನು ಪಡೆಯುತ್ತಿದ್ದನೆಂದು ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ರುಜುವಾತು ಪಡಿಸಿರುವಲ್ಲಿ, ನ್ಯಾಯಾಲಯವು, ಅಂಥ ಅವಧಿಗೆ ಅಥವಾ ಸಂದರ್ಭಾನುಸಾರ, ಅದರ ಭಾಗಕ್ಕೆ ಈ ಪ್ರಕರಣದ ಮೇರೆಗೆ ಯಾವುವೇ ಮಜೂರಿಗಳನ್ನು ಸಂದಾಯ ಮಾಡತಕ್ಕುದಲ್ಲವೆಂದು ಆದೇಶಿಸತಕ್ಕುದು.

**18. ಒಪ್ಪಂದಗಳು ಮತ್ತು ಐತೀರ್ಪುಗಳಿಗೆ ಬದ್ಧರಾಗತಕ್ಕ ವ್ಯಕ್ತಿಗಳು.**- (1) ನಿಯೋಜಕ ಮತ್ತು ಕೆಲಸಗಾರನ ನಡುವೆ ಸಂಧಾನ ವ್ಯವಹರಣೆಯ ಕ್ರಮದಲ್ಲಿ ಹೊರತು ಅನ್ಯಥಾ ಒಪ್ಪಂದದ ಮೂಲಕ ಮಾಡಿಕೊಂಡ ಇತ್ಯರ್ಥಕ್ಕೆ ಒಪ್ಪಂದದ ಪಕ್ಷಕಾರರು ಬದ್ಧರಾಗತಕ್ಕುದು.

(2) (3)ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಜಾರಿಗೊಳಿಸಬೇಕಾದ ಮಧ್ಯಸ್ಥಿಕೆ ಐತೀರ್ಪಿಗೆ, ವಿವಾದವನ್ನು ಮಧ್ಯಸ್ಥಿಕೆಗೆ ಉಲ್ಲೇಖಿಸಿದ ಒಪ್ಪಂದದ ಪಕ್ಷಕಾರರು ಬದ್ಧರಾಗತಕ್ಕುದು.

(3) ಈ ಅಧಿನಿಯಮದ ಮೇರೆಗಿನ ಸಂಧಾನ ವ್ಯವಹರಣೆಯ ಕ್ರಮದಲ್ಲಿ ಮಾಡಿಕೊಂಡ ಇತ್ಯರ್ಥ ಅಥವಾ 10ಎ ಪ್ರಕರಣದ (3ಎ) ಉಪ-ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿರುವಲ್ಲಿ ಮಧ್ಯಸ್ಥಿಕೆ ಐತೀರ್ಪು ಅಥವಾ ಜಾರಿಗೊಳಿಸಬೇಕಾದ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಐತೀರ್ಪು ಇವುಗಳಿಗೆ-

(ಎ) ಕೈಗಾರಿಕಾ ವಿವಾದದ ಎಲ್ಲಾ ಪಕ್ಷಕಾರರು;

(ಬಿ) ವಿವಾದಕ್ಕೆ ಪಕ್ಷಕಾರರಾಗಿ ವ್ಯವಹರಣೆಗಳಲ್ಲಿ ಹಾಜರಾಗಬೇಕೆಂದು ಸಮನು ಮಾಡಲಾದ ಇತರ ಎಲ್ಲ ಪಕ್ಷಕಾರರು, ಸಂದರ್ಭಾನುಸಾರ ಮಂಡಲಿ, ಮಧ್ಯಸ್ಥಗಾರ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು ಸೂಕ್ತ ಕಾರಣವಿಲ್ಲದೆ ಅವರನ್ನು ಹಾಗೆ ಸಮನು ಮಾಡಲಾಗಿತ್ತೆಂಬ ಅಭಿಪ್ರಾಯವನ್ನು ದಾಖಲು ಮಾಡಿದ್ದ ಹೊರತು;

(ಸಿ) (ಎ) ಖಂಡ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಪಕ್ಷಕಾರನು ನಿಯೋಜಕನಾಗಿದ್ದರೆ, ವಿವಾದಕ್ಕೆ ಸಂಬಂಧಪಟ್ಟ ಕಾರ್ಯಸಂಸ್ಥೆಯ ಸಂಬಂಧದಲ್ಲಿ ಅವನ ವಾರಸುದಾರರು, ಉತ್ತರಾಧಿಕಾರಿಗಳು ಅಥವಾ ಹಸ್ತಾಂತರಣ ಪಡೆದವರು;

(ಡಿ) (ಎ) ಖಂಡ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಪಕ್ಷಕಾರನು ಕೆಲಸಗಾರರಿಂದ ಕೂಡಿದ್ದರೆ, ವಿವಾದದ ದಿನಾಂಕದಂದು, ಸಂದರ್ಭಾನುಸಾರ, ವಿವಾದಕ್ಕೆ ಸಂಬಂಧಪಟ್ಟ ಸ್ಥಾಪನೆ ಅಥವಾ

ಸ್ಥಾಪನೆಯ ಭಾಗದಲ್ಲಿ ನಿಯೋಜಿತರಾಗಿದ್ದ ಎಲ್ಲಾ ವ್ಯಕ್ತಿಗಳು ಮತ್ತು ಆ ತರುವಾಯ ಆ ಸ್ಥಾಪನೆ ಅಥವಾ ಅದರ ಭಾಗದಲ್ಲಿ ನಿಯೋಜಿತರಾಗಿರುವ ಎಲ್ಲಾ ವ್ಯಕ್ತಿಗಳು

- ಬದ್ಧರಾಗತಕ್ಕುದು.

**19. ಇತ್ಯರ್ಥಗಳು ಮತ್ತು ಐತೀರ್ಪುಗಳ ಪ್ರವರ್ತನೆಯ ಅವಧಿ.**- (1) ಇತ್ಯರ್ಥವು ವಿವಾದದ ಪಕ್ಷಕಾರರು ಒಪ್ಪಿಕೊಂಡ ದಿನಾಂಕದಂದು ಜಾರಿಗೆ ಬರತಕ್ಕುದು, ಮತ್ತು ಯಾವುದೇ ದಿನಾಂಕವನ್ನು ಒಪ್ಪಿಕೊಂಡಿರದಿದ್ದರೆ, ವಿವಾದದ ಪಕ್ಷಕಾರರು ಇತ್ಯರ್ಥ ಪತ್ರಕ್ಕೆ ಸಹಿ ಮಾಡಿದ ದಿನಾಂಕದಂದು ಪ್ರವರ್ತನೆಗೆ ಬರತಕ್ಕುದು.

(2) ಇಂಥ ಇತ್ಯರ್ಥವು ಪಕ್ಷಕಾರರು ಒಪ್ಪಂದ ಮಾಡಿಕೊಂಡಂಥ ಅವಧಿಗೆ ಮತ್ತು ಅಂಥ ಯಾವುದೇ ಅವಧಿಗೆ ಒಪ್ಪಂದ ಮಾಡಿಕೊಳ್ಳದಿದ್ದರೆ, ವಿವಾದದ ಪಕ್ಷಕಾರರು ಇತ್ಯರ್ಥ ಪತ್ರಕ್ಕೆ ಸಹಿ ಮಾಡಿದ ದಿನಾಂಕದಿಂದ ಆರು ತಿಂಗಳ ಅವಧಿಗೆ ಬಂಧನಕಾರಿಯಾಗತಕ್ಕುದು, ಮತ್ತು ಇತ್ಯರ್ಥದ ಒಬ್ಬ ಪಕ್ಷಕಾರನು ಇತರ ಪಕ್ಷಕಾರನಿಗೆ ಅಥವಾ ಪಕ್ಷಕಾರರಿಗೆ ಇತ್ಯರ್ಥವನ್ನು ಕೊನೆಗೊಳಿಸುವ ಉದ್ದೇಶವನ್ನು ಲಿಖಿತದಲ್ಲಿ ನೋಟೀಸು ಕೊಟ್ಟ ದಿನಾಂಕದಿಂದ ಎರಡು ತಿಂಗಳು ಮುಗಿಯುವವರೆಗೆ, ಮೇಲೆ ಹೇಳಿದ ಅವಧಿಯು ಮುಗಿದ ತರುವಾಯ ಪಕ್ಷಕಾರರ ಮೇಲೆ ಬಂಧನಕಾರಿಯಾಗಿ ಮುಂದುವರಿಯತಕ್ಕುದು.

(3) ಐತೀರ್ಪು, ಈ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಆ ಐತೀರ್ಪು 17ಎ ಪ್ರಕರಣದ ಮೇರೆಗೆ ಜಾರಿಯಾಗಬಹುದಾದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಪ್ರವರ್ತನೆಯಲ್ಲಿರತಕ್ಕುದು:

ಪರಂತು, ಸಮುಚಿತ ಸರ್ಕಾರವು, ಸದರಿ ಅವಧಿಯನ್ನು ಕಡಿಮೆ ಮಾಡಿ ತಾನು ಸೂಕ್ತವೆಂದು ಭಾವಿಸುವಂಥ ಅವಧಿಯನ್ನು ನಿಗದಿ ಮಾಡಬಹುದು:

ಮತ್ತೂ ಪರಂತು, ಸಮುಚಿತ ಸರ್ಕಾರವು, ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಪ್ರವರ್ತನೆಯ ಅವಧಿಯನ್ನು, ಯಾವುದೇ ಐತೀರ್ಪಿನ ಪ್ರವರ್ತನೆಯ ಒಟ್ಟು ಅವಧಿಯು ಅದು ಜಾರಿಗೆ ಬಂದ ದಿನಾಂಕದಿಂದ ಮೂರು ವರ್ಷಗಳನ್ನು ಮೀರದಂತೆ, ತಾನು ಸೂಕ್ತವೆಂದು ಭಾವಿಸುವಂತೆ ಒಂದು ಸಲಕ್ಕೆ ಒಂದು ವರ್ಷವನ್ನು ಮೀರದಂತೆ ಯಾವುದೇ ಅವಧಿಗೆ ವಿಸ್ತರಿಸಬಹುದು.

(4) ಸಮುಚಿತ ಸರ್ಕಾರವು ತನ್ನ ಸ್ವಂತ ಪ್ರೇರಣೆಯಿಂದಾಗಲೀ ಅಥವಾ ಐತೀರ್ಪಿಗೆ ಬದ್ಧವಾದ ಯಾವನೇ ಪಕ್ಷಕಾರನ ಅರ್ಜಿಯ ಮೇಲಾಗಲಿ, ಐತೀರ್ಪನ್ನು ನೀಡಿದಾಗಿನಿಂದ, ಅದನ್ನು ಆಧರಿಸಿದ್ದ ಸನ್ನಿವೇಶಗಳಲ್ಲಿ ಮುಖ್ಯ ಬದಲಾವಣೆಯಾಗಿದೆಯೆಂದು ಪರಿಗಣಿಸಿದರೆ, ಸಮುಚಿತ ಸರ್ಕಾರವು, ಐತೀರ್ಪನ್ನು ಅಥವಾ ಅದರ ಭಾಗವನ್ನು, ಐತೀರ್ಪನ್ನು ಕಾರ್ಮಿಕ ನ್ಯಾಯಾಲಯ ನೀಡಿದ್ದರೆ ಕಾರ್ಮಿಕ ನ್ಯಾಯಾಲಯಕ್ಕೆ ಅಥವಾ ಐತೀರ್ಪನ್ನು ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು ನೀಡಿದ್ದರೆ ನ್ಯಾಯಾಧಿಕರಣಕ್ಕೆ ಅಂಥ ಬದಲಾವಣೆಯ ಕಾರಣದಿಂದ ಪ್ರವರ್ತನೆಯ ಅವಧಿಯನ್ನು ಕಡಿಮೆ ಮಾಡಿಕೊಡಬೇಕೆಂಬುದನ್ನು ತೀರ್ಮಾನಿಸಲು ಉಲ್ಲೇಖಿಸಬಹುದು ಮತ್ತು ಇಂಥ ಉಲ್ಲೇಖದ ಮೇಲೆ ಸಂದರ್ಭಾನುಸಾರ, ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ತೀರ್ಮಾನವು ಅಂತಿಮವಾಗತಕ್ಕುದು.

(5) (3)ನೇ ಉಪ-ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಯಾವೊಂದು ಐತೀರ್ಪು ಅದನ್ನು ಜಾರಿಗೊಳಿಸಿದ ತರುವಾಯ ಅದರ ಸ್ವರೂಪ, ನಿಬಂಧನೆಗಳು ಅಥವಾ ಇತರ ಸನ್ನಿವೇಶಗಳ ಮೂಲಕ ಅದಕ್ಕೆ ಬದ್ಧರಾದ ಪಕ್ಷಕಾರರ ಮೇಲೆ ಯಾವುದೇ ಮುಂದುವರಿಯುತ್ತಿರುವ ಬಾಧ್ಯತೆಯನ್ನು ವಿಧಿಸುವುದಿಲ್ಲವೋ ಆ ಯಾವುದೇ ಐತೀರ್ಪಿಗೆ ಅನ್ವಯವಾಗತಕ್ಕುದಲ್ಲ.

(6) (3)ನೇ ಉಪ-ಪ್ರಕರಣದ ಪ್ರವರ್ತನೆಯ ಅವಧಿಯು ಮುಕ್ತಾಯವಾಗಿದ್ದರೂ, ಐತೀರ್ಪಿಗೆ ಬದ್ಧನಾದ ಯಾವನೇ ಪಕ್ಷಕಾರನು ಐತೀರ್ಪನ್ನು ಕೊನೆಗೊಳಿಸುವ ತನ್ನ ಉದ್ದೇಶವನ್ನು ತಿಳಿಸಿ ಇತರ

ಪಕ್ಷಕಾರನಿಗೆ ಅಥವಾ ಪಕ್ಷಕಾರರಿಗೆ ನೋಟೀಸನ್ನು ಕೊಟ್ಟ ದಿನದಿಂದ ಎರಡು ತಿಂಗಳ ಅವಧಿಯು ಮುಗಿಯುವವರೆಗೆ, ಐತೀರ್ಪು ಪಕ್ಷಕಾರರ ಮೇಲೆ ಬಂಧನಕಾರಿಯಾಗಿ ಮುಂದುವರಿಯತಕ್ಕುದು.

(7) (2)ನೇ ಉಪ-ಪ್ರಕರಣ ಅಥವಾ (6)ನೇ ಉಪ-ಪ್ರಕರಣದ ಮೇರೆಗೆ ಕೊಡಲಾದ ಯಾವುದೇ ನೋಟೀಸು, ಅದನ್ನು ಸಂದರ್ಭಾನುಸಾರ, ಇತ್ಯರ್ಥಕ್ಕೆ ಅಥವಾ ಐತೀರ್ಪಿಗೆ ಬದ್ಧರಾದ ವ್ಯಕ್ತಿಗಳ ಪೈಕಿ ಬಹುಸಂಖ್ಯಾತರನ್ನು ಪ್ರತಿನಿಧಿಸುವ ಒಂದು ಪಕ್ಷವು ಕೊಟ್ಟಿದ್ದ ಹೊರತು ಪರಿಣಾಮ ಹೊಂದಿರತಕ್ಕುದಲ್ಲ.

**20. ವ್ಯವಹರಣೆಗಳ ಪ್ರಾರಂಭ ಮತ್ತು ಮುಕ್ತಾಯ.-** (1) ಸಂಧಾನ ವ್ಯವಹರಣೆಯು ಸಂದರ್ಭಾನುಸಾರ, 22ನೇ ಪ್ರಕರಣದ ಮೇರೆಗೆ ಸಂಧಾನ ಅಧಿಕಾರಿಯಿಂದ ಮುಷ್ಕರ ಅಥವಾ ಬೀಗಮುದ್ರೆಯ ನೋಟೀಸನ್ನು ಸ್ವೀಕರಿಸಿದ ದಿನಾಂಕದಂದು ಅಥವಾ ವಿವಾದವನ್ನು ಒಂದು ಮಂಡಲಿಗೆ ಉಲ್ಲೇಖಿಸಿದ ಆದೇಶದ ದಿನಾಂಕದಂದು ಪ್ರಾರಂಭವಾಗಿದೆಯೆಂದು ಭಾವಿಸತಕ್ಕುದು.

(2) ಸಂಧಾನ ವ್ಯವಹರಣೆಯು-

(ಎ) ಇತ್ಯರ್ಥವನ್ನು ತಲುಪಿರುವಲ್ಲಿ, ವಿವಾದ ಪಕ್ಷಕಾರರು ಇತ್ಯರ್ಥ ಪತ್ರಕ್ಕೆ ಸಹಿ ಮಾಡಿದಾಗ;

(ಬಿ) ಯಾವುದೇ ಇತ್ಯರ್ಥವನ್ನು ತಲುಪಿಲ್ಲದಿರುವಲ್ಲಿ, ಸಂದರ್ಭಾನುಸಾರವಾಗಿ ಸಂಧಾನ ಅಧಿಕಾರಿಯ ವರದಿಯನ್ನು ಸಮುಚಿತ ಸರ್ಕಾರವು ಸ್ವೀಕರಿಸಿದಾಗ ಅಥವಾ 17ನೇ ಪ್ರಕರಣದ ಮೇರೆಗೆ ಮಂಡಲಿಯ ವರದಿಯನ್ನು ಪ್ರಕಟಿಸಿದಾಗ; ಅಥವಾ

(ಸಿ) ಸಂಧಾನ ವ್ಯವಹರಣೆಯ ಇತ್ಯರ್ಥದ ಅವಧಿಯಲ್ಲಿ 10ನೇ ಪ್ರಕರಣದ ಮೇರೆಗೆ ನ್ಯಾಯಾಲಯ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಉಲ್ಲೇಖ ಮಾಡಿದಾಗ

- ಮುಕ್ತಾಯವಾಗಿದೆಯೆಂದು ಭಾವಿಸತಕ್ಕುದು.

(3) 10ಬಿ ಪ್ರಕರಣದ ಮೇರೆಗೆ ಮಧ್ಯಸ್ಥನ ಮುಂದಿರುವ ಅಥವಾ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಗಳು, ಸಂದರ್ಭಾನುಸಾರ, ವಿವಾದವನ್ನು ಮಧ್ಯಸ್ಥಿಕೆಗಾಗಿ ಅಥವಾ ನ್ಯಾಯ ನಿರ್ಣಯಕ್ಕಾಗಿ ಉಲ್ಲೇಖಿಸಿದ ದಿನಾಂಕದಂದು ಪ್ರಾರಂಭವಾಗಿದೆಯೆಂದು ಭಾವಿಸತಕ್ಕುದು ಮತ್ತು ಅಂಥ ವ್ಯವಹರಣೆಯು 17ಎ ಪ್ರಕರಣದ ಮೇರೆಗೆ ಐತೀರ್ಪು ಪ್ರವರ್ತನೀಯವಾದ ದಿನಾಂಕದಂದು ಮುಕ್ತಾಯವಾಗಿದೆಯೆಂದು ಭಾವಿಸತಕ್ಕುದು.

**21. ಕೆಲವು ವಿಷಯಗಳನ್ನು ರಹಸ್ಯವಾಗಿಡುವುದು.-** ಕಾರ್ಮಿಕ ಸಂಘದ ಅಥವಾ ಯಾವುದೇ ವ್ಯಕ್ತಿಗತ ಉದ್ಯಮದ ಬಗ್ಗೆ (ಯಾರೇ ವ್ಯಕ್ತಿ, ಫರ್ಮ್ ಅಥವಾ ಕಂಪನಿ ನಡೆಸುತ್ತಿರಲಿ ಅಥವಾ ಇಲ್ಲದಿರಲಿ) ಯಾವುದೇ ತನಿಖೆ ಅಥವಾ ವಿಚಾರಣೆಯು ನಡೆಯುತ್ತಿರುವಲ್ಲಿ ಸಂಧಾನಾಧಿಕಾರಿ, ಮಂಡಲಿ, ನ್ಯಾಯಾಲಯ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ, ರಾಷ್ಟ್ರೀಯ ನ್ಯಾಯಾಧಿಕರಣ ಅಥವಾ ಮಧ್ಯಸ್ಥ ಇವರು ಪಡೆದ ಯಾವುದೇ ಮಾಹಿತಿಯನ್ನು ಅಂಥ ಅಧಿಕಾರಿ, ಮಂಡಲಿ, ನ್ಯಾಯಾಲಯ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ, ರಾಷ್ಟ್ರೀಯ ನ್ಯಾಯಾಧಿಕರಣ ಅಥವಾ ಮಧ್ಯಸ್ಥರೆದುರು ನೀಡಿದ್ದರೂ ಸಹ ಸಂಬಂಧಪಟ್ಟ ಕಾರ್ಮಿಕ ಸಂಘ, ವ್ಯಕ್ತಿ, ಫರ್ಮು ಅಥವಾ ಕಂಪೆನಿಯು ಸಂದರ್ಭಾನುಸಾರ, ಸಂಧಾನಾಧಿಕಾರಿ, ಮಂಡಲಿ, ನ್ಯಾಯಾಲಯವು ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ, ರಾಷ್ಟ್ರೀಯ ನ್ಯಾಯಾಧಿಕರಣ ಅಥವಾ ಮಧ್ಯಸ್ಥರಿಗೆ ಈ ಬಗ್ಗೆ ಲಿಖಿತ ಮನವಿಯನ್ನು ಸಲ್ಲಿಸಿ, ಆ ಮಾಹಿತಿಯನ್ನು ರಹಸ್ಯವೆಂದು ಪರಿಗಣಿಸಬೇಕೆಂದು ತಿಳಿಸಿರುವಲ್ಲಿ, ಅದನ್ನು ಈ ಅಧಿನಿಯಮದ ಮೇರೆಗಿನ ಯಾವುದೇ ವರದಿ ಅಥವಾ ಐತೀರ್ಪಿನಲ್ಲಿ ಸೇರಿಸತಕ್ಕುದಲ್ಲ ಹಾಗೂ ಅಂಥ ಸಂಧಾನಾಧಿಕಾರಿ ಅಥವಾ ಮಂಡಲಿಯ ಯಾರೇ ವೈಯಕ್ತಿಕ ಸದಸ್ಯ ಅಥವಾ ನ್ಯಾಯಾಲಯ ಅಥವಾ ಕಾರ್ಮಿಕ ನ್ಯಾಯಾಲಯದ, ನ್ಯಾಯಾಧಿಕರಣದ, ರಾಷ್ಟ್ರೀಯ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿ ಅಥವಾ ಮಧ್ಯಸ್ಥ

ಅಥವಾ ಅಲ್ಲಿ ಹಾಜರಿದ್ದ ಯಾರೇ ವ್ಯಕ್ತಿ ಅಥವಾ ವ್ಯವಹರಣೆಗೆ ಸಂಬಂಧಪಟ್ಟವರು ಕಾರ್ಮಿಕ ಸಂಘದ ಕಾರ್ಯದರ್ಶಿಯ ಲಿಖಿತ ಸಮ್ಮತಿ ಇಲ್ಲದೆ ಯಾವುದೇ ಅಂಥ ಮಾಹಿತಿಯನ್ನು ಬಹಿರಂಗಪಡಿಸತಕ್ಕುದಲ್ಲ:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ, ಭಾರತ ದಂಡ ಸಂಹಿತೆಯ 193ನೇ ಪ್ರಕರಣದ ಮೇರೆಗಿನ ಪ್ರಾಸಿಕ್ಯೂಷನ್ನಿನ ಉದ್ದೇಶಕ್ಕಾಗಿ ಯಾವುದೇ ಅಂಥ ಮಾಹಿತಿಯನ್ನು ಬಹಿರಂಗಗೊಳಿಸುವುದಕ್ಕೆ ಅನ್ವಯವಾಗತಕ್ಕುದಲ್ಲ.

## ಅಧ್ಯಾಯ –V

## ಮುಷ್ಕರಗಳು ಹಾಗೂ ಬೀಗ ಮುದ್ರೆಗಳು

**22. ಮುಷ್ಕರಗಳು ಹಾಗೂ ಬೀಗಮುದ್ರೆಗಳ ನಿಷೇಧ.–** (1) ಸಾರ್ವಜನಿಕ ಪ್ರಯೋಜನ ಸೇವೆಗೆ ನಿಯೋಜಿತನಾದಂಥ ಯಾವನೇ ವ್ಯಕ್ತಿಯು,–

(ಎ) ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದಂತೆ ಮುಷ್ಕರ ಮಾಡುವುದಕ್ಕೆ ಮುನ್ನ ಆರು ವಾರಗಳೊಳಗೆ ಮುಷ್ಕರದ ಬಗ್ಗೆ ನಿಯೋಜಕನಿಗೆ ನೋಟೀಸು ಕೊಡದೇ; ಅಥವಾ

(ಬಿ) ಅಂಥ ನೋಟೀಸನ್ನು ಕೊಟ್ಟ ಮೇಲೆ ಹದಿನಾಲ್ಕು ದಿನಗಳೊಳಗಾಗಿ; ಅಥವಾ

(ಸಿ) ಮೇಲೆ ಹೇಳಿದ ಯಾವುದೇ ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಮುಷ್ಕರದ ದಿನಾಂಕವು ಮುಗಿಯುವ ಮುನ್ನ; ಅಥವಾ

(ಡಿ) ಸಂಧಾನಾಧಿಕಾರಿಯ ಮುಂದೆ ಯಾವುದೇ ಸಂಧಾನದ ವ್ಯವಹರಣೆಗಳು ಬಾಕಿಯಿರುವ ಮತ್ತು ಅಂಥ ವ್ಯವಹರಣೆಗಳ ಮುಕ್ತಾಯದ ತರುವಾಯ ಏಳು ದಿನಗಳ ಅವಧಿಯಲ್ಲಿ

– ಕರಾರನ್ನು ಉಲ್ಲಂಘಿಸಿ ಮುಷ್ಕರ ಹೂಡತಕ್ಕುದಲ್ಲ.

(2) ಯಾವುದೇ ಸಾರ್ವಜನಿಕ ಪ್ರಯೋಜನದ ಸೇವೆಯನ್ನು ನಡೆಸುವ ಯಾವನೇ ನಿಯೋಜಕನು,–

(ಎ) ಇಲ್ಲಿ ಇನ್ನು ಮುಂದೆ ಉಪಬಂಧಿಸಲಾದಂತೆ, ಬೀಗ ಮುದ್ರೆ ಹಾಕುವುದಕ್ಕೆ ಮುನ್ನ ಆರು ವಾರಗಳೊಳಗೆ ಬೀಗ ಮುದ್ರೆಯ ನೋಟೀಸು ಕೊಡದೆ; ಅಥವಾ

(ಬಿ) ಅಂಥ ನೋಟೀಸನ್ನು ಕೊಟ್ಟ ಹದಿನಾಲ್ಕು ದಿವಸಗಳೊಳಗೆ; ಅಥವಾ

(ಸಿ) ಮೇಲೆ ಹೇಳಿದಂತೆ ಯಾವುದೇ ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಬೀಗಮುದ್ರೆಯ ದಿನಾಂಕವು ಮುಗಿಯುವುದಕ್ಕೆ ಮುನ್ನ; ಅಥವಾ

(ಡಿ) ಸಂಧಾನಾಧಿಕಾರಿಯ ಮುಂದೆ ಯಾವುದೇ ಸಂಧಾನ ವ್ಯವಹರಣೆಗಳು ಬಾಕಿಯಿರುವ ಮತ್ತು ಅಂಥ ವ್ಯವಹರಣೆಗಳ ಮುಕ್ತಾಯದ ತರುವಾಯ ಏಳುದಿನಗಳ ಅವಧಿಯಲ್ಲಿ,–

–ತನ್ನ ಯಾರೇ ಕೆಲಸಗಾರರ ವಿರುದ್ಧ ಬೀಗಮುದ್ರೆ ಹಾಕತಕ್ಕುದಲ್ಲ.

(3) ಸಾರ್ವಜನಿಕ ಪ್ರಯೋಜನ ಸೇವೆಯಲ್ಲಿ ಸಂದರ್ಭಾನುಸಾರ, ಈಗಾಗಲೇ ಮುಷ್ಕರ ಇರುವಲ್ಲಿ ಅಥವಾ ಬೀಗ ಮುದ್ರೆ ಹಾಕಿರುವಲ್ಲಿ, ಈ ಪ್ರಕರಣದ ಮೇರೆಗೆ ಮುಷ್ಕರ ಅಥವಾ ಬೀಗ ಮುದ್ರೆಯ ನೋಟೀಸು ಕೊಡುವ ಅಗತ್ಯವಿರತಕ್ಕುದಲ್ಲ ಆದರೆ ನಿಯೋಜಕನು ಬೀಗಮುದ್ರೆ ಅಥವಾ ಮುಷ್ಕರವನ್ನು ಘೋಷಿಸಿದ ದಿನಾಂಕದಂದು ಅದರ ಮಾಹಿತಿಯನ್ನು, ಸಾಮಾನ್ಯವಾಗಿಯಾಗಲಿ ಅಥವಾ ಒಂದು ನಿರ್ದಿಷ್ಟ ಪ್ರದೇಶಕ್ಕಾಗಿಯಾಗಲಿ ಅಥವಾ ಸಾರ್ವಜನಿಕ ಪ್ರಯೋಜನ ಸೇವೆಗಳ ಒಂದು ನಿರ್ದಿಷ್ಟ ವರ್ಗಕ್ಕಾಗಿ ಆಗಲಿ ಆ ಕುರಿತು ಸಮುಚಿತ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಪ್ರಾಧಿಕಾರಿಗೆ ತಿಳಿಸತಕ್ಕುದು.

(4) (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಮುಷ್ಕರದ ನೋಟೀಸನ್ನು ನಿಯಮಿಸಬಹುದಾದಷ್ಟು ಸಂಖ್ಯೆಯ ವ್ಯಕ್ತಿಗಳು ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಮತ್ತು ಅಂಥ ರೀತಿಯಲ್ಲಿ ಕೊಡತಕ್ಕುದು.

(5) (2)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಬೀಗಮುದ್ರೆಯ ನೋಟೀಸನ್ನು ನಿಯಮಿಸ ಬಹುದಾದಂಥ ರೀತಿಯಲ್ಲಿ ಕೊಡತಕ್ಕುದು.

(6) ನಿಯೋಜಕನು ತಾನು ನಿಯೋಜಿಸಿದ ಯಾರೇ ವ್ಯಕ್ತಿಗಳಿಂದ ಯಾವುದೇ ದಿನದಂದು (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದಂಥ ಯಾವುವೇ ಅಂಥ ನೋಟೀಸುಗಳನ್ನು ಸ್ವೀಕರಿಸಿದರೆ ಅಥವಾ ಅವನು

ನಿಯೋಜಿಸಿದಂಥ ಯಾರೇ ವ್ಯಕ್ತಿಗಳಿಗೆ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುವೇ ಅಂಥ ನೋಟೀಸುಗಳನ್ನು ಕೊಟ್ಟರೆ, ಆಗ ಅವನು ಅದರ ಬಗ್ಗೆ ಐದು ದಿನಗಳ ಒಳಗಾಗಿ ಸಮುಚಿತ ಸರ್ಕಾರಕ್ಕೆ ಅಥವಾ ಸರ್ಕಾರವು ನಿಯಮಿಸಬಹುದಾದಂಥ ಪ್ರಾಧಿಕಾರಿಗೆ ಆ ದಿನದಂದು ಸ್ವೀಕರಿಸಿದ ಅಥವಾ ಕೊಟ್ಟಂಥ ನೋಟೀಸುಗಳ ಸಂಖ್ಯೆಯನ್ನು ವರದಿ ಮಾಡತಕ್ಕುದು.

**23. ಮುಷ್ಕರಗಳ ಹಾಗೂ ಬೀಗಮುದ್ರೆಗಳ ಸಾಮಾನ್ಯ ನಿಷೇಧ.–** ಯಾವುದೇ ಕೈಗಾರಿಕಾ ಕಾರ್ಯಸಂಸ್ಥೆಯಲ್ಲಿ ನಿಯೋಜಿತನಾದ ಯಾವನೇ ಕೆಲಸಗಾರನು ಕರಾರನ್ನು ಉಲ್ಲಂಘಿಸಿ ಮತ್ತು ಅಂಥ ಯಾವನೇ ಕೆಲಸಗಾರನ ನಿಯೋಜಕನು–

(ಎ) ಮಂಡಲಿಯ ಎದುರು ಸಂಧಾನ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಮತ್ತು ಅಂಥ ವ್ಯವಹರಣೆಗಳು ಇತ್ಯರ್ಥವಾದ ತರುವಾಯದ ಏಳು ದಿನಗಳ ಅವಧಿಯಲ್ಲಿ;

(ಬಿ) ವ್ಯವಹರಣೆಗಳು ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದೆ ಇತ್ಯರ್ಥದಲ್ಲಿರುವ ಮತ್ತು ಅಂಥ ವ್ಯವಹರಣೆಗಳು ಮುಕ್ತಾಯವಾದ ತರುವಾಯ ಎರಡು ತಿಂಗಳುಗಳ ಅವಧಿಯಲ್ಲಿ;

(ಬಿಬಿ) 10ಎ ಪ್ರಕರಣದ (3ಎ) ಉಪ-ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿರುವಲ್ಲಿ, ಮಧ್ಯಸ್ಥನ ಮುಂದೆ ಮಧ್ಯಸ್ಥಿಕೆ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಮತ್ತು ಅಂಥ ವ್ಯವಹರಣೆಗಳು ಮುಕ್ತಾಯವಾದ ತರುವಾಯದ ಎರಡು ತಿಂಗಳುಗಳ ಅವಧಿಯಲ್ಲಿ; ಅಥವಾ

(ಸಿ) ಇತ್ಯರ್ಥಕ್ಕೆ ಅಥವಾ ಐತೀರ್ಪುಗಳಿಗೆ ಒಳಪಡುವ ಯಾವುವೇ ವಿಷಯಗಳಿಗೆ ಸಂಬಂಧಿಸಿದಂತೆ ಇತ್ಯರ್ಥ ಅಥವಾ ಐತೀರ್ಪಿನ ಯಾವುದೇ ಅವಧಿಯಲ್ಲಿ

– ಮುಷ್ಕರ ಹೂಡತಕ್ಕುದಲ್ಲ ಮತ್ತು ಬೀಗಮುದ್ರೆಯನ್ನು ಘೋಷಿಸತಕ್ಕುದಲ್ಲ.

**24. ಕಾನೂನು ಸಮ್ಮತವಲ್ಲದ ಮುಷ್ಕರಗಳು ಮತ್ತು ಬೀಗ ಮುದ್ರೆಗಳು.–** (1) ಮುಷ್ಕರ ಅಥವಾ ಬೀಗಮುದ್ರೆಯನ್ನು,–

(i) 22ನೇ ಪ್ರಕರಣದ ಅಥವಾ 23ನೇ ಪ್ರಕರಣವನ್ನು ಉಲ್ಲಂಘಿಸಿ ಪ್ರಾರಂಭಿಸಿದ್ದರೆ ಅಥವಾ ಘೋಷಿಸಿದ್ದರೆ; ಅಥವಾ

(ii) 10ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಥವಾ 10ಎ ಪ್ರಕರಣದ (4ಎ) ಉಪ-ಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು ಉಲ್ಲಂಘಿಸಿ ಮುಂದುವರೆಸಿದ್ದರೆ

– ಅದು ಕಾನೂನು ಬಾಹಿರವಾಗತಕ್ಕುದು.

(2) ಕೈಗಾರಿಕಾ ವಿವಾದಕ್ಕನುಸಾರವಾಗಿ ಮುಷ್ಕರ ಅಥವಾ ಬೀಗಮುದ್ರೆ ಈಗಾಗಲೇ ಪ್ರಾರಂಭವಾಗಿದ್ದಲ್ಲಿ ಮತ್ತು ಆ ವಿವಾದದ ಉಲ್ಲೇಖವನ್ನು ಮಂಡಲಿಗೆ, ಮಧ್ಯಸ್ಥನಿಗೆ, ಕಾರ್ಮಿಕ ನ್ಯಾಯಾಲಯಕ್ಕೆ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಮಾಡಿರುವ ಸಮಯದಲ್ಲಿ ಅಸ್ತಿತ್ವದಲ್ಲಿದ್ದರೆ ಅಂಥ ಮುಷ್ಕರ ಅಥವಾ ಬೀಗಮುದ್ರೆಯ ಮುಂದುವರಿಕೆಯನ್ನು ಕಾನೂನು ಬಾಹಿರವೆಂದು ಭಾವಿಸತಕ್ಕುದಲ್ಲ. ಪರಂತು, ಅಂಥ ಮುಷ್ಕರ ಅಥವಾ ಬೀಗಮುದ್ರೆಯು ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಪ್ರಾರಂಭವಾಗಿದ್ದಿರಕೂಡದು ಅಥವಾ ಅದರ ಮುಂದುವರಿಕೆಯನ್ನು 10ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಅಥವಾ 10ಎ ಪ್ರಕರಣದ (4ಎ) ಉಪ ಪ್ರಕರಣದ ಮೇರೆಗೆ ನಿಷೇಧಿಸಿದ್ದಿರಕೂಡದು.

(3) ಕಾನೂನು ಬಾಹಿರ ಮುಷ್ಕರದ ಪರಿಣಾಮವಾಗಿ ಬೀಗಮುದ್ರೆಯನ್ನು ಘೋಷಿಸಿದ್ದಲ್ಲಿ ಅಥವಾ ಕಾನೂನು ಬಾಹಿರ ಬೀಗಮುದ್ರೆಯ ಪರಿಣಾಮದಿಂದ ಮುಷ್ಕರವನ್ನು ಘೋಷಿಸಿದ್ದಲ್ಲಿ, ಆಗ ಅದನ್ನು ಕಾನೂನು ಬಾಹಿರವೆಂದು ಭಾವಿಸತಕ್ಕುದಲ್ಲ.

**25. ಕಾನೂನು ಬಾಹಿರ ಮುಷ್ಕರಗಳು ಹಾಗೂ ಬೀಗಮುದ್ರೆಗಳಿಗೆ ಹಣಕಾಸಿನ ಸಹಾಯದ ನಿಷೇಧ.–** ಯಾವನೇ ವ್ಯಕ್ತಿಯು ಯಾವುದೇ ಕಾನೂನು ಬಾಹಿರ ಮುಷ್ಕರ ಅಥವಾ ಬೀಗ ಮುದ್ರೆಯ ಮುಂದುವರಿಕೆಗಾಗಿ ಅಥವಾ ಬೆಂಬಲವಾಗಿ ತಿಳಿದೂ ತಿಳಿದೂ ಯಾವುದೇ ಹಣವನ್ನು ವೆಚ್ಚ ಮಾಡತಕ್ಕುದಲ್ಲ ಅಥವಾ ವಿನಿಯೋಗಿಸತಕ್ಕುದಲ್ಲ.

## ಅಧ್ಯಾಯ – V–ಎ

## ಹಂಗಾಮಿ ವಜಾ ಮತ್ತು ಕೆಲಸದಿಂದ ತೆಗೆದುಹಾಕುವುದು

**25ಎ. 25ಸಿ ದಿಂದ 25 ಇ ವರೆಗಿನ ಪ್ರಕರಣಗಳ ಅನ್ವಯ.–** (1) 25ಸಿ ದಿಂದ 25ಇ ವರೆಗಿನ (ಎರಡೂ ಸೇರಿ) ಪ್ರಕರಣಗಳು ಅಧ್ಯಾಯ vಬಿ ಅನ್ವಯವಾಗುವಂಥ ಕೈಗಾರಿಕಾ ಸಂಸ್ಥೆಗೆ, ಅಥವಾ

(ಎ) ಹಿಂದಿನ ಕ್ಯಾಲೆಂಡರ್ ತಿಂಗಳಲ್ಲಿ ಪ್ರತಿಯೊಂದು ಕೆಲಸದ ದಿನದಂದು ಸರಾಸರಿ ಐವತ್ತಕ್ಕಿಂತ ಕಡಿಮೆ ಕೆಲಸಗಾರರು ನಿಯೋಜಿತರಾಗಿರುವ ಕೈಗಾರಿಕಾ ಕಾರ್ಯ ಸಂಸ್ಥೆಗಳಿಗೆ; ಅಥವಾ

(ಬಿ) ಹಂಗಾಮು ಸ್ವರೂಪದ ಅಥವಾ ಕೆಲಸವನ್ನು ತಡೆ ತಡೆದು ಮಾತ್ರ ನಿರ್ವಹಿಸುವ ಕೈಗಾರಿಕಾ ಸಂಸ್ಥೆಗಳಿಗೆ

– ಅನ್ವಯವಾಗತಕ್ಕುದಲ್ಲ.

(2) ಕೈಗಾರಿಕಾ ಕಾರ್ಯ ಸಂಸ್ಥೆಯು ಹಂಗಾಮು ಸ್ವರೂಪದ್ದೇ ಅಥವಾ ಅದರಲ್ಲಿ ತಡೆತಡೆದು ಮಾತ್ರ ಕೆಲಸ ನಿರ್ವಹಿಸಲಾಗುತ್ತಿದೆಯೇ ಎಂಬ ಬಗ್ಗೆ ಪ್ರಶ್ನೆ ಉದ್ಭವಿಸಿದರೆ, ಆ ಬಗ್ಗೆ ಸಮುಚಿತ ಸರ್ಕಾರದ ನಿರ್ಣಯವು ಅಂತಿಮವಾಗಿರತಕ್ಕುದು.

**ವಿವರಣೆ:–** ಈ ಪ್ರಕರಣದಲ್ಲಿ ಮತ್ತು 25ಸಿ, 25ಡಿ ಮತ್ತು 25ಎಫ್ ಪ್ರಕರಣಗಳಲ್ಲಿ "ಕೈಗಾರಿಕಾ ಕಾರ್ಯ ಸಂಸ್ಥೆ" ಎಂದರೆ:–

(i) ಕಾರ್ಖಾನೆಗಳ ಅಧಿನಿಯಮ, 1948ರ (1948ರ 63) 2ನೇ ಪ್ರಕರಣದ (ಎಂ) ಖಂಡದಲ್ಲಿ ಪರಿಭಾಷಿಸಲಾದ ಕಾರ್ಖಾನೆ; ಅಥವಾ

(ii) ಗಣಿಗಳ ಅಧಿನಿಯಮ, 1952ರ (1952ರ 35) 2ನೇ ಪ್ರಕರಣದ (ಎಫ್) ಖಂಡದಲ್ಲಿ ಪರಿಭಾಷಿಸಲಾದ ಗಣಿ; ಅಥವಾ

(iii) ಪ್ಲಾಂಟೇಷನ್ ಕಾರ್ಮಿಕರ ಅಧಿನಿಯಮ, 1951ರ (1951ರ 69) 2ನೇ ಪ್ರಕರಣದ (ಎಫ್) ಖಂಡದಲ್ಲಿ ಪರಿಭಾಷಿಸಲಾದ ಪ್ಲಾಂಟೇಷನ್.

**25ಬಿ. ನಿರಂತರ ಸೇವೆಯ ಪರಿಭಾಷೆ.–** ಈ ಅಧ್ಯಾಯದ ಉದ್ದೇಶಗಳಿಗಾಗಿ,–

(1) ಕಾಯಿಲೆ ಅಥವಾ ಅಧಿಕೃತ ರಜೆ ಅಥವಾ ಅಪಘಾತ ಅಥವಾ ಕಾನೂನು ಬಾಹಿರವಲ್ಲದ ಮುಷ್ಕರ ಅಥವಾ ಬೀಗಮುದ್ರೆ ಅಥವಾ ಕೆಲಸಗಾರನ ಕಡೆಯಿಂದ ಆದ ಯಾವುದೇ ತಪ್ಪಿನಿಂದ ಆಗಿಲ್ಲದ ಕೆಲಸದ ನಿಲುಗಡೆ ಇವುಗಳ ನಿಮಿತ್ತ ತಡೆಯುಂಟಾಗಿರಬಹುದಾದ ಸೇವೆಯು ಸೇರಿದಂತೆ ಕೆಲಸಗಾರನು ಯಾವ ಅವಧಿಯಲ್ಲಿ ಅವನು ತಡೆಯಿಲ್ಲದ ಸೇವೆಯಲ್ಲಿದ್ದನೋ ಆ ಅವಧಿಗೆ ನಿರಂತರ ಸೇವೆಯಲ್ಲಿದ್ದನೆಂದು ಹೇಳತಕ್ಕುದು.

(2) ಕೆಲಸಗಾರನು ಒಂದು ವರ್ಷ ಅಥವಾ ಆರು ತಿಂಗಳುಗಳ ಅವಧಿಯವರೆಗೆ (1)ನೇ ಖಂಡದ ಅರ್ಥದಲ್ಲಿ ನಿರಂತರ ಸೇವೆಯಲ್ಲಿ ಇಲ್ಲದಿದ್ದಲ್ಲಿ ಅವನು-

(ಎ) ಯಾವ ದಿನಾಂಕಕ್ಕೆ ಸಂಬಂಧಿಸಿದಂತೆ ಲೆಕ್ಕಾಚಾರ ಮಾಡಬೇಕಾಗಿದೆಯೋ ಆ ದಿನಾಂಕಕ್ಕೆ ಹಿಂದಿನ ಹನ್ನೆರಡು ಕ್ಯಾಲೆಂಡರ್ ತಿಂಗಳ ಅವಧಿಯಲ್ಲಿ

(i) ಗಣಿಯಲ್ಲಿ ನೆಲದ ಕೆಳಗೆ ನಿಯೋಜಿತನಾಗಿರುವ ಕೆಲಸಗಾರನಾಗಿದ್ದರೆ, ಒಂದು ನೂರ ತೊಂಬತ್ತು ದಿನಗಳಿಗೆ ಕಡಿಮೆಯಿಲ್ಲದಂತೆ; ಮತ್ತು

(ii) ಇತರ ಯಾವುದೇ ಸಂದರ್ಭದಲ್ಲಿ ಎರಡು ನೂರ ನಲವತ್ತು ದಿನಗಳಿಗೆ ಕಡಿಮೆಯಿಲ್ಲದಂತೆ ನಿಯೋಜಕನ ಅಧೀನದಲ್ಲಿ ವಾಸ್ತವವಾಗಿ ಕೆಲಸ ಮಾಡಿದ್ದರೆ,

ಒಂದು ವರ್ಷದ ಅವಧಿಗೆ;

(ಬಿ) ಯಾವ ದಿನಾಂಕಕ್ಕೆ ಸಂಬಂಧಿಸಿದಂತೆ ಲೆಕ್ಕಾಚಾರ ಮಾಡಬೇಕಾಗಿದೆಯೋ ಆ ದಿನಾಂಕಕ್ಕೆ ಹಿಂದಿನ ಆರು ಕ್ಯಾಲೆಂಡರ್ ತಿಂಗಳುಗಳ ಅವಧಿಯಲ್ಲಿ,-

(i) ಗಣಿಯಲ್ಲಿ ನೆಲದ ಕೆಳಗೆ ನಿಯೋಜಿತನಾಗಿರುವ ಕೆಲಸಗಾರನಾಗಿದ್ದರೆ, ತೊಂಬತ್ತೈದು ದಿನಗಳಿಗೆ ಕಡಿಮೆಯಿಲ್ಲದಂತೆ; ಮತ್ತು

(ii) ಇತರ ಯಾವುದೇ ಸಂದರ್ಭದಲ್ಲಿ, ಒಂದು ನೂರಾ ಇಪ್ಪತ್ತು ದಿನಗಳಿಗೆ ಕಡಿಮೆಯಿಲ್ಲದಂತೆ ನಿಯೋಜಕನ ಅಧೀನದಲ್ಲಿ ವಾಸ್ತವವಾಗಿ ಕೆಲಸ ಮಾಡಿದ್ದರೆ

-ಆರು ತಿಂಗಳ ಅವಧಿಗೆ,

-ನಿಯೋಜಕನ ಅಧೀನದಲ್ಲಿ ನಿರಂತರ ಸೇವೆಯಲ್ಲಿದ್ದನೆಂದು ಭಾವಿಸತಕ್ಕುದು.

**ವಿವರಣೆ:-** (2) ನೇ ಖಂಡದ ಉದ್ದೇಶಗಳಿಗಾಗಿ ನಿಯೋಜಕನ ಅಧೀನದಲ್ಲಿ ಕೆಲಸಗಾರನು ವಾಸ್ತವವಾಗಿ ಕೆಲಸ ಮಾಡಿದಷ್ಟು ದಿನಗಳು,-

(i) ಅವನನ್ನು ಯಾವುದೇ ಒಪ್ಪಂದದ ಮೇರೆಗೆ ಅಥವಾ ಕೈಗಾರಿಕಾ ನಿಯೋಜನಾ (ಸ್ಥಾಯೀ ಆದೇಶ) ಅಧಿನಿಯಮ, 1946ರ (1946ರ 20) ಮೇರೆಗೆ ಅಥವಾ ಈ ಅಧಿನಿಯಮದ ಮೇರೆಗೆ ಅಥವಾ ಕೈಗಾರಿಕಾ ಕಾರ್ಯಸಂಸ್ಥೆಗೆ ಅನ್ವಯವಾಗುವ ಯಾವುದೇ ಇತರ ಕಾನೂನಿನ ಮೇರೆಗೆ ಮಾಡಲಾದ ಸ್ಥಾಯೀ ಆದೇಶಗಳ ಮೂಲಕ ಅನುಮತಿಸಿದಂತೆ ಹಂಗಾಮಿ ವಜಾ ಮಾಡಲಾಗಿರುವ;

(ii) ಅವನು ಹಿಂದಿನ ವರ್ಷಗಳಲ್ಲಿ ಗಳಿಸಿದ, ಪೂರ್ಣ ಮಜೂರಿ ರಜೆಯ ಮೇಲಿರುವ;

(iii) ಅವನು, ಅವನ ನಿಯೋಜನೆಯಿಂದ ಮತ್ತು ನಿಯೋಜನೆಯ ಕ್ರಮದಲ್ಲಿ ಸಂಭವಿಸಿದ ಅಪಘಾತದಿಂದಾಗಿ ಉಂಟಾದ ತಾತ್ಕಾಲಿಕ ಅಸಮರ್ಥತೆಯ ಕಾರಣಕ್ಕಾಗಿ ಗೈರು ಹಾಜರಾಗಿರುವ; ಮತ್ತು

(iv) ಮಹಿಳೆಯ ಸಂದರ್ಭದಲ್ಲಿ ಪ್ರಸೂತಿ ರಜೆಯ ಒಟ್ಟು ಅವಧಿಯು ಹನ್ನೆರಡು ವಾರಗಳನ್ನು ಮೀರದಂತೆ ಅಂಥ ರಜೆಯ ಮೇಲಿರುವ

- ದಿನಗಳನ್ನು ಒಳಗೊಳ್ಳತಕ್ಕುದು.

**25ಸಿ. ಹಂಗಾಮಿ ವಜಾ ಆದ ಕೆಲಸಗಾರರು ಹೊಂದಿರುವ ಪರಿಹಾರದ ಹಕ್ಕು.**-ಕೈಗಾರಿಕಾ ಕಾರ್ಯಸಂಸ್ಥೆಯ ಹಾಜರಿ ಪುಸ್ತಕದಲ್ಲಿ ಯಾರ ಹೆಸರು ಇರುವುದೋ (ಬದಲಿ ಕೆಲಸಗಾರ ಅಥವಾ ಆಕಸ್ಮಿಕ ಕೆಲಸಗಾರನನ್ನು ಹೊರತುಪಡಿಸಿ) ಮತ್ತು ನಿಯೋಜಕನ ಅಧೀನದಲ್ಲಿ ಒಂದು ವರ್ಷಕ್ಕೆ ಕಡಿಮೆಯಿಲ್ಲದ ಅವಧಿಯ ನಿರಂತರ ಸೇವೆಯನ್ನು ಪೂರೈಸಿರುವಂಥ ಕೆಲಸಗಾರನನ್ನು ನಿರಂತರವಾಗಿ ಅಥವಾ ತಡೆತಡೆದು

ಹಂಗಾಮಿ ವಜಾ ಮಾಡಿದಾಗಲೆಲ್ಲಾ, ಮಧ್ಯೆ ಬರುವ ವಾರದ ರಜಾ ದಿನಗಳನ್ನು ಹೊರತುಪಡಿಸಿ, ಅವನನ್ನು ಹಾಗೆ ಹಂಗಾಮಿ ವಜಾ ಮಾಡಿದ ಅವಧಿಯ ಎಲ್ಲಾ ದಿನಗಳಿಗೆ ನಿಯೋಜಕನು ಅವನನ್ನು ಹಾಗೆ ಹಂಗಾಮಿ ವಜಾ ಮಾಡಿರದಿದ್ದರೆ ಅವನಿಗೆ ಸಂದಾಯ ಮಾಡಬಹುದಾಗಿದ್ದ ಮೂಲ ಮಜೂರಿ ಮತ್ತು ತುಟ್ಟಿಭತ್ಯ ಇವುಗಳ ಒಟ್ಟು ಮೊತ್ತದ ಶೇಕಡಾ ಐವತ್ತಕ್ಕೆ ಸಮನಾದಷ್ಟು ಪರಿಹಾರವನ್ನು ಸಂದಾಯ ಮಾಡತಕ್ಕದು:

ಪರಂತು, ಹನ್ನೆರಡು ತಿಂಗಳುಗಳ ಯಾವುದೇ ಅವಧಿಯಲ್ಲಿ ಕೆಲಸಗಾರನನ್ನು ನಲವತ್ತ್ತೈದು ದಿನಗಳಿಗೆ ಮೀರಿ ಹಾಗೆ ಹಂಗಾಮಿ ವಜಾ ಮಾಡಿದ್ದರೆ ಮೊದಲಿನ ನಲವತ್ತ್ತೈದು ದಿನಗಳು ಮುಕ್ತಾಯವಾದ ತರುವಾಯ ಹಂಗಾಮಿ ವಜಾದ ಯಾವುದೇ ಅವಧಿಗೆ ಸಂಬಂಧಿಸಿದ ಅಂಥ ಯಾವುದೇ ಪರಿಹಾರವು ಸಂದಾಯವಾಗತಕ್ಕುದಲ್ಲ ಎಂಬುದಾಗಿ ನಿಯೋಜಕ ಮತ್ತು ಕೆಲಸಗಾರನ ನಡುವೆ ಒಪ್ಪಂದವಾಗಿದ್ದರೆ ಹಾಗೆ ಹಂಗಾಮಿ ವಜಾ ಮಾಡಲಾದ ಅವಧಿಗೆ ಅಂಥ ಯಾವುದೇ ಪರಿಹಾರವು ಸಂದಾಯವಾಗತಕ್ಕದಲ್ಲ:

ಮತ್ತೂ ಪರಂತು, ಹಿಂದೆ ಹೇಳಿದ ಪರಂತುಕದಲ್ಲಿ ಬರುವ ಯಾವುದೇ ಸಂದರ್ಭದಲ್ಲಿ, ಹಂಗಾಮಿ ವಜಾದ ಮೊದಲ ನಲವತ್ತೈದು ದಿನಗಳು ಮುಕ್ತಾಯವಾದ ತರುವಾಯ ಯಾವುದೇ ಸಮಯದಲ್ಲಿ 25ಎಫ್ ಪ್ರಕರಣದಲ್ಲಿ ಒಳಗೊಂಡ ಉಪಬಂಧಗಳಿಗನುಸಾರ ಆ ನಿಯೋಜಕನು ಕೆಲಸಗಾರನನ್ನು ಕೆಲಸದಿಂದ ತೆಗೆದುಹಾಕುವುದು ಕಾನೂನು ಸಮ್ಮತವಾಗಿರತಕ್ಕುದು ಮತ್ತು ಅವನು ಹಾಗೆ ಮಾಡಿದಾಗ, ಆ ಹಿಂದಿನ ಹನ್ನೆರಡು ತಿಂಗಳ ಅವಧಿಯಲ್ಲಿ ಹಂಗಾಮಿ ವಜಾ ಮಾಡಿದುದಕ್ಕಾಗಿ ಕೆಲಸಗಾರನಿಗೆ ಸಂದಾಯವಾದ ಯಾವುದೇ ಪರಿಹಾರವನ್ನು ಕೆಲಸದಿಂದ ತೆಗೆದು ಹಾಕುವುದಕ್ಕೆ ಸಂದಾಯ ಮಾಡಿದ ಪರಿಹಾರದೊಡನೆ ಸರಿದೂಗಿಸತಕ್ಕುದು.

**ವಿವರಣೆ:** –"ಬದಲಿ ಕೆಲಸಗಾರ" ಎಂದರೆ ಕೈಗಾರಿಕಾ ಕಾರ್ಯಸಂಸ್ಥೆಯಲ್ಲಿ ಆ ಕೈಗಾರಿಕಾ ಕಾರ್ಯಸಂಸ್ಥೆಯ ಹಾಜರಿಪುಸ್ತಕದಲ್ಲಿ ಹೆಸರು ಇರುವ ಇನ್ನೊಬ್ಬ ವ್ಯಕ್ತಿಯ ಸ್ಥಾನದಲ್ಲಿ ನಿಯೋಜಿತನಾದ ಕೆಲಸಗಾರ, ಆದರೆ ಅವನು ಆ ಸಂಸ್ಥೆಯಲ್ಲಿ ಒಂದು ವರ್ಷದ ನಿರಂತರ ಸೇವೆಯನ್ನು ಪೂರೈಸಿದ್ದರೆ ಈ ಪ್ರಕರಣದ ಉದ್ದೇಶಗಳಿಗಾಗಿ ಅವನನ್ನು ಹಾಗೆಂದು ಪರಿಗಣಿಸುವುದು ಮುಕ್ತಾಯವಾಗತಕ್ಕುದು.

**25ಡಿ. ಕೆಲಸಗಾರರ ಹಾಜರಿ ಪುಸ್ತಕವನ್ನು ಇಡುವುದು ನಿಯೋಜಕನ ಕರ್ತವ್ಯ.**– ಯಾವುದೇ ಕೈಗಾರಿಕಾ ಸ್ಥಾಪನೆಯಲ್ಲಿ ಕೆಲಸಗಾರನನ್ನು ಹಂಗಾಮಿ ವಜಾ ಮಾಡಿದ್ದರೂ, ಈ ಅಧ್ಯಾಯದ ಉದ್ದೇಶಗಳಿಗಾಗಿ ಪ್ರತಿಯೊಬ್ಬ ನಿಯೋಜಕನು ಹಾಜರಿ ಪುಸ್ತಕವನ್ನು ಇಡುವುದು, ಮತ್ತು ಆ ಸಂಸ್ಥೆಯಲ್ಲಿ ಕೆಲಸಗಾರರು ಸಾಮಾನ್ಯ ಕೆಲಸದ ವೇಳೆಗಳಲ್ಲಿ ಗೊತ್ತುಪಡಿಸಿದ ಸಮಯಕ್ಕೆ ಹಾಜರಾದಾಗ ಅದರಲ್ಲಿ ನಮೂದುಗಳನ್ನು ಮಾಡುವ ವ್ಯವಸ್ಥೆ ಮಾಡುವುದು ಅವನ ಕರ್ತವ್ಯವಾಗಿರತಕ್ಕುದು.

**25ಇ. ಕೆಲಸಗಾರರು ಕೆಲವು ಸಂದರ್ಭಗಳಲ್ಲಿ ಪರಿಹಾರಕ್ಕೆ ಹಕ್ಕು ಹೊಂದಿಲ್ಲದಿರುವುದು.**– ಕೆಲಸಗಾರನು,–

(i) ಯಾವ ಸಂಸ್ಥೆಯಿಂದ ಅವನನ್ನು ಹಂಗಾಮಿ ವಜಾ ಮಾಡಲಾಗಿದೆಯೋ ಅದೇ ಸಂಸ್ಥೆಯಲ್ಲಿ ಅಥವಾ ಅದೇ ಪಟ್ಟಣ ಅಥವಾ ಗ್ರಾಮದಲ್ಲಿ ಇರುವ ಆ ನಿಯೋಜಕನಿಗೆ ಸೇರಿದ ಅಥವಾ ಅವನು ಯಾವ ಸಂಸ್ಥೆಗೆ ಸೇರಿರುವನೋ ಅಲ್ಲಿಂದ ಐದು ಮೈಲುಗಳ ಸುತ್ತಳತೆಯಲ್ಲಿರುವಂಥ ಯಾವುದೇ ಇತರ ಸಂಸ್ಥೆಯಲ್ಲಿ ಯಾವುದೇ ಬದಲಿ ನಿಯೋಜನೆಯನ್ನು, ಅಂಥ ಬದಲಿ ನಿಯೋಜನೆಗೆ ಯಾವುದೇ ವಿಶೇಷ ಕುಶಲತೆ ಅಥವಾ ಪೂರ್ವಾನುಭವ ಅಗತ್ಯವಿಲ್ಲವೆಂದು ಮತ್ತು ಆ ಕೆಲಸಗಾರನಿಗೆ ಸಾಮಾನ್ಯವಾಗಿ ಸಂದಾಯವಾಗಬಹುದಾಗಿದ್ದ ಮಜೂರಿಗಳನ್ನು ಆ ಬದಲಿ ನಿಯೋಜನೆಗೂ ಕೊಡಮಾಡಿದ್ದಲ್ಲಿ ಆ ಕೆಲಸಗಾರನು ಅದನ್ನು ಮಾಡಬಹುದೆಂದು ನಿಯೋಜಕನು ಅಭಿಪ್ರಾಯಪಟ್ಟಿದ್ದು, ಒಪ್ಪಿಕೊಳ್ಳಲು ನಿರಾಕರಿಸಿದರೆ;

(ii) ಸಾಮಾನ್ಯ ಕೆಲಸದ ವೇಳೆಯಲ್ಲಿ ಅವನು ಗೊತ್ತುಪಡಿಸಲಾದ ಸಮಯಕ್ಕೆ ದಿನಕ್ಕೆ ಕನಿಷ್ಠ ಒಂದು ಸಲವಾದರೂ ಆ ಸಂಸ್ಥೆಯಲ್ಲಿ ಕೆಲಸಕ್ಕೆ ಹಾಜರಾಗದಿದ್ದರೆ;

(iii) ಅಂಥ ಹಂಗಾಮಿ ವಜಾವು, ಸಂಸ್ಥೆಯ ಇನ್ನೊಂದು ಭಾಗದಲ್ಲಿ ಕೆಲಸಗಾರರು ಮುಷ್ಕರ ಹೂಡಿದ್ದರಿಂದ ಅಥವಾ ಉತ್ಪಾದನೆಯನ್ನು ನಿಧಾನಗೊಳಿಸಿದ್ದರಿಂದ ಉಂಟಾಗಿದ್ದರೆ

– ಹಂಗಾಮಿ ವಜಾ ಮಾಡಲಾದ ಕೆಲಸಗಾರನಿಗೆ ಪರಿಹಾರವು ಸಂದಾಯವಾಗತಕ್ಕುದಲ್ಲ.

**25ಎಫ್. ಕೆಲಸಗಾರನನ್ನು ಕೆಲಸದಿಂದ ತೆಗೆದುಹಾಕುವುದಕ್ಕೆ ಪೂರ್ವಭಾವಿ ಷರತ್ತುಗಳು.–** ಯಾವುದೇ ಕೈಗಾರಿಕೆಯಲ್ಲಿ ನಿಯೋಜಿತನಾದ ಮತ್ತು ನಿಯೋಜಕನ ಅಧೀನದಲ್ಲಿ ಒಂದು ವರ್ಷಕ್ಕೆ ಕಡಿಮೆ ಇಲ್ಲದಂತೆ ನಿರಂತರ ಸೇವೆ ಸಲ್ಲಿಸಿದ ಯಾವನೇ ಕೆಲಸಗಾರನನ್ನು, ನಿಯೋಜಕನು,–

(ಎ) ಕೆಲಸದಿಂದ ತೆಗೆದುಹಾಕುವ ಬಗ್ಗೆ ಕಾರಣಗಳನ್ನು ಸೂಚಿಸುವ ಒಂದು ತಿಂಗಳ ಲಿಖಿತ ನೋಟೀಸನ್ನು ಕೆಲಸಗಾರನಿಗೆ ಕೊಡಲಾಗಿದ್ದು ಆ ನೋಟೀಸಿನ ಅವಧಿಯು ಮುಕ್ತಾಯವಾಗುವವರೆಗೆ ಅಥವಾ ಅಂಥ ನೋಟೀಸಿಗೆ ಬದಲಾಗಿ ನೋಟೀಸಿನ ಅವಧಿಯ ಮಜೂರಿಗಳನ್ನು ಕೆಲಸಗಾರನಿಗೆ ಸಂದಾಯ ಮಾಡುವವರೆಗೆ;

(ಬಿ) ಕೆಲಸದಿಂದ ತೆಗೆದುಹಾಕುವ ಸಮಯದಲ್ಲಿ ಕೆಲಸಗಾರನಿಗೆ ನಿರಂತರ ಸೇವೆಯ ಪ್ರತಿಯೊಂದು ಪೂರ್ಣ ವರ್ಷಕ್ಕೆ ಅಥವಾ ಆರು ತಿಂಗಳು ಮೀರಿದ ಅದರ ಯಾವುದೇ ಭಾಗಕ್ಕೆ ಹದಿನೈದು ದಿನಗಳ ಸರಾಸರಿ ವೇತನಕ್ಕೆ ಸಮನಾಗಿರತಕ್ಕ ಪರಿಹಾರವನ್ನು ಸಂದಾಯ ಮಾಡುವವರೆಗೆ; ಮತ್ತು

(ಸಿ) ನಿಯಮಿಸಿದ ರೀತಿಯಲ್ಲಿ ನೋಟೀಸನ್ನು ಸಮುಚಿತ ಸರ್ಕಾರಕ್ಕೆ ಅಥವಾ ಸಮುಚಿತ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಕ್ಕೆ ಕೊಡುವವರೆಗೆ–

– ಕೆಲಸದಿಂದ ತೆಗೆದುಹಾಕತಕ್ಕುದಲ್ಲ.

**25ಎಫ್‌ಎಫ್. ಉದ್ಯಮಗಳ ವರ್ಗಾವಣೆಯ ಸಂದರ್ಭದಲ್ಲಿ ಕೆಲಸಗಾರರಿಗೆ ಪರಿಹಾರ.–** ಉದ್ಯಮದ ಒಡೆತನವು ಅಥವಾ ವ್ಯವಸ್ಥಾಪನೆಯು, ಒಪ್ಪಂದದ ಮೂಲಕ ಅಥವಾ ಕಾನೂನಿನ ಪ್ರವರ್ತನೆಯ ಮೂಲಕ ಆ ಉದ್ಯಮಕ್ಕೆ ಸಂಬಂಧಿಸಿದ ನಿಯೋಜಕನಿಂದ ಹೊಸ ನಿಯೋಜಕನಿಗೆ ವರ್ಗಾವಣೆ ಆಗಿದ್ದರೆ ಅಂಥ ವರ್ಗಾವಣೆಗೆ ನಿಕಟಪೂರ್ವದಲ್ಲಿ ಆ ಉದ್ಯಮದಲ್ಲಿ ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ ನಿರಂತರ ಸೇವೆಯಲ್ಲಿರುವ ಪ್ರತಿಯೊಬ್ಬ ಕೆಲಸಗಾರನು, ಆತನನ್ನು ಕೆಲಸದಿಂದ ತೆಗೆದುಹಾಕಿದ್ದರೆ ಹೇಗೋ ಹಾಗೆ 25 ಎಫ್ ಪ್ರಕರಣದ ಉಪಬಂಧಗಳಿಗನುಸಾರವಾಗಿ ನೋಟೀಸು ಮತ್ತು ಪರಿಹಾರವನ್ನು ಪಡೆಯಲು ಹಕ್ಕು ಹೊಂದಿರತಕ್ಕುದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ವರ್ಗಾವಣೆಯ ಕಾರಣದಿಂದಾಗಿ ನಿಯೋಜಕ ಬದಲಾವಣೆಯಾಗಿರುವ ಯಾವುದೇ ಸಂದರ್ಭದಲ್ಲಿ,–

(ಎ) ಅಂಥ ವರ್ಗಾವಣೆಯಿಂದ ಕೆಲಸಗಾರನ ಸೇವೆಗೆ ತಡೆಯುಂಟಾಗಿರದಿದ್ದರೆ;

(ಬಿ) ಅಂಥ ವರ್ಗಾವಣೆಯ ತರುವಾಯ ಕೆಲಸಗಾರನಿಗೆ ಅನ್ವಯವಾಗುವ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ವರ್ಗಾವಣೆಗೆ ನಿಕಟಪೂರ್ವದಲ್ಲಿ ಅವನಿಗೆ ಅನ್ವಯವಾಗುತ್ತಿದ್ದವುಗಳಿಗಿಂತ ಯಾವುದೇ ರೀತಿಯಲ್ಲಿ ಕಡಿಮೆ ಅನುಕೂಲಕರವಾಗಿಲ್ಲದಿದ್ದರೆ; ಮತ್ತು

(ಸಿ) ಹೊಸ ನಿಯೋಜಕನು, ಅಂಥ ವರ್ಗಾವಣೆಯ ನಿಬಂಧನೆಗಳ ಮೇರೆಗೆ ಅಥವಾ ಅನ್ಯಥಾ ಒಬ್ಬ ಕೆಲಸಗಾರನಿಗೆ ಅವನನ್ನು ಕೆಲಸದಿಂದ ತೆಗೆದುಹಾಕಿದ ಸಂದರ್ಭದಲ್ಲಿ ಅವನ ಸೇವೆಯು ನಿರಂತರವಾಗಿದೆ ಎಂಬ ಮತ್ತು ವರ್ಗಾವಣೆಯಿಂದ ತಡೆಗೆ ಗುರಿಯಾಗಿಲ್ಲವೆಂಬ ಆಧಾರದ ಮೇಲೆ ಪರಿಹಾರವನ್ನು ಸಂದಾಯ ಮಾಡಲು ಕಾನೂನು ಸಮ್ಮತವಾಗಿ ಬದ್ಧನಾಗಿದ್ದರೆ

– ಆ ಕೆಲಸಗಾರನಿಗೆ ಅನ್ವಯವಾಗತಕ್ಕುದಲ್ಲ.

**25ಎಫ್‌ಎಫ್‌ಎ. ಯಾವುದೇ ಉದ್ಯಮವನ್ನು ಮುಚ್ಚಿಬಿಡುವ ಇಚ್ಛೆಯ ಬಗ್ಗೆ ಅರವತ್ತು ದಿನಗಳ ನೋಟೀಸು ಕೊಡುವುದು.**- (1) ಉದ್ಯಮವನ್ನು ಮುಚ್ಚಿಬಿಡಬೇಕೆಂದು ಇಚ್ಛಿಸುವ ನಿಯೋಜಕನು ಉದ್ದೇಶಿತ ಮುಚ್ಚುವಿಕೆಯನ್ನು ಜಾರಿಗೊಳಿಸುವ ದಿನಾಂಕಕ್ಕೆ ಮೊದಲು ಕನಿಷ್ಠ ಅರವತ್ತು ದಿನಗಳ ನೋಟೀಸನ್ನು ಆ ಉದ್ಯಮದ ಉದ್ದೇಶಿತ ಮುಚ್ಚುವಿಕೆಗೆ ಕಾರಣಗಳನ್ನು ಸಮುಚಿತ ಸರ್ಕಾರಕ್ಕೆ ಸ್ಪಷ್ಟವಾಗಿ ತಿಳಿಸಿ ನಿಯಮಿಸಲಾದ ರೀತಿಯಲ್ಲಿ ಜಾರಿ ಮಾಡತಕ್ಕದು:

ಪರಂತು,-

ಈ ಪ್ರಕರಣದಲ್ಲಿ ಇರುವುದು ಯಾವುದೂ,-

(ಎ) (i) ಐವತ್ತಕ್ಕಿಂತ ಕಡಿಮೆ ಕಾರ್ಮಿಕರು ನಿಯೋಜಿತರಾಗಿರುವ, ಅಥವಾ

(ii) ಹಿಂದಿನ ಹನ್ನೆರಡು ತಿಂಗಳಲ್ಲಿ ಸರಾಸರಿ ಪ್ರತಿಯೊಂದು ಕೆಲಸದ ದಿನದಂದು ಐವತ್ತಕ್ಕಿಂತ ಕಡಿಮೆ ನೌಕರರು ನಿಯೋಜಿತರಾದ,-

ಉದ್ಯಮ ಸಂಸ್ಥೆಗೆ,

(ಬಿ) ಕಟ್ಟಡಗಳು, ಸೇತುವೆಗಳು, ರಸ್ತೆಗಳು, ಕಾಲುವೆಗಳು, ಅಣೆಕಟ್ಟುಗಳ ನಿರ್ಮಾಣಕ್ಕಾಗಿ ಅಥವಾ ಇತರ ಕಾಮಗಾರಿ ಅಥವಾ ಪ್ರಾಯೋಜನೆಯ ನಿರ್ಮಾಣ ಕಾರ್ಯಕ್ಕಾಗಿ ಸ್ಥಾಪಿಸಲಾದಂಥ ಉದ್ಯಮ ಸಂಸ್ಥೆಗೆ,-

-ಅನ್ವಯವಾಗತಕ್ಕದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಸಮುಚಿತ ಸರ್ಕಾರಕ್ಕೆ, ಆ ಉದ್ಯಮದಲ್ಲಿ ಅಪಘಾತ ಅಥವಾ ನಿಯೋಜಕನ ಮರಣ ಅಥವಾ ಅದೇ ಬಗೆಯ ಅಸಾಧಾರಣ ಸಂದರ್ಭಗಳ ನಿಮಿತ್ತ (1)ನೇ ಉಪಪ್ರಕರಣದ ಉಪಬಂಧಗಳು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಅಂಥ ಉದ್ಯಮಕ್ಕೆ ಸಂಬಂಧಿಸಿ ಅನ್ವಯವಾಗತಕ್ಕದಲ್ಲವೆಂದು ನಿರ್ದೇಶಿಸುವುದು ಅಗತ್ಯವೆಂದು ಮನದಟ್ಟಾದರೆ ಅಂಥ ಆದೇಶದ ಮೂಲಕ ಹಾಗೆ ಮಾಡಬಹುದು.

**25 ಎಫ್‌ಎಫ್‌ಎಫ್. ಉದ್ಯಮಗಳನ್ನು ಮುಚ್ಚಿಬಿಡುವ ಸಂದರ್ಭದಲ್ಲಿ ಕೆಲಸಗಾರರಿಗೆ ಪರಿಹಾರ.**- ಯಾವುದೇ ಕಾರಣಕ್ಕಾಗಿ ಉದ್ಯಮವನ್ನು ಮುಚ್ಚಿಬಿಟ್ಟಿರುವಲ್ಲಿ, ಅಂಥ ಮುಚ್ಚುವಿಕೆಯ ನಿಕಟಪೂರ್ವದಲ್ಲಿ ಆ ಉದ್ಯಮದಲ್ಲಿ ಒಂದು ವರ್ಷಕ್ಕಿಂತ ಕಡಿಮೆಯಿಲ್ಲದಷ್ಟು ಅವಧಿಯವರೆಗೆ ನಿರಂತರ ಸೇವೆಯಲ್ಲಿರುವ ಪ್ರತಿಯೊಬ್ಬ ಕೆಲಸಗಾರನು, ಆ ಕೆಲಸಗಾರನನ್ನು ಕೆಲಸದಿಂದ ತೆಗೆದುಹಾಕಿದ್ದರೆ ಹೇಗೋ ಹಾಗೆ (2)ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅವನು 25 ಎಫ್ ಪ್ರಕರಣದ ಉಪಬಂಧಗಳಿಗೆ ಅನುಸಾರ ನೋಟೀಸು ಮತ್ತು ಪರಿಹಾರವನ್ನು ಪಡೆಯಲು ಹಕ್ಕುಳ್ಳವನಾಗತಕ್ಕದು:

ಪರಂತು, ನಿಯೋಜಕನ ನಿಯಂತ್ರಣವನ್ನು ಮೀರಿದ ಅನಿವಾರ್ಯ ಪರಿಸ್ಥಿತಿಗಳ ಕಾರಣದಿಂದಾಗಿ ಆ ಉದ್ಯಮವನ್ನು ಮುಚ್ಚಿರುವಲ್ಲಿ, ಆಗ ಆ ಕೆಲಸಗಾರನಿಗೆ 25ಎಫ್ ಪ್ರಕರಣದ (ಬಿ) ಖಂಡದ ಮೇರೆಗೆ ಸಂದಾಯವಾಗಬೇಕಾದ ಪರಿಹಾರವು ಅವನ ಮೂರು ತಿಂಗಳ ಸರಾಸರಿ ವೇತನವನ್ನು ಮೀರತಕ್ಕದಲ್ಲ.

ವಿವರಣೆ:- ಒಂದು ಉದ್ಯಮ ಸಂಸ್ಥೆಯು,-

(i) ಆರ್ಥಿಕ ತೊಂದರೆಗಳು (ಆರ್ಥಿಕ ನಷ್ಟಗಳನ್ನೊಳಗೊಂಡು); ಅಥವಾ

(ii) ವಿಲೇವಾರಿಯಾಗದ ದಾಸ್ತಾನುಗಳ ಸಂಚಯ; ಅಥವಾ

(iii) ಅದಕ್ಕೆ ನೀಡಿದ ಗುತ್ತಿಗೆ ಅಥವಾ ಲೈಸೆನ್ಸಿನ ಅವಧಿ ಮುಗಿದಿರುವುದು; ಅಥವಾ

(iv) ಆ ಉದ್ಯಮವು ಗಣಿ ಕೆಲಸಗಳಲ್ಲಿ ತೊಡಗಿರುವಂಥ ಸಂದರ್ಭದಲ್ಲಿ ಕೆಲಸಗಳು ನಡೆಯುತ್ತಿರುವ ಆ ಪ್ರದೇಶದಲ್ಲಿ ಖನಿಜಗಳು ಬರಿದಾಗುವಿಕೆ,

- ಈ ಕಾರಣಗಳಿಂದ ಮಾತ್ರವೇ ಮುಚ್ಚಿಬಿಟ್ಟಿರುವಲ್ಲಿ ಅದನ್ನು ಈ ಉಪ ಪ್ರಕರಣದ ಪರಂತುಕದ ಅರ್ಥದಲ್ಲಿ ಆ ನಿಯೋಜಕನ ನಿಯಂತ್ರಣವನ್ನು ಮೀರಿ ಅನಿವಾರ್ಯವಾದ ಪರಿಸ್ಥಿತಿಗಳ ಕಾರಣದಿಂದ ಮುಚ್ಚಿಬಿಡಲಾಗಿದೆಯೆಂದು ಭಾವಿಸತಕ್ಕುದಲ್ಲ.

(1ಎ) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಅಂಥ ಕಾರ್ಯಾಚರಣೆಗಳು ನಡೆಯುತ್ತಿರುವಂಥ ಪ್ರದೇಶದಲ್ಲಿಯ ಖನಿಜಗಳ ಬರಿದಾಗುವಿಕೆ ಕಾರಣ ಮಾತ್ರದಿಂದ ಗಣಿ ಕಾರ್ಯಾಚರಣೆಯಲ್ಲಿ ತೊಡಗಿದ ಅಂಥ ಉದ್ಯಮವು ಮುಚ್ಚಿಹೋದಲ್ಲಿ ಆ ಉಪಪ್ರಕರಣದಲ್ಲಿ ಉಲ್ಲೇಖಿಸಲಾದಂಥ ಯಾವನೇ ಕೆಲಸಗಾರನು-

(ಎ) ನಿಯೋಜಕನು, ಆ ಕೆಲಸಗಾರನಿಗೆ ಅವನು ಪಡೆಯಲು ಹಕ್ಕುಳ್ಳಂಥ ಅದೇ ವೇತನದ ಮೇಲೆ ಮತ್ತು ಆ ಮುಚ್ಚುವಿಕೆಗೆ ನಿಕಟಪೂರ್ವದಲ್ಲಿ ಸೇವೆಯಲ್ಲಿ ಅವನಿಗೆ ಅನ್ವಯವಾಗುವಂಥವೇ ಷರತ್ತು ಹಾಗೂ ನಿಬಂಧನೆಗಳ ಮೇಲೆ ಮುಚ್ಚುವಿಕೆಯ ದಿನಾಂಕದಿಂದ ಜಾರಿಗೆ ಬರುವಂತೆ ಬದಲಿ ಉದ್ಯೋಗ ಒದಗಿಸಿದ್ದರೆ;

(ಬಿ) ಅಂಥ ಬದಲಿ ಉದ್ಯೋಗದಿಂದಾಗಿ ಆ ಕೆಲಸಗಾರನ ಸೇವೆಗೆ ಅಡೆತಡೆ ಉಂಟಾಗದಿದ್ದರೆ; ಮತ್ತು

(ಸಿ) ನಿಯೋಜಕನು ಅಂಥ ಬದಲಿ ಉದ್ಯೋಗದ ನಿಬಂಧನೆಗಳ ಮೇರೆಗೆ ಅಥವಾ ಅನ್ಯಥಾ ಒಬ್ಬ ಕೆಲಸಗಾರನಿಗೆ ಅವನನ್ನು ಕೆಲಸದಿಂದ ತೆಗೆದುಹಾಕಿದ ಸಂದರ್ಭದಲ್ಲಿ, ಅವನ ಸೇವೆ ನಿರಂತರವಾಗಿದ್ದು ಅಂಥ ಬದಲಿ ಉದ್ಯೋಗದಿಂದ ಅಡೆತಡೆಗೆ ಗುರಿಯಾಗಿಲ್ಲವೆಂಬ ಕಾರಣದ ಮೇಲೆ ಅವನಿಗೆ ಪರಿಹಾರ ಧನ ಸಂದಾಯ ಮಾಡಲು ಕಾನೂನು ಮೇರೆಗೆ ಹೊಣೆಯಾಗಿದ್ದರೆ,

- 25ಎಫ್ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಯಾವುದೇ ನೋಟೀಸು ಪಡೆಯಲು ಅಥವಾ ಪರಿಹಾರ ಪಡೆಯಲು ಹಕ್ಕುಳ್ಳವನಾಗಿರತಕ್ಕುದಲ್ಲ.

(1ಬಿ) (1)ನೇ ಮತ್ತು (1ಎ) ಉಪ-ಪ್ರಕರಣದ ಉದ್ದೇಶಗಳಿಗಾಗಿ "ಖನಿಜಗಳು" ಮತ್ತು "ಗಣಿ ಕಾರ್ಯಾಚರಣೆಗಳು" ಎಂಬ ಪದಗಳಿಗೆ ಗಣಿಗಳು ಹಾಗೂ ಖನಿಜಗಳ (ವಿನಿಯಮನ ಮತ್ತು ಅಭಿವೃದ್ಧಿ) ಅಧಿನಿಯಮ, 1957ರ 3ನೇ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಡಲಾದ ಅರ್ಥಗಳನ್ನು ಹೊಂದಿರತಕ್ಕುದು.

(2) ಕಟ್ಟಡಗಳು, ಸೇತುವೆಗಳು, ರಸ್ತೆಗಳು, ಕಾಲುವೆಗಳು, ಅಣೆಕಟ್ಟುಗಳು ಅಥವಾ ಇತರ ನಿರ್ಮಾಣ ಕಾರ್ಯಕ್ಕಾಗಿ ಪ್ರಾರಂಭವಾದ ಯಾವುದೇ ಉದ್ಯಮವು ಆ ಉದ್ಯಮ ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳೊಳಗೆ ಕೆಲಸ ಮುಕ್ತಾಯವಾದುದರಿಂದ ಮುಚ್ಚಿಬಿಟ್ಟಿದ್ದರೆ ಅದರಲ್ಲಿ ನಿಯೋಜಿತನಾದ ಯಾವನೇ ಕೆಲಸಗಾರನು 25 ಎಫ್ ಪ್ರಕರಣದ (ಬಿ) ಖಂಡದ ಮೇರೆಗೆ ಯಾವುದೇ ಪರಿಹಾರಕ್ಕೆ ಹಕ್ಕುಳ್ಳವನಾಗಿರತಕ್ಕುದಲ್ಲ, ಆದರೆ ಎರಡು ವರ್ಷಗಳೊಳಗೆ ಆ ನಿರ್ಮಾಣ ಕಾರ್ಯ ಮುಕ್ತಾಯಗೊಳ್ಳದಿದ್ದರೆ ಅವನು ಆ ಪ್ರಕರಣದ ಮೇರೆಗೆ ನೋಟೀಸು ಮತ್ತು ನಿರಂತರ ಸೇವೆಯ ಪೂರ್ಣ ವರ್ಷಕ್ಕಾಗಿ ಅಥವಾ ಆರು ತಿಂಗಳ ಅವಧಿಗಿಂತ ಹೆಚ್ಚಿನ ಅದರ ಯಾವುದೇ ಭಾಗಕ್ಕೆ ಪರಿಹಾರಕ್ಕೆ ಹಕ್ಕುಳ್ಳವನಾಗಿರತಕ್ಕುದು.

**25ಜಿ. ಕೆಲಸದಿಂದ ತೆಗೆದುಹಾಕುವ ಪ್ರಕ್ರಿಯೆ.-** ಭಾರತದ ಪ್ರಜೆಯಾಗಿರುವ ಕೈಗಾರಿಕಾ ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡುವ ಯಾವನೇ ಕೆಲಸಗಾರನನ್ನು ಕೆಲಸದಿಂದ ತೆಗೆದುಹಾಕಬೇಕಾಗಿರುವಲ್ಲಿ ಮತ್ತು ಅವನು ಆ ಸಂಸ್ಥೆಯಲ್ಲಿ ಕೆಲಸಗಾರರ ನಿರ್ದಿಷ್ಟ ವರ್ಗಕ್ಕೆ ಸೇರಿರುವಲ್ಲಿ, ಈ ಸಂಬಂಧದಲ್ಲಿ ನಿಯೋಜಕ ಮತ್ತು ಆ ಕೆಲಸಗಾರನ ನಡುವೆ ಯಾವುದೇ ಒಪ್ಪಂದ ಇಲ್ಲದಿರುವಲ್ಲಿ, ಆ ನಿಯೋಜಕನು ಕಾರಣಗಳನ್ನು ದಾಖಲು ಮಾಡಿ ಯಾರೇ ಇತರ ಕೆಲಸಗಾರನನ್ನು ಕೆಲಸದಿಂದ ತೆಗೆದುಹಾಕಬೇಕಾದರೆ ಸಾಮಾನ್ಯವಾಗಿ, ಆ ವರ್ಗದಲ್ಲಿ ನಿಯೋಜಿತನಾದ ಕೊನೆಯ ವ್ಯಕ್ತಿಯಾದಂಥ ಕೆಲಸಗಾರನನ್ನು ಕೆಲಸದಿಂದ ತೆಗೆದುಹಾಕತಕ್ಕುದು.

**25ಎಚ್. ಕೆಲಸದಿಂದ ತೆಗೆದುಹಾಕಿದ ಕೆಲಸಗಾರರ ಮರು ನಿಯೋಜನೆ.–** ಯಾರೇ ಕೆಲಸಗಾರನನ್ನು ಕೆಲಸದಿಂದ ತೆಗೆದುಹಾಕಲಾಗಿದ್ದು, ನಿಯೋಜಕನು ಯಾರೇ ವ್ಯಕ್ತಿಗಳನ್ನು ನಿಯೋಜನೆಗೆ ತೆಗೆದುಕೊಳ್ಳಬಯಸಿರುವಲ್ಲಿ, ಅವನು ನಿಯಮಿಸಬಹುದಾದಂಥ ರೀತಿಯಲ್ಲಿ ಭಾರತದ ನಾಗರೀಕರಾಗಿದ್ದು ಕೆಲಸದಿಂದ ತೆಗೆದುಹಾಕಲಾದ ಕೆಲಸಗಾರರಿಗೆ ಮರು ನಿಯೋಜನೆಗೆ ತಮ್ಮ ಒಪ್ಪಿಗೆಯನ್ನು ಸೂಚಿಸಲು ಒಂದು ಅವಕಾಶವನ್ನು ಕೊಡತಕ್ಕುದು ಮತ್ತು ಮರುನಿಯೋಜನೆಗೆ ತಮ್ಮ ಒಪ್ಪಿಗೆ ಸೂಚಿಸುವ, ಕೆಲಸದಿಂದ ತೆಗೆದುಹಾಕಲಾದ ಅಂಥ ಕೆಲಸಗಾರರು ಇತರ ವ್ಯಕ್ತಿಗಳಿಗಿಂತ ಹೆಚ್ಚಿನ ಆದ್ಯತೆ ಹೊಂದಿರತಕ್ಕುದು.

**25ಐ. ಈ ಅಧ್ಯಾಯದ ಮೇರೆಗೆ ನಿಯೋಜಿತರಿಂದ ಬಾಕಿಯಿರುವ ಹಣದ ವಸೂಲಿ.–** ಕೈಗಾರಿಕಾ ವಿವಾದಗಳ (ತಿದ್ದುಪಡಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1956ರ (1956ರ 36) ಮೂಲಕ ನಿರಸಿತ ಪ್ರ. 19 (10–3–1957ರಿಂದ ಜಾರಿಗೆ ಬರುವಂತೆ)

**25ಜೆ. ಈ ಅಧ್ಯಾಯಕ್ಕೆ ಅಸಂಗತವಾದ ಕಾನೂನುಗಳ ಪರಿಣಾಮ.–** (1) ಈ ಅಧ್ಯಾಯದ ಉಪಬಂಧಗಳು ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳು) ಅಧಿನಿಯಮ, 1946 (1946ರ 20) ರ ಮೇರೆಗೆ ರಚಿಸಲಾದ ಸ್ಥಾಯಿ ಆದೇಶಗಳನ್ನೊಳಗೊಂಡು ಯಾವುದೇ ಇತರ ಕಾನೂನಿನಲ್ಲಿ ಇದಕ್ಕೆ ಅಸಂಗತವಾದುದು ಏನೇ ಇದ್ದರೂ, ಪರಿಣಾಮಕಾರಿಯಾಗಿರತಕ್ಕುದು:

ಪರಂತು, ಯಾವುದೇ ಇತರ ಅಧಿನಿಯಮ ಅಥವಾ ನಿಯಮಗಳು, ಉಪಬಂಧಗಳು ಅಥವಾ ಅವುಗಳ ಮೇರೆಗೆ ಹೊರಡಿಸಿದ ಆದೇಶಗಳು ಅಥವಾ ಅಧಿಸೂಚನೆಗಳ ಮೇರೆಗೆ ಅಥವಾ ಯಾವುದೇ ಸ್ಥಾಯಿ ಆದೇಶಗಳು ಅಥವಾ ಯಾವುದೇ ಐತೀರ್ಪು, ಸೇವಾ ಕರಾರು ಇವುಗಳ ಮೇರೆಗೆ ಅಥವಾ ಅನ್ಯಥಾ, ಈ ಅಧಿನಿಯಮದ ಮೇರೆಗೆ ಕೆಲಸಗಾರನು ಹಕ್ಕುಳ್ಳವನಾಗಬಹುದಾಗಿದ್ದ ಪ್ರಯೋಜನಗಳಿಗಿಂತ ಹೆಚ್ಚು ಅನುಕೂಲಕರವಾದಂಥ ಯಾವುದೇ ವಿಷಯಕ್ಕೆ ಸಂಬಂಧಿಸಿದ ಪ್ರಯೋಜನಗಳಿಗೆ ಹಕ್ಕುಳ್ಳವನಾಗಿರುವಲ್ಲಿ, ಆ ಕೆಲಸಗಾರನು, ಈ ಅಧಿನಿಯಮದ ಮೇರೆಗೆ ಇತರ ವಿಷಯಗಳಿಗೆ ಸಂಬಂಧಿಸಿ ಪ್ರಯೋಜನಗಳನ್ನು ಪಡೆಯುತ್ತಿದ್ದರೂ, ಆ ವಿಷಯಕ್ಕೆ ಸಂಬಂಧಿಸಿ ಹೆಚ್ಚು ಅನುಕೂಲಕರ ಪ್ರಯೋಜನಗಳಿಗೆ ಹಕ್ಕುಳ್ಳವನಾಗಿರುವುದು ಮುಂದುವರಿಯತಕ್ಕುದು.

(2) ಸಂದೇಹಗಳ ನಿವಾರಣೆಗಾಗಿ, ಈ ಅಧ್ಯಾಯದಲ್ಲಿರುವುದು ಯಾವುದೂ, ಯಾವುದೇ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳು, ಆ ಕಾನೂನು ಕೈಗಾರಿಕಾ ವಿವಾದಗಳ ಇತ್ಯರ್ಥಕ್ಕೆ ಉಪಬಂಧಿಸಿರುವಷ್ಟರ ಮಟ್ಟಿಗೆ ಆ ಉಪಬಂಧಗಳಿಗೆ ಬಾಧಕವಾಗುವುದೆಂದು ಭಾವಿಸತಕ್ಕುದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ, ಆದರೆ ನಿಯೋಜಕರ ಮತ್ತು ಕೆಲಸಗಾರರ ಹಕ್ಕು ಬಾಧ್ಯತೆಗಳು ಹಂಗಾಮಿ ವಜಾ ಮತ್ತು ಕೆಲಸದಿಂದ ತೆಗೆದುಹಾಕುವಿಕೆ ಇವುಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅವುಗಳನ್ನು ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ನಿರ್ಧರಿಸತಕ್ಕುದು.

## ಅಧ್ಯಾಯ –V ಬಿ

## ಕೆಲವು ಕಾರ್ಯಸಂಸ್ಥೆಗಳಲ್ಲಿ ಹಂಗಾಮಿ ವಜಾ, ಕೆಲಸದಿಂದ ತೆಗೆದುಹಾಕುವಿಕೆ ಮತ್ತು ಮುಚ್ಚುವಿಕೆ ಇವುಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು

**25ಕೆ. 5ಬಿ ಅಧ್ಯಾಯದ ಅನ್ವಯ.–** (1) ಈ ಅಧ್ಯಾಯದ ಉಪಬಂಧಗಳು ಹಿಂದಿನ ಹನ್ನೆರಡು ತಿಂಗಳಿಗೆ ಸರಾಸರಿ ಪ್ರತಿಯೊಂದು ಕೆಲಸದ ದಿನದಂದು ನೂರಕ್ಕಿಂತ ಕಡಿಮೆಯಿಲ್ಲದಷ್ಟು ಕೆಲಸಗಾರರನ್ನು ನಿಯೋಜಿಸಿದ್ದ (ಹಂಗಾಮು ಸ್ವರೂಪದ ಕಾರ್ಯಸಂಸ್ಥೆಯಾಗಿಲ್ಲದ ಅಥವಾ ತಡೆತಡೆದು ಮಾತ್ರ ಕೆಲಸ ನಿರ್ವಹಿಸುತ್ತಿರುವ ಕಾರ್ಯಸಂಸ್ಥೆಯಾಗಿಲ್ಲದ) ಕೈಗಾರಿಕಾ ಕಾರ್ಯಸಂಸ್ಥೆಗೆ ಅನ್ವಯವಾಗತಕ್ಕುದು.

(2) ಕೈಗಾರಿಕಾ ಕಾರ್ಯಸಂಸ್ಥೆಯು ಹಂಗಾಮು ಸ್ವರೂಪದ್ದೇ ಅಥವಾ ತಡೆತಡೆದು ಮಾತ್ರ ಕೆಲಸ ನಿರ್ವಹಿಸುವ ಕಾರ್ಯಸಂಸ್ಥೆಯೇ ಎಂಬ ಪ್ರಶ್ನೆ ಉದ್ಭವಿಸಿದಾಗ ಆ ಬಗ್ಗೆ ಸಮುಚಿತ ಸರ್ಕಾರದ ನಿರ್ಣಯವು ಅಂತಿಮವಾಗಿರತಕ್ಕುದು.

**25ಎಲ್. ಪರಿಭಾಷೆಗಳು.**- ಈ ಅಧ್ಯಾಯದ ಉದ್ದೇಶಗಳಿಗಾಗಿ,-

(ಎ) "ಕೈಗಾರಿಕಾ ಕಾರ್ಯಸಂಸ್ಥೆ" ಎಂದರೆ-

(i) ಕಾರ್ಖಾನೆಗಳ ಅಧಿನಿಯಮ, 1948ರ (1948ರ 63) 2ನೇ ಪ್ರಕರಣದ (ಎಂ) ಖಂಡದಲ್ಲಿ ಪರಿಭಾಷಿಸಲಾದ ಕಾರ್ಖಾನೆ;

(ii) ಗಣಿಗಳ ಅಧಿನಿಯಮ, 1952ರ (1952ರ 35) 2ನೇ ಪ್ರಕರಣದ (1)ನೇ ಉಪಪ್ರಕರಣದ (ಎಫ್) ಖಂಡದಲ್ಲಿ ಪರಿಭಾಷಿಸಲಾದ ಗಣಿ; ಅಥವಾ

(iii) ಪ್ಲಾಂಟೇಷನ್ ಕಾರ್ಮಿಕ ಅಧಿನಿಯಮ, 1951ರ (1951ರ 69) 2ನೇ ಪ್ರಕರಣದ (ಜೆ) ಖಂಡದಲ್ಲಿ ಪರಿಭಾಷಿಸಲಾದ ಪ್ಲಾಂಟೇಷನ್;

(ಬಿ) 2ನೇ ಪ್ರಕರಣದ (ಎ) ಖಂಡದ (ii) ನೇ ಉಪಖಂಡದಲ್ಲಿ ಏನೇ ಇದ್ದರೂ,-

(i) ಯಾವ ಕಂಪನಿಯಲ್ಲಿ ಸಂದಾಯಿತ ಷೇರು ಬಂಡವಾಳದ ಶೇಕಡಾ ಐವತ್ತೊಂದರಷ್ಟಕ್ಕಿಂತ ಕಡಿಮೆಯಿಲ್ಲದಷ್ಟನ್ನು ಕೇಂದ್ರ ಸರ್ಕಾರವು ಧಾರಣ ಮಾಡಿರುವುದೋ ಆ ಯಾವುದೇ ಕಂಪನಿಗೆ ಸಂಬಂಧಿಸಿದಂತೆ; ಅಥವಾ

(ii) ಸಂಸತ್ತು ರಚಿಸಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ (2ನೇ ಪ್ರಕರಣದ (ಎ) ಖಂಡದ (i)ನೇ ಉಪಖಂಡದಲ್ಲಿ ಉಲ್ಲೇಖಿಸಲಾದ ನಿಗಮವಾಗಿಲ್ಲದ) ಯಾವುದೇ ನಿಗಮಕ್ಕೆ ಸಂಬಂಧಿಸಿದಂತೆ,

- ಕೇಂದ್ರ ಸರ್ಕಾರವು ಸಮುಚಿತ ಸರ್ಕಾರವಾಗಿರತಕ್ಕುದು.

**25ಎಂ. ಹಂಗಾಮಿ ವಜಾದ ನಿಷೇಧ.**- (1) ಈ ಅಧ್ಯಾಯವು ಅನ್ವಯವಾಗುವ ಕೈಗಾರಿಕಾ ಕಾರ್ಯಸಂಸ್ಥೆಯ ಹಾಜರಿ ಪುಸ್ತಕದಲ್ಲಿ ಹೆಸರಿರುವ ಯಾವನೇ ಕೆಲಸಗಾರನನ್ನು (ಬದಲಿ ಕೆಲಸಗಾರ ಅಥವಾ ಆಕಸ್ಮಿಕ ಕೆಲಸಗಾರನನ್ನು ಹೊರತುಪಡಿಸಿ) ಅವನ ನಿಯೋಜಕನು, ಹಂಗಾಮಿ ವಜಾವು ವಿದ್ಯುಚ್ಛಕ್ತಿಯ ಕೊರತೆ ಅಥವಾ ಪ್ರಕೃತಿ ವಿಕೋಪದಿಂದಾಗಿ ಮತ್ತು ಗಣಿಯ ಸಂದರ್ಭದಲ್ಲಿ ಅಂಥ ಹಂಗಾಮಿ ವಜಾವು ಅಗ್ನಿ ಆಕಸ್ಮಿಕ, ಪ್ರವಾಹ, ಮಿತಿಮೀರಿದ ದಹ್ಯ ಅನಿಲ ಅಥವಾ ಸ್ಫೋಟದ ಕಾರಣದಿಂದಾಗಿ ಸಹ ಮಾಡಲಾಗಿದ್ದ ಹೊರತು, ಅಂಥ ಹಂಗಾಮಿ ವಜಾ ಬಗ್ಗೆ ಅರ್ಜಿಸಲ್ಲಿಸಿ ಸಮುಚಿತ ಸರ್ಕಾರದ ಅಥವಾ ಆ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರದ (ಈ ಪ್ರಕರಣದಲ್ಲಿ ಇನ್ನು ಮುಂದೆ ನಿರ್ದಿಷ್ಟ ಪ್ರಾಧಿಕಾರ ಎಂದು ಉಲ್ಲೇಖಿಸಲಾಗಿದೆ) ಪೂರ್ವಾನುಮತಿಯನ್ನು ಪಡೆದ ಹೊರತು ಹಂಗಾಮಿ ವಜಾ ಮಾಡತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಮೇರೆಗೆ ಅನುಮತಿಗಾಗಿ ಸಲ್ಲಿಸತಕ್ಕ ಅರ್ಜಿಯನ್ನು, ನಿಯೋಜಕನು ಹಾಗೆ ಹಂಗಾಮಿಯಾಗಿ ವಜಾ ಮಾಡುವ ಉದ್ದೇಶದ ಕಾರಣಗಳನ್ನು ಸ್ಪಷ್ಟವಾಗಿ ತಿಳಿಸುತ್ತಾ ನಿಯಮಿಸಿದ ರೀತಿಯಲ್ಲಿ ಸಲ್ಲಿಸತಕ್ಕುದು ಮತ್ತು ಅಂಥ ಅರ್ಜಿಯ ಒಂದು ಪ್ರತಿಯನ್ನು ಅದೇ ವೇಳೆಗೆ ಸಂಬಂಧಪಟ್ಟ ಕೆಲಸಗಾರನಿಗೆ ಸಹ ನಿಯಮಿಸಿದ ರೀತಿಯಲ್ಲಿ ಜಾರಿಮಾಡತಕ್ಕುದು.

(3) ಗಣಿ ಆಗಿರುವ ಕೈಗಾರಿಕಾ ಕಾರ್ಯಸಂಸ್ಥೆಯ ಕೆಲಸಗಾರರನ್ನು (ಬದಲಿ ಕೆಲಸಗಾರರು ಅಥವಾ ಆಕಸ್ಮಿಕ ಕೆಲಸಗಾರರನ್ನು ಹೊರತುಪಡಿಸಿ) ಅಗ್ನಿ ಆಕಸ್ಮಿಕ, ಪ್ರವಾಹ ಅಥವಾ ಮಿತಿ ಮೀರಿದ ದಹ್ಯ ಅನಿಲ

ಅಥವಾ ಸ್ಫೋಟದ ಕಾರಣದಿಂದಾಗಿ, (1)ನೇ ಉಪಪ್ರಕರಣದ ಮೇರೆಗೆ ಹಂಗಾಮಿ ವಜಾ ಮಾಡಲಾಗಿರುವಲ್ಲಿ, ನಿಯೋಜಕನು, ಅಂಥ ಸಂಸ್ಥೆಗೆ ಸಂಬಂಧಿಸಿ ಅಂಥ ಹಂಗಾಮಿ ವಜಾದ ಪ್ರಾರಂಭದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಹಂಗಾಮಿ ವಜಾವನ್ನು ಮುಂದುವರಿಸಲು ಅನುಮತಿಗಾಗಿ ಸಮುಚಿತ ಸರ್ಕಾರಕ್ಕೆ ಅಥವಾ ನಿರ್ದಿಷ್ಟ ಪ್ರಾಧಿಕಾರಕ್ಕೆ ನಿಯಮಿಸಿದ ರೀತಿಯಲ್ಲಿ ಅರ್ಜಿ ಸಲ್ಲಿಸತಕ್ಕುದು.

(4) (1)ನೇ ಉಪ-ಪ್ರಕರಣದ ಅಥವಾ (3)ನೇ ಉಪ-ಪ್ರಕರಣದ ಮೇರೆಗೆ ಅನುಮತಿಗಾಗಿ ಅರ್ಜಿ ಸಲ್ಲಿಸಿರುವಲ್ಲಿ, ಸಮುಚಿತ ಸರ್ಕಾರವು ಅಥವಾ ನಿರ್ದಿಷ್ಟ ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಮತ್ತು ನಿಯೋಜಕನಿಗೆ, ಸಂಬಂಧಪಟ್ಟ ಕೆಲಸಗಾರರಿಗೆ ಮತ್ತು ಅಂಥ ಹಂಗಾಮಿ ವಜಾದಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ, ಅಂಥ ಹಂಗಾಮಿ ವಜಾದ ಕಾರಣಗಳ ನೈಜತೆ ಮತ್ತು ಪರ್ಯಾಪ್ತತೆ, ಕೆಲಸಗಾರರ ಹಿತಾಸಕ್ತಿ ಮತ್ತು ಸಂಬಂಧಪಟ್ಟ ಎಲ್ಲಾ ಸಂಗತಿಗಳನ್ನು ಗಮನದಲ್ಲಿಟ್ಟು ಆದೇಶದ ಮೂಲಕ ಮತ್ತು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಅಂಥ ಅನುಮತಿಯನ್ನು ನೀಡಬಹುದು ಅಥವಾ ನಿರಾಕರಿಸಬಹುದು ಮತ್ತು ಅಂಥ ಆದೇಶದ ಒಂದು ಪ್ರತಿಯನ್ನು ನಿಯೋಜಕನಿಗೆ ಮತ್ತು ಕೆಲಸಗಾರರಿಗೆ ಕಳುಹಿಸತಕ್ಕುದು.

(5) (1)ನೇ ಉಪ-ಪ್ರಕರಣ ಅಥವಾ (3)ನೇ ಉಪ-ಪ್ರಕರಣದ ಮೇರೆಗೆ ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸಿರುವಲ್ಲಿ ಮತ್ತು ಸಮುಚಿತ ಸರ್ಕಾರ ಅಥವಾ ನಿರ್ದಿಷ್ಟ ಪ್ರಾಧಿಕಾರವು ಅಂಥ ಅನುಮತಿಯನ್ನು ನೀಡುವ ಅಥವಾ ನೀಡಲು ನಿರಾಕರಿಸುವ ಆದೇಶದ ಬಗ್ಗೆ, ಅಂಥ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗೆ ನಿಯೋಜಕನಿಗೆ ತಿಳಿಸದೆ ಇದ್ದಲ್ಲಿ, ಸದರಿ ಅರವತ್ತು ದಿನಗಳ ಅವಧಿಯು ಮುಗಿದ ಮೇಲೆ ಯಾವ ಅನುಮತಿಗಾಗಿ ಅರ್ಜಿ ಸಲ್ಲಿಸಲಾಗಿತ್ತೋ ಅದನ್ನು ನೀಡಲಾಗಿದೆ ಎಂದು ಭಾವಿಸತಕ್ಕುದು.

(6) ಅನುಮತಿಯನ್ನು ನೀಡುವ ಅಥವಾ ನೀಡಲು ನಿರಾಕರಿಸುವ ಸಮುಚಿತ ಸರ್ಕಾರದ ಅಥವಾ ನಿರ್ದಿಷ್ಟ ಪ್ರಾಧಿಕಾರದ ಆದೇಶವು (7)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕುದು ಮತ್ತು ಸಂಬಂಧಪಟ್ಟ ಎಲ್ಲ ಪಕ್ಷಕಾರರಿಗೆ ಬಂಧನಕಾರಿಯಾಗತಕ್ಕುದು ಮತ್ತು ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದವರೆಗೆ ಜಾರಿಯಲ್ಲಿರತಕ್ಕುದು.

(7) ಸಮುಚಿತ ಸರ್ಕಾರವು ಅಥವಾ ನಿರ್ದಿಷ್ಟ ಪ್ರಾಧಿಕಾರವು, ತಾನಾಗಿಯೇ ಅಥವಾ ನಿಯೋಜಕನು ಅಥವಾ ಯಾವನೇ ಕೆಲಸಗಾರನು ಸಲ್ಲಿಸಿದ ಅರ್ಜಿಯ ಮೇಲೆ, 4ನೇ ಉಪ-ಪ್ರಕರಣದ ಮೇರೆಗೆ ಅನುಮತಿಯನ್ನು ನೀಡುವ ಅಥವಾ ನಿರಾಕರಿಸುವ ತನ್ನ ಆದೇಶವನ್ನು ಪುನರವಲೋಕಿಸಬಹುದು ಅಥವಾ ಆ ವಿಷಯವನ್ನು ನ್ಯಾಯ ನಿರ್ಣಯಕ್ಕಾಗಿ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಬಹುದು ಅಥವಾ, ಸಂದರ್ಭಾನುಸಾರ, ಉಲ್ಲೇಖಿಸುವಂತೆ ಮಾಡಬಹುದು:

ಪರಂತು, ಈ ಉಪ-ಪ್ರಕರಣದ ಮೇರೆಗೆ ನ್ಯಾಯಾಧಿಕರಣಕ್ಕೆ ಉಲ್ಲೇಖ ಮಾಡಿರುವಲ್ಲಿ, ಅದು, ಅಂಥ ಉಲ್ಲೇಖದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಐತೀರ್ಪನ್ನು ನೀಡತಕ್ಕುದು.

(8) (1)ನೇ ಉಪ-ಪ್ರಕರಣದ ಮೇರೆಗೆ ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸದಿರುವಲ್ಲಿ ಅಥವಾ (3)ನೇ ಉಪ-ಪ್ರಕರಣದ ಮೇರೆಗೆ, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸದೇ ಇರುವಲ್ಲಿ ಅಥವಾ ಯಾವುದೇ ಹಂಗಾಮಿ ವಜಾಕ್ಕೆ ಅನುಮತಿಯನ್ನು ನಿರಾಕರಿಸಿರುವಲ್ಲಿ ಅಂಥ ಹಂಗಾಮಿ ವಜಾ ಕೆಲಸಗಾರರನ್ನು ಹಂಗಾಮಿ ವಜಾ ಮಾಡಲಾದ ದಿನಾಂಕದಿಂದ ಕಾನೂನುಬಾಹಿರವಾಗಿರುವುದಾಗಿ ಭಾವಿಸತಕ್ಕುದು ಮತ್ತು ಆ ಕೆಲಸಗಾರರು, ಅವರನ್ನು ಹಂಗಾಮಿ ವಜಾ ಮಾಡಿರದಿದ್ದರೆ ಹೇಗೋ ಹಾಗೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗಿನ ಎಲ್ಲ ಪ್ರಯೋಜನಗಳಿಗೆ ಹಕ್ಕುಳ್ಳವರಾಗತಕ್ಕುದು.

(9) ಈ ಪ್ರಕರಣದ ಪೂರ್ವೋಕ್ತ ಉಪಬಂಧಗಳಲ್ಲಿ ಏನೇ ಇದ್ದರೂ, ಸಮುಚಿತ ಸರ್ಕಾರಕ್ಕೆ ಆ ಸಂಸ್ಥೆಯಲ್ಲಿ ಅಪಘಾತ ಅಥವಾ ನಿಯೋಜಕನ ಮರಣ ಅಥವಾ ಅದೇ ಬಗೆಯ ಅಸಾಧಾರಣ ಸಂದರ್ಭಗಳ ನಿಮಿತ್ತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯವರೆಗೆ, (1)ನೇ ಉಪ-ಪ್ರಕರಣದ ಅಥವಾ ಸಂದರ್ಭಾನುಸಾರ, (3) ನೇ ಉಪ-ಪ್ರಕರಣದ ಉಪಬಂಧಗಳು ಅಂಥ ಸಂಸ್ಥೆಗೆ ಸಂಬಂಧಿಸಿ ಅನ್ವಯವಾಗತಕ್ಕುದಲ್ಲವೆಂದು ನಿರ್ದೇಶಿಸುವುದು ಅವಶ್ಯವೆಂದು ಮನದಟ್ಟಾದರೆ, ಅದು ಹಾಗೆ ಮಾಡಬಹುದು.

(10) 25ಸಿ ಪ್ರಕರಣದ ಉಪಬಂಧಗಳು (ಅದರ 2ನೇ ಪರಂತುಕವನ್ನು ಹೊರತುಪಡಿಸಿ) ಈ ಪ್ರಕರಣದಲ್ಲಿ ಉಲ್ಲೇಖಿಸಿದ ಹಂಗಾಮಿ ವಜಾದ ಪ್ರಕರಣಗಳಿಗೆ ಅನ್ವಯವಾಗತಕ್ಕುದು.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ, ಕೆಲಸಗಾರನನ್ನು, ನಿಯೋಜಕನು ಯಾವ ಸಂಸ್ಥೆಯಿಂದ ಹಂಗಾಮಿ ವಜಾ ಮಾಡಲಾಗಿದೆಯೋ ಅದೇ ಸಂಸ್ಥೆಯಲ್ಲಿ ಅಥವಾ ಅದೇ ನಿಯೋಜಕನಿಗೆ ಸೇರಿದ ಅದೇ ಪಟ್ಟಣ ಅಥವಾ ಗ್ರಾಮದಲ್ಲಿರುವ ಅಥವಾ ಕೆಲಸಗಾರನ ಪ್ರಕರಣದ ಸಂಗತಿಗಳು ಮತ್ತು ಪರಿಸ್ಥಿತಿಗಳನ್ನು ಗಮನಿಸಿ ಅವನು ಯಾವ ಸಂಸ್ಥೆಗೆ ಸೇರಿದವನೋ ಅಲ್ಲಿಂದ ವರ್ಗಾವಣೆಯಿಂದ ಅವನಿಗೆ ಅನುಚಿತ ತೊಂದರೆಯಾಗದಷ್ಟು ಅಂತರದಲ್ಲಿರುವ ಯಾವುದೇ ಇತರ ಸಂಸ್ಥೆಯಲ್ಲಿ (ನಿಯೋಜಕನ ಅಭಿಪ್ರಾಯದಲ್ಲಿ ಯಾವುದೇ ವಿಶೇಷ ಕೌಶಲ್ಯವು ಅಥವಾ ಪೂರ್ವಾನುಭವವು ಅಗತ್ಯವಿಲ್ಲದ ಮತ್ತು ಆ ಕೆಲಸಗಾರನು ಮಾಡಬಹುದಾದಂಥ) ಯಾವುದೇ ಬದಲಿ ನಿಯೋಜನೆಯನ್ನು ಕೊಡಮಾಡಿದರೆ ಹಂಗಾಮಿ ವಜಾ ಮಾಡಲಾಗಿದೆ ಎಂದು ಭಾವಿಸತಕ್ಕುದಲ್ಲ, ಪರಂತು, ಆ ಕೆಲಸಗಾರನಿಗೆ ಸಾಮಾನ್ಯವಾಗಿ ಸಂದಾಯ ಮಾಡಬಹುದಾಗಿದ್ದ ಮಜೂರಿಗಳನ್ನು ಬದಲಿ ನೇಮಕಾತಿಗೂ ಕೊಡ ಮಾಡಿರಬೇಕು.

**25ಎನ್. ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕುವುದಕ್ಕೆ ಮುಂಚಿನ ಷರತ್ತುಗಳು.-** (1) ಈ ಅಧ್ಯಾಯವು ಅನ್ವಯವಾಗುವಂಥ ಯಾವುದೇ ಕೈಗಾರಿಕಾ ಸಂಸ್ಥೆಯಲ್ಲಿ ಯಾವನೇ ನಿಯೋಜಕನ ಅಧೀನದಲ್ಲಿ ಒಂದು ವರ್ಷಕ್ಕೆ ಕಡಿಮೆಯಿಲ್ಲದಷ್ಟು ನಿರಂತರ ಸೇವೆಯನ್ನು ಸಲ್ಲಿಸಿದ ಯಾವನೇ ಕೆಲಸಗಾರನನ್ನು ಆ ನಿಯೋಜಕನು,-

(ಎ) ಆ ಕೆಲಸಗಾರನಿಗೆ, ಅವನನ್ನು ಕೆಲಸದಿಂದ ತೆಗೆದುಹಾಕುವ ಕಾರಣಗಳನ್ನು ಸೂಚಿಸುವ ಮೂರು ತಿಂಗಳ ಲಿಖಿತ ನೋಟೀಸನ್ನು ಕೊಟ್ಟಿದ್ದು, ಆ ನೋಟೀಸಿನ ಅವಧಿಯು ಮುಕ್ತಾಯವಾಗುವವರೆಗೆ ಅಥವಾ ಅಂಥ ನೋಟೀಸಿಗೆ ಬದಲಾಗಿ ಕೆಲಸಗಾರನಿಗೆ ನೋಟೀಸಿನ ಅವಧಿಯ ಮಜೂರಿಗಳನ್ನು ಸಂದಾಯ ಮಾಡುವವರೆಗೆ; ಮತ್ತು

(ಬಿ) ಸಮುಚಿತ ಸರ್ಕಾರದ ಅಥವಾ ಆ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರದ ಪೂರ್ವ ಅನುಮತಿಯನ್ನು (ಈ ಪ್ರಕರಣದಲ್ಲಿ ಇನ್ನು ಮುಂದೆ ನಿರ್ದಿಷ್ಟ ಪ್ರಾಧಿಕಾರವೆಂದು ಉಲ್ಲೇಖಿಸಲಾಗಿದೆ) ಈ ಬಗ್ಗೆ ಅರ್ಜಿ ಸಲ್ಲಿಸಿ ಪಡೆಯುವವರೆಗೆ

-ಕೆಲಸದಿಂದ ತೆಗೆದುಹಾಕತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಮೇರೆಗೆ ಅನುಮತಿಗಾಗಿ ಅರ್ಜಿಯನ್ನು ನಿಯೋಜಕನು ನಿಯಮಿಸಿದ ರೀತಿಯಲ್ಲಿ ಕೆಲಸದಿಂದ ತೆಗೆದುಹಾಕುವ ಉದ್ದೇಶದ ಕಾರಣಗಳನ್ನು ಸ್ಪಷ್ಟವಾಗಿ ನಿರೂಪಿಸಿ ಸಲ್ಲಿಸತಕ್ಕುದು ಮತ್ತು ಅಂಥ ಅರ್ಜಿಯ ಒಂದು ಪ್ರತಿಯನ್ನು ಅದೇ ಕಾಲಕ್ಕೆ ಸಂಬಂಧಪಟ್ಟ ಕೆಲಸಗಾರನಿಗೂ ನಿಯಮಿಸಿದ ರೀತಿಯಲ್ಲಿ ಜಾರಿ ಮಾಡತಕ್ಕುದು.

(3) (1)ನೇ ಉಪ-ಪ್ರಕರಣದ ಮೇರೆಗೆ ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಸಮುಚಿತ ಸರ್ಕಾರ ಅಥವಾ ನಿರ್ದಿಷ್ಟ ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ನಿಯೋಜಕನಿಗೆ, ಸಂಬಂಧಪಟ್ಟ ಕೆಲಸಗಾರರಿಗೆ ಮತ್ತು ಕೆಲಸದಿಂದ ತೆಗೆದುಹಾಕುವ ವಿಷಯದಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ

ತರುವಾಯ, ನಿಯೋಜಕನು ತಿಳಿಸಿರುವ ಕಾರಣಗಳ ನೈಜತೆ ಮತ್ತು ಪರ್ಯಾಪ್ತತೆಯನ್ನು, ಕೆಲಸಗಾರರ ಹಿತಾಸಕ್ತಿಗಳನ್ನು ಮತ್ತು ಇತರ ಎಲ್ಲ ಸುಸಂಗತ ಸಂಗತಿಗಳನ್ನು ಗಮನಿಸಿ ಆದೇಶದ ಮೂಲಕ ಮತ್ತು ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿ ಅಂಥ ಅನುಮತಿಯನ್ನು ನೀಡಬಹುದು ಅಥವಾ ನೀಡಲು ನಿರಾಕರಿಸಬಹುದು ಮತ್ತು ಅಂಥ ಆದೇಶದ ಒಂದು ಪ್ರತಿಯನ್ನು ನಿಯೋಜಕನಿಗೆ ಮತ್ತು ಕೆಲಸಗಾರರಿಗೆ ಕಳುಹಿಸತಕ್ಕದು.

(4) (1)ನೇ ಉಪ-ಪ್ರಕರಣದ ಮೇರೆಗೆ ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸಿರುವಲ್ಲಿ ಮತ್ತು ಸಮುಚಿತ ಸರ್ಕಾರ ಅಥವಾ ನಿರ್ದಿಷ್ಟ ಪ್ರಾಧಿಕಾರವು, ಅಂಥ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗೆ ಅನುಮತಿಯನ್ನು ನೀಡುವ ಅಥವಾ ನೀಡಲು ನಿರಾಕರಿಸುವ ಆದೇಶವನ್ನು ನಿಯೋಜಕನಿಗೆ ಕಳುಹಿಸದಿರುವಲ್ಲಿ, ಸದರಿ ಅರವತ್ತು ದಿನಗಳ ಅವಧಿಯು ಮುಗಿದ ತರುವಾಯ ಕೋರಲಾದ ಅನುಮತಿಯನ್ನು ನೀಡಲಾಗಿದೆ ಎಂದು ಭಾವಿಸತಕ್ಕದು.

(5) ಅನುಮತಿಯನ್ನು ನೀಡುವ ಅಥವಾ ನೀಡಲು ನಿರಾಕರಿಸುವ ಸಮುಚಿತ ಸರ್ಕಾರ ಅಥವಾ ನಿರ್ದಿಷ್ಟ ಪ್ರಾಧಿಕಾರದ ಆದೇಶವು, (6)ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅಂತಿಮವಾಗಿರತಕ್ಕದು ಮತ್ತು ಸಂಬಂಧಪಟ್ಟ ಎಲ್ಲಾ ಪಕ್ಷಕಾರರಿಗೆ ಬಂಧನಕಾರಿಯಾಗತಕ್ಕದು ಮತ್ತು ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದವರೆಗೆ ಅದು ಜಾರಿಯಲ್ಲಿರತಕ್ಕದು.

(6) ಸಮುಚಿತ ಸರ್ಕಾರವು ಅಥವಾ ನಿರ್ದಿಷ್ಟ ಪ್ರಾಧಿಕಾರವು ತಾನಾಗಿಯೇ ಆಗಲಿ ಅಥವಾ ನಿಯೋಜಕನು ಅಥವಾ ಯಾವನೇ ಕೆಲಸಗಾರನು ಸಲ್ಲಿಸಿದ ಅರ್ಜಿಯ ಮೇಲೆ (3)ನೇ ಉಪ-ಪ್ರಕರಣದ ಮೇರೆಗೆ ಅನುಮತಿ ನೀಡುವ ಅಥವಾ ನೀಡಲು ನಿರಾಕರಿಸುವ ಆದೇಶದ ಬಗ್ಗೆ ಪುನರವಲೋಕಿಸಬಹುದು ಅಥವಾ ಆ ವಿಷಯವನ್ನು ನ್ಯಾಯನಿರ್ಣಯಕ್ಕಾಗಿ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಬಹುದು ಅಥವಾ ಸಂದರ್ಭಾನುಸಾರ, ಉಲ್ಲೇಖಿಸುವಂತೆ ಮಾಡಬಹುದು:

ಪರಂತು, ಈ ಉಪ-ಪ್ರಕರಣದ ಮೇರೆಗೆ ನ್ಯಾಯಾಧಿಕರಣಕ್ಕೆ ಉಲ್ಲೇಖವನ್ನು ಮಾಡಿರುವಲ್ಲಿ, ಅದು ಅಂಥ ಉಲ್ಲೇಖದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಐತೀರ್ಪನ್ನು ನೀಡತಕ್ಕದು.

(7) (1)ನೇ ಉಪ-ಪ್ರಕರಣದ ಮೇರೆಗೆ ಅನುಮತಿಗಾಗಿ ಯಾವುದೇ ಅರ್ಜಿಯನ್ನು ಸಲ್ಲಿಸದೇ ಇರುವಲ್ಲಿ, ಅಥವಾ ಕೆಲಸದಿಂದ ತೆಗೆದುಹಾಕುವುದಕ್ಕೆ ಅನುಮತಿ ನೀಡಲು ನಿರಾಕರಿಸಿರುವಲ್ಲಿ, ಹಾಗೆ ಕೆಲಸದಿಂದ ತೆಗೆದುಹಾಕುವುದನ್ನು ಕೆಲಸಗಾರನಿಗೆ ಕೆಲಸದಿಂದ ತೆಗೆದುಹಾಕುವ ನೋಟೀಸನ್ನು ನೀಡಿದ ದಿನಾಂಕದಿಂದ ಕಾನೂನುಬಾಹಿರವೆಂದು ಭಾವಿಸತಕ್ಕದು ಮತ್ತು ಕೆಲಸಗಾರನು ಅವನಿಗೆ ಯಾವುದೇ ನೋಟೀಸನ್ನು ಕೊಡದಿದ್ದರೆ ಹೇಗೋ ಹಾಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಎಲ್ಲಾ ಪ್ರಯೋಜನಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದು.

(8) ಈ ಪ್ರಕರಣದ ಪೂರ್ವೋಕ್ತ ಉಪಬಂಧಗಳಲ್ಲಿ ಏನೇ ಇದ್ದರೂ, ಸಮುಚಿತ ಸರ್ಕಾರಕ್ಕೆ ಕಾರ್ಯಸಂಸ್ಥೆಯಲ್ಲಿ ಸಂಭವಿಸಿದ ಅಪಘಾತ ಅಥವಾ ನಿಯೋಜಕನ ಮರಣ ಅಥವಾ ಅಂತಹುದೇ ಅಸಾಧಾರಣ ಸಂದರ್ಭಗಳಿಂದಾಗಿ ಆದೇಶದ ಮೂಲಕ, ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಅಂಥ ಸಂಸ್ಥೆಗೆ ಸಂಬಂಧಿಸಿದಂತೆ (1)ನೇ ಉಪ-ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದಲ್ಲವೆಂದು ನಿರ್ದೇಶಿಸುವುದು ಅವಶ್ಯವೆಂದು ಮನದಟ್ಟಾದರೆ, ಅದು ಹಾಗೆ ಮಾಡಬಹುದು.

(9) (3)ನೇ ಉಪ-ಪ್ರಕರಣದ ಮೇರೆಗೆ ಕೆಲಸದಿಂದ ತೆಗೆದುಹಾಕುವುದಕ್ಕೆ ಅನುಮತಿ ನೀಡಿರುವಲ್ಲಿ ಅಥವಾ (4)ನೇ ಉಪ-ಪ್ರಕರಣದ ಮೇರೆಗೆ ಕೆಲಸದಿಂದ ತೆಗೆದು ಹಾಕುವುದಕ್ಕೆ ಅನುಮತಿ ನೀಡಲಾಗಿದೆ ಎಂದು ಭಾವಿಸಿರುವಲ್ಲಿ, ಈ ಪ್ರಕರಣದ ಮೇರೆಗೆ ಅನುಮತಿಗಾಗಿ ಸಲ್ಲಿಸಿದ ಅರ್ಜಿಯ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಆ ಸಂಸ್ಥೆಯಲ್ಲಿ ನಿಯೋಜಿತನಾದ ಪ್ರತಿಯೊಬ್ಬ ಕೆಲಸಗಾರನು, ಕೆಲಸದಿಂದ ತೆಗೆದುಹಾಕುವ ಸಮಯದಲ್ಲಿ ನಿರಂತರ ಸೇವೆಯು ಪೂರ್ಣಗೊಂಡ ಪ್ರತಿಯೊಂದು ವರ್ಷಕ್ಕೆ ಅಥವಾ ಆರು ತಿಂಗಳುಗಳನ್ನು

ಮೀರಿದ ಅದರ ಯಾವುದೇ ಭಾಗಕ್ಕೆ ಹದಿನೈದು ದಿನಗಳ ಸರಾಸರಿ ವೇತನಕ್ಕೆ ಸಮನಾದ ಪರಿಹಾರವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕುದು.

**25ಓ. ಉದ್ಯಮವನ್ನು ಮುಚ್ಚುವ ಬಗ್ಗೆ ಪ್ರಕ್ರಿಯೆ.**- (1) ಈ ಅಧ್ಯಾಯವು ಅನ್ವಯವಾಗುವ ಕೈಗಾರಿಕಾ ಸಂಸ್ಥೆಯ ಉದ್ಯಮವನ್ನು ಮುಚ್ಚಲು ಉದ್ದೇಶಿಸಿದ ನಿಯೋಜಕನು, ಪೂರ್ವಾನುಮತಿಗಾಗಿ ಉದ್ದೇಶಿತ ಮುಚ್ಚುವಿಕೆಯು ಜಾರಿಗೆ ಬರುವ ದಿನಾಂಕಕ್ಕೆ ಕನಿಷ್ಟ ತೊಂಬತ್ತು ದಿನಗಳಿಗೆ ಮುಂಚಿತವಾಗಿ, ನಿಯಮಿಸಿದ ರೀತಿಯಲ್ಲಿ ಉದ್ಯಮವನ್ನು ಮುಚ್ಚಲು ಉದ್ದೇಶಿಸಿರುವ ಬಗ್ಗೆ ಕಾರಣಗಳನ್ನು ಸ್ಪಷ್ಟವಾಗಿ ತಿಳಿಸುತ್ತಾ ಸಮುಚಿತ ಸರ್ಕಾರಕ್ಕೆ ಅರ್ಜಿ ಸಲ್ಲಿಸತಕ್ಕುದು ಮತ್ತು ಅಂಥ ಅರ್ಜಿಯ ಒಂದು ಪ್ರತಿಯನ್ನು ಅದೇ ಸಮಯಕ್ಕೆ ನಿಯಮಿಸಿದ ರೀತಿಯಲ್ಲಿ ಕೆಲಸಗಾರರ ಪ್ರತಿನಿಧಿಗಳಿಗೂ ಜಾರಿಮಾಡತಕ್ಕುದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಕಟ್ಟಡಗಳು, ಸೇತುವೆಗಳು, ರಸ್ತೆಗಳು, ಕಾಲುವೆಗಳು, ಅಣೆಕಟ್ಟುಗಳು ಇವುಗಳ ನಿರ್ಮಾಣ ಅಥವಾ ಇತರ ನಿರ್ಮಾಣ ಕಾಮಗಾರಿಗಾಗಿ ಸ್ಥಾಪಿಸಲಾದ ಉದ್ಯಮಕ್ಕೆ ಅನ್ವಯವಾಗತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಮೇರೆಗೆ ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಸಮುಚಿತ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಮತ್ತು ನಿಯೋಜಕನಿಗೆ, ಕೆಲಸಗಾರರಿಗೆ ಮತ್ತು ಅಂಥ ಮುಚ್ಚುವಿಕೆಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ನಿಯೋಜಕನು ತಿಳಿಸಿದ ಕಾರಣಗಳ ನೈಜತೆ ಮತ್ತು ಪರ್ಯಾಪ್ತತೆ, ಸಾರ್ವಜನಿಕ ಹಿತಾಸಕ್ತಿ ಮತ್ತು ಸಂಬಂಧಪಟ್ಟ ಇತರ ಎಲ್ಲಾ ಸಂಗತಿಗಳನ್ನು ಗಮನಿಸಿ, ಆದೇಶದ ಮೂಲಕ, ಕಾರಣಗಳನ್ನು ಲಿಖಿತದಲ್ಲಿ ದಾಖಲುಮಾಡಿ ಅಂಥ ಅನುಮತಿಯನ್ನು ನೀಡಬಹುದು ಅಥವಾ ನೀಡಲು ನಿರಾಕರಿಸಬಹುದು ಮತ್ತು ಅಂಥ ಆದೇಶದ ಒಂದು ಪ್ರತಿಯನ್ನು ನಿಯೋಜಕನಿಗೆ ಮತ್ತು ಕೆಲಸಗಾರನಿಗೆ ಕಳುಹಿಸತಕ್ಕುದು.

(3) (1)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿರುವಲ್ಲಿ ಮತ್ತು ಸಮುಚಿತ ಸರ್ಕಾರವು ನಿಯೋಜಕನಿಗೆ, ಅಂಥ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗೆ ಅನುಮತಿಯನ್ನು ನೀಡುವ ಅಥವಾ ನೀಡಲು ನಿರಾಕರಿಸುವ ಆದೇಶವನ್ನು ತಿಳಿಸದಿದ್ದಲ್ಲಿ, ಅರವತ್ತು ದಿನಗಳ ಅಂಥ ಅವಧಿಯು ಮುಗಿದ ತರುವಾಯ ಕೋರಲಾದ ಅನುಮತಿಯನ್ನು ನೀಡಲಾಗಿದೆ ಎಂದು ಭಾವಿಸತಕ್ಕುದು.

(4) ಅನುಮತಿಯನ್ನು ನೀಡುವ ಅಥವಾ ನೀಡಲು ನಿರಾಕರಿಸುವ ಸಮುಚಿತ ಸರ್ಕಾರದ ಆದೇಶವು, (5)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು ಅಂತಿಮವಾಗಿರತಕ್ಕುದು ಮತ್ತು ಎಲ್ಲಾ ಪಕ್ಷಕಾರರಿಗೆ ಬಂಧನಕಾರಿಯಾಗತಕ್ಕುದು ಮತ್ತು ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದವರೆಗೆ ಜಾರಿಯಲ್ಲಿರತಕ್ಕುದು.

(5) ಸಮುಚಿತ ಸರ್ಕಾರವು, ತಾನಾಗಿಯೇ ಅಥವಾ ನಿಯೋಜಕನು ಅಥವಾ ಯಾವನೇ ಕೆಲಸಗಾರನು ಸಲ್ಲಿಸಿದ ಅರ್ಜಿಯ ಮೇಲೆ, (2)ನೇ ಉಪ-ಪ್ರಕರಣದ ಮೇರೆಗೆ ಅನುಮತಿ ನೀಡುವ ಅಥವಾ ನಿರಾಕರಿಸುವ ತನ್ನ ಆದೇಶವನ್ನು ಪುನರವಲೋಕಿಸಬಹುದು ಅಥವಾ ನ್ಯಾಯ ನಿರ್ಣಯಕ್ಕಾಗಿ ಆ ವಿಷಯವನ್ನು ನ್ಯಾಯಾಧಿಕರಣಕ್ಕೆ ಉಲ್ಲೇಖಿಸಬಹುದು:

ಪರಂತು, ಈ ಉಪ-ಪ್ರಕರಣದ ಮೇರೆಗೆ ನ್ಯಾಯಾಧಿಕರಣಕ್ಕೆ ಉಲ್ಲೇಖವನ್ನು ಮಾಡಿರುವಲ್ಲಿ, ಅದು ಅಂಥ ಉಲ್ಲೇಖದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಐತೀರ್ಪನ್ನು ನೀಡತಕ್ಕುದು.

(6) (1)ನೇ ಉಪ-ಪ್ರಕರಣದ ಮೇರೆಗೆ ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸದಿದ್ದಲ್ಲಿ ಅಥವಾ ಮುಚ್ಚುವಿಕೆಗೆ ಕೋರಿದ ಅನುಮತಿಯನ್ನು ನಿರಾಕರಿಸಿರುವಲ್ಲಿ, ಆ ಉದ್ಯಮದ ಮುಚ್ಚುವಿಕೆಯನ್ನು, ಮುಚ್ಚುವಿಕೆಯ ದಿನಾಂಕದಿಂದ ಕಾನೂನು ಬಾಹಿರವೆಂದು ಭಾವಿಸತಕ್ಕುದು

ಮತ್ತು ಆ ಕೆಲಸಗಾರರು, ಆ ಉದ್ಯಮವನ್ನು ಮುಚ್ಚಿರದಿದ್ದರೆ ಹೇಗೋ ಹಾಗೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗಿನ ಎಲ್ಲ ಪ್ರಯೋಜನಗಳಿಗೆ ಹಕ್ಕುಳ್ಳವರಾಗಿರತಕ್ಕದು.

(7) ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದರೂ, ಸಮುಚಿತ ಸರ್ಕಾರಕ್ಕೆ, ಆ ಉದ್ಯಮದಲ್ಲಿ ಸಂಭವಿಸಿದ ಅಪಘಾತ ಅಥವಾ ನಿಯೋಜಕನ ಮರಣ ಅಥವಾ ಅಂಥಹುದೇ ಅಸಾಧಾರಣ ಸಂದರ್ಭಗಳಿಂದಾಗಿ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಅಂಥ ಉದ್ಯಮಕ್ಕೆ ಸಂಬಂಧಪಟ್ಟಂತೆ (1)ನೇ ಉಪ-ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದಲ್ಲವೆಂದು ನಿರ್ದೇಶಿಸುವುದು ಅವಶ್ಯವೆಂದು ಮನದಟ್ಟಾದರೆ, ಅದು ಹಾಗೆ ಮಾಡಬಹುದು.

(8) (2)ನೇ ಉಪ-ಪ್ರಕರಣದ ಮೇರೆಗೆ ಉದ್ಯಮವನ್ನು ಮುಚ್ಚಲು ಅನುಮತಿ ನೀಡಿರುವಲ್ಲಿ ಅಥವಾ (3)ನೇ ಉಪ-ಪ್ರಕರಣದ ಮೇರೆಗೆ ಮುಚ್ಚುವಿಕೆಗೆ ಅನುಮತಿ ನೀಡಿರುವುದಾಗಿ ಭಾವಿಸಿರುವಲ್ಲಿ ಈ ಪ್ರಕರಣದ ಮೇರೆಗೆ ಅನುಮತಿಗಾಗಿ ಸಲ್ಲಿಸಿದ ಅರ್ಜಿಯನ್ನು ಸಲ್ಲಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಆ ಉದ್ಯಮದಲ್ಲಿ ನಿಯೋಜಿತನಾದ ಪ್ರತಿಯೊಬ್ಬ ಕೆಲಸಗಾರನು, ಪೂರ್ಣಗೊಂಡ ನಿರಂತರ ಸೇವೆಯ ಪ್ರತಿಯೊಂದು ವರ್ಷಕ್ಕೆ ಅಥವಾ ಆರು ತಿಂಗಳು ಮೀರದ ಅದರ ಯಾವುದೇ ಭಾಗಕ್ಕೆ ಹದಿನೈದು ದಿನಗಳ ಸರಾಸರಿ ವೇತನಕ್ಕೆ ಸಮನಾದ ಪರಿಹಾರವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದು.

**25ಪಿ. ಕೈಗಾರಿಕಾ ವಿವಾದಗಳ (ತಿದ್ದುಪಡಿ) ಅಧಿನಿಯಮ, 1976 ಇದರ ಪ್ರಾರಂಭಕ್ಕೆ ಮುಂಚೆ ಮುಚ್ಚಿದ ಉದ್ಯಮಗಳನ್ನು ಪುನರ್-ಪ್ರಾರಂಭಿಸಲು ವಿಶೇಷ ಉಪಬಂಧ.**- ಸಮುಚಿತ ಸರ್ಕಾರವು, ಈ ಅಧ್ಯಾಯವು ಅನ್ವಯವಾಗುವ ಮತ್ತು ಕೈಗಾರಿಕಾ ವಿವಾದಗಳ (ತಿದ್ದುಪಡಿ) ಅಧಿನಿಯಮ, 1976ರ ಪ್ರಾರಂಭಕ್ಕೆ ಮುಂಚೆ ಮುಚ್ಚಿದ ಕೈಗಾರಿಕಾ ಸಂಸ್ಥೆಯ ಯಾವುದೇ ಉದ್ಯಮಕ್ಕೆ ಸಂಬಂಧಿಸಿ,-

(ಎ) ಅಂಥ ಉದ್ಯಮವನ್ನು ನಿಯೋಜಕನ ನಿಯಂತ್ರಣಕ್ಕೆ ಮೀರಿದ ಅನಿವಾರ್ಯ ಪರಿಸ್ಥಿತಿಗಳಿಂದ ಅಲ್ಲದೆ ಅನ್ಯಥಾ ಮುಚ್ಚಲಾಗಿದೆ ಎಂದು;

(ಬಿ) ಆ ಉದ್ಯಮವನ್ನು ಪುನರ್ ಪ್ರಾರಂಭಿಸುವ ಸಾಧ್ಯತೆಗಳಿವೆಯೆಂದು;

(ಸಿ) ಅಂಥ ಉದ್ಯಮವನ್ನು ಮುಚ್ಚುವುದಕ್ಕೆ ಮುಂಚೆ ಅದರಲ್ಲಿ ನಿಯೋಜಿತರಾಗಿದ್ದ ಕೆಲಸಗಾರರ ಪುನರ್ ವಸತಿಗಾಗಿ ಅಥವಾ ಸಮುದಾಯದ ಜೀವನಕ್ಕೆ ಅಗತ್ಯವಾದ ಸರಬರಾಜು ಮತ್ತು ಸೇವೆಗಳ ನಿರ್ವಹಣೆಗೆ ಅಥವಾ ಅವೆರಡೂ ಕಾರಣಗಳಿಗಾಗಿ ಆ ಉದ್ಯಮವನ್ನು ಪ್ರಾರಂಭಿಸುವುದು ಅಗತ್ಯವೆಂದು; ಮತ್ತು

(ಡಿ) ಆ ಉದ್ಯಮದ ಪುನರ್ ಪ್ರಾರಂಭವು, ಆ ಉದ್ಯಮಕ್ಕೆ ಸಂಬಂಧಪಟ್ಟ ನಿಯೋಜಕನಿಗೆ ಕಷ್ಟದಾಯಕವಾಗಿ ಪರಿಣಮಿಸುವುದಿಲ್ಲವೆಂದು,

- ಅಭಿಪ್ರಾಯಪಟ್ಟರೆ, ಅದು ಅಂಥ ನಿಯೋಜಕ ಮತ್ತು ಕೆಲಸಗಾರರಿಗೆ ಅವಕಾಶವನ್ನು ಕೊಟ್ಟ ತರುವಾಯ, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ (ಆ ಆದೇಶದ ದಿನಾಂಕದಿಂದ ಒಂದು ತಿಂಗಳಿಗೆ ಕಡಿಮೆಯಿಲ್ಲದ) ಸಮಯದೊಳಗೆ ಆ ಉದ್ಯಮವನ್ನು ಪುನಃ ಪ್ರಾರಂಭಿಸಲು ನಿರ್ದೇಶಿಸಬಹುದು.

**25ಕ್ಯೂ. ಪೂರ್ವಾನುಮತಿಯಿಲ್ಲದೆ ಹಂಗಾಮಿ ವಜಾ ಮತ್ತು ಕೆಲಸದಿಂದ ತೆಗೆದು ಹಾಕುವುದಕ್ಕೆ ದಂಡ.**-25ಎಂ ಪ್ರಕರಣದ ಅಥವಾ 25ಎನ್ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ನಿಯೋಜಕನು, ಒಂದು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

**25ಆರ್. ಮುಚ್ಚುವಿಕೆಗೆ ದಂಡ.**- (1) 25ಒ ಪ್ರಕರಣದ (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಪಾಲಿಸದೆಯೇ ಉದ್ಯಮವನ್ನು ಮುಚ್ಚುವ ಯಾವನೇ ನಿಯೋಜಕನು, ಆರು ತಿಂಗಳವರೆಗಿನ

ಕಾರಾವಾಸದಿಂದ, ಅಥವಾ ಐದುಸಾವಿರ ರೂಪಾಯಿಯವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) 25ಒ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಉದ್ಯಮವನ್ನು ಮುಚ್ಚಲು ಅನುಮತಿ ನೀಡಲು ನಿರಾಕರಿಸಿದ ಆದೇಶವನ್ನು ಅಥವಾ 25ಪಿ ಪ್ರಕರಣದ ಮೇರೆಗೆ ನೀಡಲಾದ ನಿರ್ದೇಶನವನ್ನು ಉಲ್ಲಂಘಿಸುವ ಯಾವನೇ ನಿಯೋಜಕನು ಒಂದು ವರ್ಷದವರೆಗಿನ ಅವಧಿಯ ಕಾರಾವಾಸದಿಂದ, ಅಥವಾ ಐದು ಸಾವಿರ ರೂಪಾಯಿಯವರೆಗಿನ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ಮತ್ತು ಆ ಉಲ್ಲಂಘನೆಯು ಮುಂದುವರಿಯುವ, ಉಲ್ಲಂಘನೆಯಾಗಿರುವಲ್ಲಿ, ಅಪರಾಧ ನಿರ್ಣಯವಾದ ತರುವಾಯ ಆ ಉಲ್ಲಂಘನೆಯು ಮುಂದುವರಿಯುವ ಪ್ರತಿಯೊಂದು ದಿವಸಕ್ಕೆ ಎರಡು ಸಾವಿರ ರೂಪಾಯಿಯವರೆಗಿನ ಇನ್ನಷ್ಟು ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**25ಎಸ್. ಈ ಅಧ್ಯಾಯವು ಅನ್ವಯವಾಗುವ ಕೈಗಾರಿಕಾ ಸಂಸ್ಥೆಗೆ V ಎ ಅಧ್ಯಾಯದ ಕೆಲವು ಉಪಬಂಧಗಳು ಅನ್ವಯವಾಗುವುದು.–** V ಎ ಅಧ್ಯಾಯದ 25ಬಿ, 25ಡಿ, 25ಎಫ್‌ಎಫ್, 25ಜಿ, 25ಎಚ್ ಮತ್ತು 25ಜೆ ಪ್ರಕರಣಗಳ ಉಪಬಂಧಗಳು ಈ ಅಧ್ಯಾಯದ ಉಪಬಂಧಗಳು ಅನ್ವಯವಾಗುವ ಹಾಗೆಯೇ ಕೈಗಾರಿಕಾ ಸಂಸ್ಥೆಗೆ ಸಂಬಂಧಪಟ್ಟಂತೆ ಸಹ ಅನ್ವಯವಾಗತಕ್ಕುದು.

## ಅಧ್ಯಾಯ - V ಸಿ

## ಅನುಚಿತ ಕಾರ್ಮಿಕ ಆಚರಣೆಗಳು

**25ಟಿ. ಅನುಚಿತ ಕಾರ್ಮಿಕ ಆಚರಣೆ ನಿಷೇಧ.–** ಯಾವನೇ ನಿಯೋಜಕನು ಅಥವಾ ಕೆಲಸಗಾರರು ಅಥವಾ ಕಾರ್ಮಿಕ ಸಂಘ ಅಧಿನಿಯಮ, 1926ರ ಮೇರೆಗೆ ನೋಂದಣಿಯಾಗಿರುವ ಅಥವಾ ಆಗಿಲ್ಲದ ಕಾರ್ಮಿಕ ಸಂಘವು ಯಾವುದೇ ಅನುಚಿತ ಕಾರ್ಮಿಕ ಆಚರಣೆಯನ್ನು ಆಚರಿಸತಕ್ಕುದಲ್ಲ.

**25ಯು. ಅನುಚಿತ ಕಾರ್ಮಿಕ ಆಚರಣೆಗಳನ್ನು ಆಚರಿಸುವುದಕ್ಕಾಗಿ ದಂಡ.–** ಅನುಚಿತ ಕಾರ್ಮಿಕ ಆಚರಣೆಯನ್ನು ಆಚರಿಸುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಯವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

## ಅಧ್ಯಾಯ -VI

## ದಂಡಗಳು

**26. ಕಾನೂನುಬಾಹಿರ ಮುಷ್ಕರಗಳು ಮತ್ತು ಬೀಗ ಮುದ್ರೆಗಳಿಗೆ ದಂಡ.–** (1) ಈ ಅಧಿನಿಯಮದ ಮೇರೆಗೆ ಕಾನೂನುಬಾಹಿರವಾದ ಮುಷ್ಕರವನ್ನು ಪ್ರಾರಂಭಿಸುವ, ಮುಂದುವರೆಸುವ ಅಥವಾ ಅದನ್ನು ಮುಂದುವರಿಸಲು ಅನ್ಯಥಾ ವರ್ತಿಸುವ ಯಾವನೇ ಕೆಲಸಗಾರನು, ಒಂದು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಐವತ್ತು ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) ಈ ಅಧಿನಿಯಮದ ಮೇರೆಗೆ ಕಾನೂನುಬಾಹಿರವಾದ ಬೀಗಮುದ್ರೆಯನ್ನು ಪ್ರಾರಂಭಿಸುವ, ಮುಂದುವರೆಸುವ, ಅಥವಾ ಅದನ್ನು ಮುಂದುವರಿಸಲು ಅನ್ಯಥಾ ವರ್ತಿಸುವ ಯಾವನೇ ನಿಯೋಜಕನು, ಒಂದು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಯವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**27. ಪ್ರಚೋದನೆ ಇತ್ಯಾದಿಗಾಗಿ ದಂಡ.–** ಈ ಅಧಿನಿಯಮದ ಮೇರೆಗೆ ಕಾನೂನುಬಾಹಿರವಾದ ಮುಷ್ಕರ ಅಥವಾ ಬೀಗಮುದ್ರೆಗೆ ಪ್ರಚೋದನೆ ಮಾಡುವ ಅಥವಾ ಇತರರು ಅದರಲ್ಲಿ ಭಾಗವಹಿಸುವಂತೆ

ಅಥವಾ ಅದನ್ನು ಮುಂದುವರಿಸಲು ವರ್ತಿಸುವಂತೆ ಪ್ರೇರೇಪಿಸುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ, ಅಥವಾ ಒಂದು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**28. ಕಾನೂನುಬಾಹಿರ ಮುಷ್ಕರಗಳು ಮತ್ತು ಬೀಗಮುದ್ರೆಗಳಿಗೆ ಹಣಕಾಸು ನೆರವು ನೀಡುವುದಕ್ಕಾಗಿ ದಂಡ.**– ಯಾವುದೇ ಕಾನೂನು ಬಾಹಿರ ಮುಷ್ಕರ ಅಥವಾ ಬೀಗಮುದ್ರೆಯ ನೇರ ಮುಂದುವರಿಕೆಗೆ ಅಥವಾ ಅದನ್ನು ಬೆಂಬಲಿಸಿ ತಿಳಿದೂ ತಿಳಿದೂ ಯಾವುದೇ ಹಣ ಖರ್ಚು ಮಾಡುವ ಅಥವಾ ವಿನಿಯೋಗಿಸುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಯವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**29. ಇತ್ಯರ್ಥ ಅಥವಾ ಐತೀರ್ಪಿನ ಉಲ್ಲಂಘನೆಗಾಗಿ ದಂಡ.**– ಯಾವನೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಅವನಿಗೆ ಬಂಧನಕಾರಿಯಾದ ಯಾವುದೇ ಇತ್ಯರ್ಥ ಅಥವಾ ಐತೀರ್ಪಿನ ಯಾವುದೇ ನಿಬಂಧನೆಯನ್ನು ಉಲ್ಲಂಘಿಸಿರುವಲ್ಲಿ, ಆರು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಉಲ್ಲಂಘನೆಯು ಮುಂದುವರಿಯುತ್ತಿರುವ ಉಲ್ಲಂಘನೆಯಾಗಿರುವಲ್ಲಿ, ಮೊದಲನೇ ಅಪರಾಧ ನಿರ್ಣಯವಾದ ತರುವಾಯ ಅಂಥ ಉಲ್ಲಂಘನೆಯು ಮುಂದುವರಿಯುವ ಪ್ರತಿಯೊಂದು ದಿವಸಕ್ಕೆ ಇನ್ನೂರು ರೂಪಾಯಿಯವರೆಗಿನ ಇನ್ನಷ್ಟು ಜುಲ್ಮಾನೆಯಿಂದ ದಂಡನೀಯನಾಗತಕ್ಕುದು ಮತ್ತು ನ್ಯಾಯಾಲಯವು ಅಪರಾಧ ವಿಚಾರಣೆ ನಡೆಸಿ ಅಪರಾಧಿಗೆ ಜುಲ್ಮಾನೆ ವಿಧಿಸಿದರೆ, ಅವನಿಂದ ಪ್ರಾಪ್ತವಾದ ಇಡೀ ಜುಲ್ಮಾನೆಯನ್ನು ಅಥವಾ ಅದರ ಯಾವುದೇ ಭಾಗವನ್ನು, ಅದರ ಅಭಿಪ್ರಾಯದಲ್ಲಿ ಉಲ್ಲಂಘನೆಯಿಂದ ಯಾವ ವ್ಯಕ್ತಿಗೆ ಹಾನಿಯುಂಟಾಗಿದೆಯೋ ಅವನಿಗೆ ಪರಿಹಾರದ ರೂಪದಲ್ಲಿ ಸಂದಾಯ ಮಾಡತಕ್ಕುದೆಂದು ನಿರ್ದೇಶಿಸಬಹುದು.

**30. ರಹಸ್ಯ ಮಾಹಿತಿಯನ್ನು ಬಹಿರಂಗಪಡಿಸುವುದಕ್ಕೆ ದಂಡ.**– 21ನೇ ಪ್ರಕರಣದಲ್ಲಿ ಉಲ್ಲೇಖಿಸಿದಂಥ ಯಾವುದೇ ಮಾಹಿತಿಯನ್ನು, ಆ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಉದ್ದೇಶಪೂರ್ವಕವಾಗಿ ಬಹಿರಂಗಪಡಿಸುವ ಯಾವನೇ ವ್ಯಕ್ತಿಯು, ಬಾಧಿತವಾದ ಕಾರ್ಮಿಕಸಂಘ ಅಥವಾ ಪ್ರತ್ಯೇಕ ವ್ಯವಹಾರದವರು ಅಥವಾ ಅದರ ಪರವಾಗಿ ಮಾಡಿದ ಸಲ್ಲಿಸಿದ ದೂರಿನ ಮೇಲೆ, ಆರು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಯವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**30ಎ. ನೋಟೀಸು ಕೊಡದೆ ಮುಚ್ಚುವುದಕ್ಕಾಗಿ ದಂಡ.**– 25ಎಫ್ಎಫ್ಎ ಪ್ರಕರಣದ ಉಪಬಂಧಗಳನ್ನು ಪಾಲಿಸದೆ ಯಾವುದೇ ಉದ್ಯಮವನ್ನು ಮುಚ್ಚಿಬಿಡುವ ಯಾವನೇ ನಿಯೋಜಕನು, ಆರು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**31. ಇತರ ಅಪರಾಧಗಳಿಗಾಗಿ ದಂಡ.**– (1) 33ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ನಿಯೋಜಕನು, ಆರು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಯವರೆಗಿನ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಉಪಬಂಧಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸುವ ಯಾರೇ ಆಗಲಿ, ಅಂಥ ಉಲ್ಲಂಘನೆಗೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅನ್ಯತ್ರ ಇತರ ದಂಡವನ್ನು ಉಪಬಂಧಿಸಿರದಿದ್ದರೆ, ಒಂದು ನೂರು ರೂಪಾಯಿಯವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

## ಅಧ್ಯಾಯ –VII

### ಸಂಕೀರ್ಣ

**32. ಕಂಪನಿಗಳು ಇತ್ಯಾದಿಗಳಿಂದ ಅಪರಾಧ.**– ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡುವ ವ್ಯಕ್ತಿಯು, ಒಂದು ಕಂಪನಿ ಅಥವಾ ಇತರ ನಿಗಮಿತ ನಿಕಾಯ ಅಥವಾ ವ್ಯಕ್ತಿಗಳ (ನಿಗಮಿತವಾದ ಅಥವಾ ನಿಗಮಿತವಾಗಿಲ್ಲದ) ಸಂಘವಾಗಿರುವಲ್ಲಿ, ಅದರ ವ್ಯವಸ್ಥಾಪನೆಗೆ ಸಂಬಂಧಪಟ್ಟ ಪ್ರತಿಯೊಬ್ಬ ನಿರ್ದೇಶಕ, ವ್ಯವಸ್ಥಾಪಕ ಕಾರ್ಯದರ್ಶಿ, ಏಜೆಂಟ್ ಅಥವಾ ಇತರ ಅಧಿಕಾರಿ ಅಥವಾ ವ್ಯಕ್ತಿಯು, ಆ ಅಪರಾಧವನ್ನು ತನ್ನ ತಿಳಿವಳಿಕೆಗೆ ಬಾರದೆ ಅಥವಾ ತನ್ನ ಸಮ್ಮತಿ ಇಲ್ಲದೆಯೇ ಮಾಡಲಾಗಿತ್ತೆಂದು ರುಜುವಾತುಪಡಿಸಿದ ಹೊರತು, ಅವನನ್ನು ಅಂಥ ಅಪರಾಧದ ಬಗ್ಗೆ ದೋಷಿ ಎಂದು ಭಾವಿಸತಕ್ಕುದು.

**33. ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಕೆಲವು ಸಂದರ್ಭಗಳಲ್ಲಿ ಸೇವಾ ಷರತ್ತುಗಳು ಇತ್ಯಾದಿ ಬದಲಾಗದೆ ಉಳಿಯುವುದು.**– (1) ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದ ಯಾವುದೇ ಸಂಧಾನ ವ್ಯವಹರಣೆಯು ಸಂಧಾನ ಅಧಿಕಾರಿಯ ಅಥವಾ ಮಂಡಲಿಯ ಮುಂದೆ ಅಥವಾ ಯಾವುದೇ ವ್ಯವಹರಣೆಯು ಮಧ್ಯಸ್ಥಗಾರನ ಅಥವಾ ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದೆ ಇತ್ಯರ್ಥದಲ್ಲಿರುವ ಅವಧಿಯಲ್ಲಿ ಯಾವನೇ ನಿಯೋಜಕನು, ಆ ವ್ಯವಹರಣೆಯು ಯಾವ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿದೆಯೋ ಆ ಪ್ರಾಧಿಕಾರದ ವ್ಯಕ್ತ ಲಿಖಿತ ಅನುಮತಿಯನ್ನು ಪಡೆದಲ್ಲದೆ,–

(ಎ) ವಿವಾದಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಸಂಬಂಧದಲ್ಲಿ, ಅಂಥ ವಿವಾದಕ್ಕೆ ಸಂಬಂಧಪಟ್ಟ ಕೆಲಸಗಾರನಿಗೆ ಪ್ರತಿಕೂಲವಾಗುವಂತೆ ಅಂಥ ವ್ಯವಹರಣೆಯು ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ ಅವರಿಗೆ ಅನ್ವಯವಾಗುತ್ತಿದ್ದ ಸೇವಾ ಷರತ್ತುಗಳನ್ನು ಬದಲಾಯಿಸತಕ್ಕುದಲ್ಲ; ಅಥವಾ

(ಬಿ) ವಿವಾದಕ್ಕೆ ಸಂಬಂಧಿಸಿದ ಯಾವುದೇ ದುರ್ನಡತೆಗಾಗಿ, ಅಂಥ ವಿವಾದಕ್ಕೆ ಸಂಬಂಧಿಸಿದ ಯಾವನೇ ಕೆಲಸಗಾರನನ್ನು ವಜಾಮಾಡುವ ಮೂಲಕ ಅಥವಾ ಅನ್ಯಥಾ ಕೆಲಸದಿಂದ ಬಿಡುಗಡೆ ಮಾಡತಕ್ಕುದಲ್ಲ ಅಥವಾ ದಂಡಿಸತಕ್ಕುದಲ್ಲ.

(2) ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದ ಯಾವುದೇ ಅಂಥ ವ್ಯವಹರಣೆಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ, ನಿಯೋಜಕನು, ಅಂಥ ವಿವಾದಕ್ಕೆ ಸಂಬಂಧಿಸಿದ ಕೆಲಸಗಾರನಿಗೆ ಅನ್ವಯವಾಗುವ ಸ್ಥಾಯಿ ಆದೇಶಗಳಿಗೆ ಅನುಸಾರವಾಗಿ ಅಥವಾ ಅಂಥ ಸ್ಥಾಯಿ ಆದೇಶಗಳು ಇಲ್ಲದಿರುವಲ್ಲಿ, ಅವನ ಮತ್ತು ಆ ಕೆಲಸಗಾರನ ನಡುವಣ ವ್ಯಕ್ತ ಅಥವಾ ಇಂಗಿತ ಕರಾರಿನ ನಿಬಂಧನೆಗಳಿಗನುಸಾರವಾಗಿ–

(ಎ) ವಿವಾದಕ್ಕೆ ಸಂಬಂಧಿಸಿಲ್ಲದ ಯಾವುದೇ ವಿಷಯಕ್ಕೆ ಸಂಬಂಧಿಸಿ, ಅಂಥ ವ್ಯವಹರಣೆಯು ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ ಆ ಕೆಲಸಗಾರನಿಗೆ ಅನ್ವಯವಾಗುವ ಸೇವಾ ಷರತ್ತುಗಳನ್ನು ಬದಲಾಯಿಸಬಹುದು; ಅಥವಾ

(ಬಿ) ಆ ವಿವಾದಕ್ಕೆ ಸಂಬಂಧಿಸಿಲ್ಲದ ಯಾವುವೇ ದುರ್ನಡತೆಗಾಗಿ, ಆ ಕೆಲಸಗಾರನನ್ನು ವಜಾ ಮಾಡುವ ಮೂಲಕ ಅಥವಾ ಅನ್ಯಥಾ ಕೆಲಸದಿಂದ ಬಿಡುಗಡೆ ಮಾಡಬಹುದು ಅಥವಾ ದಂಡಿಸಬಹುದು:

ಪರಂತು, ಅಂಥ ಯಾವನೇ ಕೆಲಸಗಾರನನ್ನು, ಅವನಿಗೆ ಒಂದು ತಿಂಗಳ ಮಜೂರಿಗಳನ್ನು ಸಂದಾಯ ಮಾಡಿದ್ದ ಹೊರತು ಮತ್ತು ಆ ನಿಯೋಜಕನು, ತಾನು ತೆಗೆದುಕೊಳ್ಳುವ ಕ್ರಮದ ಬಗ್ಗೆ ಅನುಮೋದನೆಗಾಗಿ ವ್ಯವಹರಣೆಯು ಯಾವ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿರುವುದೋ ಅದಕ್ಕೆ ಅರ್ಜಿಯನ್ನು ಸಲ್ಲಿಸಿದ ಹೊರತು, ಕೆಲಸದಿಂದ ಬಿಡುಗಡೆ ಮಾಡತಕ್ಕುದಲ್ಲ ಅಥವಾ ವಜಾ ಮಾಡತಕ್ಕುದಲ್ಲ.

(3) (2)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಯಾವನೇ ನಿಯೋಜಕನು, ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದಂಥ ಯಾವುದೇ ವ್ಯವಹರಣೆಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ, ಅಂಥ

ವಿವಾದಕ್ಕೆ ಸಂಬಂಧಿಸಿದ ಯಾವನೇ ಸಂರಕ್ಷಿತ ಕೆಲಸಗಾರನ ವಿರುದ್ಧ ಆ ವ್ಯವಹರಣೆಯು ಯಾವ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿದೆಯೋ ಆ ಪ್ರಾಧಿಕಾರದ ವ್ಯಕ್ತ ಲಿಖಿತ ಅನುಮತಿಯನ್ನು ಪಡೆದಲ್ಲದೆ,-

(ಎ) ಅಂಥ ವ್ಯವಹರಣೆಯು ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ ಅಂಥ ಸಂರಕ್ಷಿತ ಕೆಲಸಗಾರನಿಗೆ ಅನ್ವಯವಾಗುವ ಸೇವಾಷರತ್ತುಗಳನ್ನು ಆ ಕೆಲಸಗಾರನಿಗೆ ಪ್ರತಿಕೂಲವಾಗುವಂತೆ ಬದಲಾವಣೆ ಮಾಡುವ; ಅಥವಾ

(ಬಿ) ಅಂಥ ಸಂರಕ್ಷಿತ ಕೆಲಸಗಾರನನ್ನು ವಜಾ ಮಾಡುವ ಮೂಲಕ ಅಥವಾ ಅನ್ಯಥಾ ಕೆಲಸದಿಂದ ಬಿಡುಗಡೆ ಮಾಡುವ ಅಥವಾ ದಂಡಿಸುವ

-ಯಾವುದೇ ಕ್ರಮವನ್ನು ಕೈಗೊಳ್ಳತಕ್ಕುದಲ್ಲ.

**ವಿವರಣೆ:-** ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ ಕಾರ್ಯಸಂಸ್ಥೆಗೆ ಸಂಬಂಧಿಸಿದಂತೆ "ಸಂರಕ್ಷಿತ ಕೆಲಸಗಾರ" ಎಂದರೆ ಆ ಸಂಸ್ಥೆಗೆ ಸಂಬಂಧಿಸಿದ ನೋಂದಾಯಿತವಾದ ಕಾರ್ಮಿಕ ಸಂಘದ ಈ ಸಂಬಂಧದಲ್ಲಿ ರಚಿಸಲಾದ ನಿಯಮಗಳಿಗನುಸಾರವಾಗಿ ಕಾರ್ಮಿಕ ಸದಸ್ಯ ಅಥವಾ ಇತರ ಪದಾಧಿಕಾರಿಯಾಗಿದ್ದು, ಈ ಬಗ್ಗೆ ರಚಿಸಲಾದ ನಿಯಮಗಳಿಗನುಸಾರ ಕೆಲಸಗಾರನೆಂದು ಮನ್ನಣೆ ಪಡೆದಿರುವ ಕಾರ್ಯಕಾರಿ ಕೆಲಸಗಾರ.

(4) ಪ್ರತಿಯೊಂದು ಕಾರ್ಯಸಂಸ್ಥೆಯಲ್ಲಿ, (3)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ ಸಂರಕ್ಷಿತ ಕೆಲಸಗಾರರೆಂದು ಮನ್ನಣೆ ನೀಡಬೇಕಾದ ಕೆಲಸಗಾರರ ಸಂಖ್ಯೆಯು, ಸಂರಕ್ಷಿತ ಕೆಲಸಗಾರರ ಸಂಖ್ಯೆಯ ಕನಿಷ್ಠ ಐದಕ್ಕೆ ಮತ್ತು ಸಂರಕ್ಷಿತ ಕೆಲಸಗಾರರ ಗರಿಷ್ಠ ಸಂಖ್ಯೆಯ ನೂರಕ್ಕೆ ಒಳಪಟ್ಟು, ಅದರಲ್ಲಿ ನಿಯೋಜಿತರಾದ ಕೆಲಸಗಾರರ ಒಟ್ಟು ಸಂಖ್ಯೆಯ ಶೇಕಡಾ ಒಂದರಷ್ಟು ಇರತಕ್ಕುದು ಮತ್ತು ಹಿಂದೆ ಹೇಳಿದ ಉದ್ದೇಶಕ್ಕಾಗಿ, ಸಮುಚಿತ ಸರ್ಕಾರವು, ಆ ಸಂಸ್ಥೆಗೆ ಸಂಬಂಧಿಸಿ ಕಾರ್ಮಿಕಸಂಘಗಳು ಯಾವುದಾದರೂ ಇದ್ದರೆ, ಆ ವಿವಿಧ ಕಾರ್ಮಿಕಸಂಘಗಳಲ್ಲಿ ಅಂಥ ಸಂರಕ್ಷಿತ ಕೆಲಸಗಾರರ ಹಂಚಿಕೆಗೆ ಮತ್ತು ಕೆಲಸಗಾರರನ್ನು ಸಂರಕ್ಷಿತ ಕೆಲಸಗಾರರಾಗಿ ಆಯ್ಕೆ ಮಾಡಲು ಮತ್ತು ಮನ್ನಣೆ ನೀಡಲು ಉಪಬಂಧಿಸುವ ನಿಯಮಗಳನ್ನು ರಚಿಸಬಹುದು.

(5) ನಿಯೋಜಕನು ತಾನು ಕೈಗೊಂಡ ಕ್ರಮದ ಅನುಮೋದನೆಗಾಗಿ (2)ನೇ ಉಪಪ್ರಕರಣದ ಪರಂತುಕದ ಮೇರೆಗೆ ಸಂಧಾನಾಧಿಕಾರಿಗೆ, ಮಂಡಲಿಗೆ, ಮಧ್ಯಸ್ಥಗಾರನಿಗೆ, ಕಾರ್ಮಿಕ ನ್ಯಾಯಾಲಯಕ್ಕೆ, ನ್ಯಾಯಾಧಿಕರಣಕ್ಕೆ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸಿರುವಲ್ಲಿ, ಸಂಬಂಧಪಟ್ಟ ಪ್ರಾಧಿಕಾರವು, ವಿಳಂಬವಿಲ್ಲದೆ ಅಂಥ ಅರ್ಜಿಯ ಬಗ್ಗೆ ವಿಚಾರಣೆ ನಡೆಸತಕ್ಕುದು ಮತ್ತು ಅಂಥ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ, ಅದಕ್ಕೆ ಸಂಬಂಧಿಸಿ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಹೊರಡಿಸತಕ್ಕುದು:

ಪರಂತು, ಅಂಥ ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಇನ್ನಷ್ಟು ಅವಧಿಯವರೆಗೆ ಅಂಥ ಅವಧಿಯನ್ನು ವಿಸ್ತರಿಸುವುದು ಅವಶ್ಯ ಅಥವಾ ವಿಹಿತವೆಂದು ಪರಿಗಣಿಸಿರುವಲ್ಲಿ, ಲಿಖಿತದಲ್ಲಿ ಕಾರಣಗಳನ್ನು ದಾಖಲುಮಾಡಿ ಹಾಗೆ ಮಾಡಬಹುದು:

ಮತ್ತೂ ಪರಂತು, ಯಾವುದೇ ಅಂಥ ಪ್ರಾಧಿಕಾರದ ಮುಂದಿರುವ ಯಾವುದೇ ವ್ಯವಹರಣೆಗಳು ಈ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅವಧಿಯು, ಅಂಥ ವ್ಯವಹರಣೆಗಳನ್ನು ಪೂರ್ಣಗೊಳಿಸುವುದಕ್ಕೆ ಮುಂಚೆ ಮುಕ್ತಾಯವಾಗಿತ್ತೆಂಬ ಕಾರಣ ಮಾತ್ರದಿಂದಲೇ ನಿಂತುಹೋಗತಕ್ಕುದಲ್ಲ.

**33ಎ. ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಸೇವಾ ಷರತ್ತುಗಳು ಮುಂತಾದುವುಗಳ ಬದಲಾವಣೆ ಮಾಡಲಾಗಿತ್ತೆ ಇಲ್ಲವೆ ಎಂಬ ಬಗ್ಗೆ ನ್ಯಾಯನಿರ್ಣಯಕ್ಕಾಗಿ ವಿಶೇಷ ಉಪಬಂಧ.-** ಸಂಧಾನಾಧಿಕಾರಿ, ಮಂಡಲಿ, ಮಧ್ಯಸ್ಥಗಾರ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದೆ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ, ನಿಯೋಜಕನು

33ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿರುವಲ್ಲಿ, ಅಂಥ ಉಲ್ಲಂಘನೆಯಿಂದ ಬಾಧಿತನಾದ ಯಾವನೇ ನಿಯೋಜಿತನು,-

(ಎ) ಅಂಥ ಸಂಧಾನಾಧಿಕಾರಿ ಅಥವಾ ಮಂಡಲಿಗೆ ನಿಯಮಿಸಿದ ರೀತಿಯಲ್ಲಿ ಲಿಖಿತದಲ್ಲಿ ದೂರು ಸಲ್ಲಿಸಬಹುದು ಮತ್ತು ಆ ಸಂಧಾನಾಧಿಕಾರಿ ಅಥವಾ ಮಂಡಲಿಯು ಅಂಥ ಕೈಗಾರಿಕಾ ವಿವಾದ ಇತ್ಯರ್ಥದಲ್ಲಿ ಮಧ್ಯಸ್ಥಿಕೆ ವಹಿಸಿ, ಅದರ ಇತ್ಯರ್ಥವನ್ನು ಮಾಡಿಸುವಲ್ಲಿ ಅಂಥ ದೂರನ್ನು ಗಣನೆಗೆ ತೆಗೆದುಕೊಳ್ಳತಕ್ಕುದು; ಮತ್ತು

(ಬಿ) ಮಧ್ಯಸ್ಥಗಾರ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ನಿಯಮಿಸಿದ ರೀತಿಯಲ್ಲಿ, ಲಿಖಿತದಲ್ಲಿ ದೂರು ಸಲ್ಲಿಸಬಹುದು ಮತ್ತು ಅಂಥ ದೂರನ್ನು ಸ್ವೀಕರಿಸಿದ ಮೇಲೆ, ಸಂದರ್ಭಾನುಸಾರ, ಅಂಥ ಮಧ್ಯಸ್ಥಗಾರ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ, ಅದು ತನಗೆ ಉಲ್ಲೇಖಿಸಿದ ಅಥವಾ ತನ್ನ ಮುಂದೆ ಇತ್ಯರ್ಥದಲ್ಲಿರುವ ವಿವಾದವಾಗಿದ್ದರೆ ಹೇಗೋ ಹಾಗೆ ಆ ದೂರಿನ ಸಂಬಂಧದಲ್ಲಿ ನ್ಯಾಯನಿರ್ಣಯವನ್ನು ಮಾಡತಕ್ಕುದು ಮತ್ತು ತನ್ನ ಐತೀರ್ಪನ್ನು ಸಮುಚಿತ ಸರ್ಕಾರಕ್ಕೆ ಸಲ್ಲಿಸತಕ್ಕುದು ಮತ್ತು ಆ ತರುವಾಯ ಈ ಅಧಿನಿಯಮದ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕುದು.

**33ಬಿ. ಕೆಲವು ವ್ಯವಹರಣೆಗಳನ್ನು ವರ್ಗಾಯಿಸುವ ಅಧಿಕಾರ.**- (1) ಸಮುಚಿತ ಸರ್ಕಾರವು, ಲಿಖಿತ ಆದೇಶದ ಮೂಲಕ, ಮತ್ತು ಅದರಲ್ಲಿ ಕಾರಣಗಳನ್ನು ದಾಖಲುಮಾಡಿ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದೆ ಇತ್ಯರ್ಥದಲ್ಲಿರುವ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯನ್ನು ಹಿಂತೆಗೆದುಕೊಳ್ಳಬಹುದು ಮತ್ತು ಆ ವ್ಯವಹರಣೆಯ ವಿಲೆಗಾಗಿ ಅದನ್ನು ಸಂದರ್ಭಾನುಸಾರ, ಇನ್ನೊಂದು ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ವರ್ಗಾಯಿಸಬಹುದು ಮತ್ತು ಆ ವ್ಯವಹರಣೆಯನ್ನು ಹಾಗೆ ವರ್ಗಾಯಿಸಲಾದ ಆ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು, ವರ್ಗಾವಣೆಯ ಆದೇಶದಲ್ಲಿ ನೀಡಲಾದ ವಿಶೇಷ ನಿರ್ದೇಶನಗಳಿಗೆ ಒಳಪಟ್ಟು, ಅದನ್ನು ಹೊಸದಾಗಿ ಪ್ರಾರಂಭಿಸಬಹುದು ಅಥವಾ ಅದನ್ನು ಹಾಗೆ ವರ್ಗಾಯಿಸಲಾದ ಹಂತದಿಂದ ಮುಂದುವರಿಸಬಹುದು:

ಪರಂತು, 33ನೇ ಪ್ರಕರಣದ ಅಥವಾ 33ಎ ಪ್ರಕರಣದ ಮೇರೆಗಿನ ವ್ಯವಹರಣೆಯು ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಇತ್ಯರ್ಥದಲ್ಲಿರುವಲ್ಲಿ ಆ ವ್ಯವಹರಣೆಯನ್ನು ಕಾರ್ಮಿಕ ನ್ಯಾಯಾಲಯಕ್ಕೆ ಸಹ ವರ್ಗಾಯಿಸಬಹುದು.

(2) (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ಸಮುಚಿತ ಸರ್ಕಾರವು, ಯಾವುದೇ ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ, ಮುಂದೆ ಇತ್ಯರ್ಥದಲ್ಲಿರುವ 33ನೇ ಪ್ರಕರಣದ ಅಥವಾ 33ಎ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಯನ್ನು, ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ವ್ಯವಹರಣೆಗಳನ್ನು ವಿಲೆಗಾಗಿ ನಿರ್ದಿಷ್ಟ ಪಡಿಸಿದ ಯಾವುದೇ ಕಾರ್ಮಿಕ ನ್ಯಾಯಾಲಯಗಳ ಪೈಕಿ ಯಾವುದಕ್ಕಾದರೂ ವರ್ಗಾಯಿಸಲು ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವನ್ನು ಅಧಿಕೃತಗೊಳಿಸಿರುವಲ್ಲಿ ಅದು ಹಾಗೆ ವರ್ಗಾಯಿಸಬಹುದು, ಮತ್ತು ಆ ವ್ಯವಹರಣೆಗಳನ್ನು ಯಾವ ಕಾರ್ಮಿಕ ನ್ಯಾಯಾಲಯಕ್ಕೆ ಹಾಗೆ ವರ್ಗಾಯಿಸಲಾಯಿತೋ ಆ ಕಾರ್ಮಿಕ ನ್ಯಾಯಾಲಯವು ಅದನ್ನು ವಿಲೆ ಮಾಡತಕ್ಕುದು.

**33ಸಿ. ನಿಯೋಜಕನಿಂದ ಬಾಕಿ ಇರುವ ಹಣದ ವಸೂಲಿ.**- (1) ಯಾವನೇ ಕೆಲಸಗಾರನಿಗೆ ನಿಯೋಜಕನಿಂದ, ಇತ್ಯರ್ಥ ಅಥವಾ ಐತೀರ್ಪು ಅಥವಾ V ಎ ಅಧ್ಯಾಯ ಅಥವಾ V ಬಿ ಅಧ್ಯಾಯದ ಮೇರೆಗೆ, ಯಾವುದೇ ಬಾಕಿ ಇದ್ದಲ್ಲಿ, ಆ ಕೆಲಸಗಾರ ತಾನೇ ಅಥವಾ ಅವನಿಂದ ಈ ಸಂಬಂಧದಲ್ಲಿ ಲಿಖಿತದಲ್ಲಿ ಅಧಿಕೃತನಾದ ಯಾವನೇ ಇತರ ವ್ಯಕ್ತಿಯು, ಅಥವಾ ಕೆಲಸಗಾರನ ಮರಣದ ಸಂದರ್ಭದಲ್ಲಿ,

ಅವನಿಂದ ಹಸ್ತಾಂತರ ಪಡೆದವನು ಅಥವಾ ಅವನ ವಾರಸುದಾರರು, ಯಾವುದೇ ಇತರ ವಸೂಲಾತಿಯ ರೀತಿಗೆ ಪ್ರತಿಕೂಲವಾಗದ ಹಾಗೆ, ಅವನಿಗೆ ಬಾಕಿ ಇರುವ ಹಣದ ವಸೂಲಾತಿಗಾಗಿ ಸಮುಚಿತ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು, ಮತ್ತು ಸಮುಚಿತ ಸರ್ಕಾರಕ್ಕೆ ಹಾಗೆ ಯಾವುದೇ ಹಣವು ಬಾಕಿ ಇರುವುದೆಂದು ಮನದಟ್ಟಾದಲ್ಲಿ, ಅದು ಆ ಮೊಬಲಗಿನ ಬಗ್ಗೆ ಕಲೆಕ್ಟರನಿಗೆ ಪ್ರಮಾಣಪತ್ರವನ್ನು ನೀಡತಕ್ಕುದು ಮತ್ತು ಅವನು ಅದನ್ನು ಭೂ ಕಂದಾಯ ಬಾಕಿಯ ರೀತಿಯಲ್ಲಿಯೇ ವಸೂಲು ಮಾಡತಕ್ಕುದು:

ಪರಂತು, ಅಂಥ ಪ್ರತಿಯೊಂದು ಅರ್ಜಿಯನ್ನು ಆ ಹಣವು ನಿಯೋಜಕನಿಂದ ಕೆಲಸಗಾರನಿಗೆ ಬಾಕಿಯಾದ ದಿನಾಂಕದಿಂದ ಒಂದು ವರ್ಷದೊಳಗೆ ಸಲ್ಲಿಸತಕ್ಕುದು:

ಮತ್ತೂ ಪರಂತು, ಸದರಿ ಅವಧಿಯೊಳಗೆ ಅರ್ಜಿದಾರನು ಅರ್ಜಿ ಸಲ್ಲಿಸದಿರಲು ಸಾಕಷ್ಟು ಕಾರಣಗಳಿದ್ದುವೆಂದು ಸಮುಚಿತ ಸರ್ಕಾರಕ್ಕೆ ಮನದಟ್ಟಾದರೆ ಸದರಿ ಒಂದು ವರ್ಷದ ಅವಧಿಯು ಮುಕ್ತಾಯವಾದ ತರುವಾಯ ಯಾವುದೇ ಅಂಥ ಅರ್ಜಿಯನ್ನು ಅಂಗೀಕರಿಸಬಹುದು.

(2) ಯಾವನೇ ಕೆಲಸಗಾರನು ನಿಯೋಜಕನಿಂದ ಯಾವುದೇ ಹಣ ಅಥವಾ ಹಣದ ರೂಪದಲ್ಲಿ ಲೆಕ್ಕ ಹಾಕಬಹುದಾದ ಯಾವುದೇ ಪ್ರಯೋಜನವನ್ನು ಪಡೆಯಲು ಹಕ್ಕುಳ್ಳವನಾಗಿರುವಲ್ಲಿ, ಮತ್ತು ಬಾಕಿ ಇರುವ ಹಣದ ಮೊಬಲಗಿನ ಬಗ್ಗೆ ಅಥವಾ ಅಂಥ ಪ್ರಯೋಜನವನ್ನು ಯಾವ ಮೊಬಲಗಿಗೆ ಲೆಕ್ಕಹಾಕುವ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ ಆ ಪ್ರಶ್ನೆಯನ್ನು ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಯಾವುವೇ ನಿಯಮಗಳಿಗೊಳಪಟ್ಟು ಈ ಬಗ್ಗೆ ಸಮುಚಿತ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಕಾರ್ಮಿಕ ನ್ಯಾಯಾಲಯವು ಮೂರು ತಿಂಗಳಿಗೆ ಮೀರದ ಅವಧಿಯೊಳಗೆ ತೀರ್ಮಾನಿಸತಕ್ಕುದು:

ಪರಂತು, ಕಾರ್ಮಿಕ ನ್ಯಾಯಾಲಯದ ಅಧ್ಯಕ್ಷಾಧಿಕಾರಿಯು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಇನ್ನಷ್ಟು ಅವಧಿಯವರೆಗೆ ಅಂಥ ಅವಧಿಯನ್ನು ವಿಸ್ತರಿಸುವುದು ಅವಶ್ಯ ಅಥವಾ ವಿಹಿತವೆಂದು ಪರಿಗಣಿಸಿರುವಲ್ಲಿ, ಲಿಖಿತದಲ್ಲಿ ಕಾರಣಗಳನ್ನು ದಾಖಲುಮಾಡಿ ಹಾಗೆ ಮಾಡಬಹುದು.

(3) ಪ್ರಯೋಜನದ ಮೌಲ್ಯವನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ, ಕಾರ್ಮಿಕ ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದರೆ ಕಮಿಷನರನನ್ನು ನೇಮಿಸಬಹುದು ಮತ್ತು ಅವನು ಅವಶ್ಯವಿರಬಹುದಾದ ಸಾಕ್ಷ್ಯವನ್ನು ತೆಗೆದುಕೊಂಡ ತರುವಾಯ, ಕಾರ್ಮಿಕ ನ್ಯಾಯಾಲಯಕ್ಕೆ ವರದಿಯನ್ನು ಒಪ್ಪಿಸತಕ್ಕುದು ಮತ್ತು ಆ ಕಾರ್ಮಿಕ ನ್ಯಾಯಾಲಯವು ಕಮಿಷನರನ ವರದಿಯನ್ನು ಮತ್ತು ಆ ಪ್ರಕರಣದ ಇತರ ಸಂದರ್ಭಗಳನ್ನು ಪರ್ಯಾಲೋಚಿಸಿದ ತರುವಾಯ ಮೊಬಲಗನ್ನು ನಿರ್ಧರಿಸತಕ್ಕುದು.

(4) ಕಾರ್ಮಿಕ ನ್ಯಾಯಾಲಯವು ತನ್ನ ನಿರ್ಣಯವನ್ನು ಸಮುಚಿತ ಸರ್ಕಾರಕ್ಕೆ ಕಳುಹಿಸಿಕೊಡತಕ್ಕುದು ಮತ್ತು ಕಾರ್ಮಿಕ ನ್ಯಾಯಾಲಯಕ್ಕೆ ಬಾಕಿ ಇರುವುದೆಂದು ಕಂಡುಬಂದ ಯಾವುದೇ ಮೊಬಲಗನ್ನು (1)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ವಸೂಲ್ಮಾಡಬಹುದು.

(5) ಒಬ್ಬನೇ ನಿಯೋಜಕನಲ್ಲಿ ನಿಯೋಜಿತರಾದಂಥ ಕೆಲಸಗಾರರು ಅವನಿಂದ ಯಾವುದೇ ಹಣವನ್ನು ಅಥವಾ ಹಣದ ರೂಪದಲ್ಲಿ ಲೆಕ್ಕಹಾಕಬಹುದಾದ ಯಾವುದೇ ಪ್ರಯೋಜನವನ್ನು ಪಡೆಯಲು ಹಕ್ಕುಳ್ಳವರಾಗಿರುವಲ್ಲಿ, ಆಗ, ಈ ಸಂಬಂಧದಲ್ಲಿ ರಚಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಬಾಕಿ ಇರುವ ಮೊಬಲಗಿನ ವಸೂಲಿಗಾಗಿ ಒಂದು ಅರ್ಜಿಯನ್ನು ಅಂಥ ಕೆಲಸಗಾರರ ಪೈಕಿ ಎಷ್ಟೇ ಸಂಖ್ಯೆಯ ಕೆಲಸಗಾರರ ಪರವಾಗಿ ಅಥವಾ ಅವರಿಗೆ ಸಂಬಂಧಪಟ್ಟಂತೆ ಸಲ್ಲಿಸಬಹುದು.

**ವಿವರಣೆ.**- ಈ ಪ್ರಕರಣದಲ್ಲಿ "ಕಾರ್ಮಿಕ ನ್ಯಾಯಾಲಯ" ವು ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ ಕೈಗಾರಿಕಾ ವಿವಾದಗಳ ತನಿಖೆ ಹಾಗೂ ಇತ್ಯರ್ಥಕ್ಕೆ ಸಂಬಂಧಪಟ್ಟಂಥ ಯಾವುದೇ ಕಾನೂನಿನ ಮೇರೆಗೆ ರಚಿಸಲಾದ ಯಾವುದೇ ನ್ಯಾಯಾಲಯವನ್ನು ಒಳಗೊಳ್ಳುತ್ತದೆ.

**34. ಅಪರಾಧಗಳ ಸಂಜ್ಞಾನ.**- (1) ಯಾವುದೇ ನ್ಯಾಯಾಲಯವು, ಸಮುಚಿತ ಸರ್ಕಾರದ ಪ್ರಾಧಿಕಾರಿಯಿಂದ ಅಥವಾ ಅದರ ಮೇರೆಗೆ ಸಲ್ಲಿಸಲಾಗುವ ದೂರನ್ನು ಹೊರತುಪಡಿಸಿ, ಈ ಅಧಿನಿಯಮದ

ಮೇರೆಗೆ ಅಥವಾ ಯಾವುದೇ ಅಂಥ ಅಪರಾಧದ ದುಷ್ಪ್ರೇರಣೆಗಾಗಿ ಶಿಕ್ಷಾರ್ಹವಾದ ಯಾವುದೇ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕುದಲ್ಲ.

(2) ಮಹಾನಗರ ಮ್ಯಾಜಿಸ್ಟ್ರೇಟ್‌ನ ಅಥವಾ ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧದ ಅಧಿವಿಚಾರಣೆ ಮಾಡತಕ್ಕುದಲ್ಲ.

**35. ವ್ಯಕ್ತಿಗಳ ರಕ್ಷಣೆ.**- (1) ಈ ಅಧಿನಿಯಮದ ಮೇರೆಗೆ ಕಾನೂನುಬಾಹಿರವಾದಂಥ ಯಾವುದೇ ಮುಷ್ಕರ ಅಥವಾ ಬೀಗಮುದ್ರೆಯಲ್ಲಿ ಭಾಗವಹಿಸಲು ಅಥವಾ ಭಾಗವಹಿಸುವುದನ್ನು ಮುಂದುವರೆಸಲು ನಿರಾಕರಿಸುವಂಥ ಯಾವನೇ ವ್ಯಕ್ತಿಗೆ, ಅಂಥ ನಿರಾಕರಣೆಯ ಕಾರಣಕ್ಕಾಗಿ ಅಥವಾ ಈ ಪ್ರಕರಣದ ಮೇರೆಗೆ ಅವನು ತೆಗೆದುಕೊಂಡ ಯಾವುದೇ ಕ್ರಮದ ಕಾರಣಕ್ಕಾಗಿ ಯಾವುದೇ ಕಾರ್ಮಿಕಸಂಘ ಅಥವಾ ಸಂಸ್ಥೆಯಿಂದ ಹೊರದೂಡುವಿಕೆಗೆ ಅವನು ಒಳಪಡತಕ್ಕುದಲ್ಲ, ಅಥವಾ ಯಾವುದೇ ಜುಲ್ಮಾನೆ ಅಥವಾ ದಂಡಕ್ಕೆ ಗುರಿಯಾಗತಕ್ಕುದಲ್ಲ ಅಥವಾ ಅವನು ಅಥವಾ ಅವನ ಕಾನೂನುಸಮ್ಮತ ಪ್ರತಿನಿಧಿಗಳು ಅನ್ಯಥಾ ಹಕ್ಕುಹೊಂದಿರುವ ಯಾವುದೇ ಹಕ್ಕು ಅಥವಾ ಪ್ರಯೋಜನದಿಂದ ವಂಚಿತನಾಗುವುದಕ್ಕೆ ಗುರಿಯಾಗತಕ್ಕುದಲ್ಲ ಅಥವಾ ಕಾರ್ಮಿಕಸಂಘ ಅಥವಾ ಸಂಸ್ಥೆಯ ನಿಯಮಗಳಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಯಾವುದೇ ರೀತಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕಾರ್ಮಿಕಸಂಘದ ಅಥವಾ ಸಂಸ್ಥೆಯ ಇತರ ಸದಸ್ಯರ ಹೋಲಿಕೆಯಲ್ಲಿ ಯಾವುದೇ ಅಸಮರ್ಥತೆ ಅಥವಾ ಯಾವುದೇ ಅನಾನುಕೂಲಕ್ಕೆ ಒಳಪಡಲು ಬದ್ಧನಾಗತಕ್ಕುದಲ್ಲ.

(2) ಯಾವುದೇ ರೀತಿಯಲ್ಲಿ ವಿವಾದಗಳ ಇತ್ಯರ್ಥವನ್ನು ಅಗತ್ಯಪಡಿಸುವ ಕಾರ್ಮಿಕಸಂಘ ಅಥವಾ ಸಂಸ್ಥೆಯ ನಿಯಮಗಳಲ್ಲಿ ಇರುವುದು ಯಾವುದೂ, ಈ ಪ್ರಕರಣದ ಮೂಲಕ ಒದಗಿಸಲಾದ ಯಾವುದೇ ಹಕ್ಕನ್ನು ಅಥವಾ ವಿನಾಯಿತಿಯನ್ನು ಜಾರಿಗೊಳಿಸುವ ಯಾವುದೇ ವ್ಯವಹರಣೆಗೆ ಅನ್ವಯವಾಗತಕ್ಕುದಲ್ಲ, ಮತ್ತು ಯಾವುದೇ ಅಂಥ ವ್ಯವಹರಣೆಯಲ್ಲಿ ಸಿವಿಲ್ ನ್ಯಾಯಾಲಯವು ಕಾರ್ಮಿಕಸಂಘ ಅಥವಾ ಸಂಸ್ಥೆಯ ಸದಸ್ಯತ್ವದಿಂದ ಹೊರದೂಡಲಾದ ವ್ಯಕ್ತಿಯನ್ನು ಸದಸ್ಯತ್ವಕ್ಕೆ ಪುನರ್‌ಸ್ಥಾಪಿಸುವ ಆದೇಶಕ್ಕೆ ಬದಲಾಗಿ ನಷ್ಟಪರಿಹಾರ ಅಥವಾ ಹಾನಿಪರಿಹಾರದ ರೂಪದಲ್ಲಿ ಆ ನ್ಯಾಯಾಲಯವು ನ್ಯಾಯವೆಂದು ಭಾವಿಸಬಹುದಾದಂಥ ಮೊತ್ತವನ್ನು ಆ ಕಾರ್ಮಿಕಸಂಘ ಅಥವಾ ಸಂಸ್ಥೆಯ ನಿಧಿಯಿಂದ ಅವನಿಗೆ ಸಂದಾಯ ಮಾಡಬೇಕೆಂದು ಆದೇಶಿಸಬಹುದು.

**36. ಪಕ್ಷಕಾರರ ಪ್ರಾತಿನಿಧ್ಯ.**- ವಿವಾದದ ಪಕ್ಷಕಾರನಾದ ಕೆಲಸಗಾರನು ಈ ಅಧಿನಿಯಮದ ಮೇರೆಗೆ ಯಾವುದೇ ವ್ಯವಹರಣೆಯಲ್ಲಿ-

(ಎ) ಅವನು ಯಾವ ನೋಂದಾಯಿತ ಕಾರ್ಮಿಕಸಂಘದ ಸದಸ್ಯನಾಗಿರುವನೋ ಅದರ ಕಾರ್ಯಕಾರಿ ಸಮಿತಿಯ ಯಾವನೇ ಸದಸ್ಯನಿಂದ ಅಥವಾ ಇತರ ಪದಾಧಿಕಾರಿಯಿಂದ;

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಿರುವ ಕಾರ್ಮಿಕಸಂಘವು ಯಾವ ಕಾರ್ಮಿಕಸಂಘಗಳ ಫೆಡರೇಷನ್ನಿನಲ್ಲಿ ಸಂಯೋಜಿತವಾಗಿರುವುದೋ ಅದರ ಕಾರ್ಯಕಾರಿ ಸಮಿತಿಯ ಯಾವನೇ ಸದಸ್ಯನಿಂದ ಅಥವಾ ಇತರ ಪದಾಧಿಕಾರಿಯಿಂದ;

(ಸಿ) ಆ ಕೆಲಸಗಾರನು ಯಾವುದೇ ಕಾರ್ಮಿಕಸಂಘದ ಸದಸ್ಯನಾಗಿಲ್ಲದಿದ್ದಲ್ಲಿ, ಆ ಕೈಗಾರಿಕೆಗೆ ಸಂಬಂಧಿಸಿದ ಯಾವುದೇ ಕಾರ್ಮಿಕಸಂಘದ ಕಾರ್ಯಕಾರಿ ಸಮಿತಿಯ ಸದಸ್ಯನಿಂದ ಅಥವಾ ಪದಾಧಿಕಾರಿಯಿಂದ, ಅಥವಾ ಆ ಕೆಲಸಗಾರನು ನಿಯೋಜಿತನಾದಂಥ ಆ ಕೈಗಾರಿಕೆಯಲ್ಲಿ ನಿಯೋಜಿತನಾದ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಅಧಿಕೃತನಾದ ಯಾವನೇ ಇತರ ಕೆಲಸಗಾರನಿಂದ,

-ಪ್ರತಿನಿಧಿತನಾಗಲು ಹಕ್ಕು ಹೊಂದಿರತಕ್ಕುದು.

(2) ವಿವಾದಕ್ಕೆ ಪಕ್ಷಕಾರನಾಗಿರುವಂಥ ನಿಯೋಜಕನು, ಈ ಅಧಿನಿಯಮದ ಮೇರೆಗೆ ಯಾವುದೇ ವ್ಯವಹರಣೆಯಲ್ಲಿ–

(ಎ) ಅವನು ಸದಸ್ಯನಾಗಿರುವ ನಿಯೋಜಕರ ಸಂಘದ ಅಧಿಕಾರಿಯಿಂದ;

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಿರುವ ಸಂಘವು ಯಾವ ನಿಯೋಜಕರ ಸಂಘದ ಫೆಡರೇಷನ್ನಿನಲ್ಲಿ ಸಂಯೋಜಿತವಾಗಿರುವುದೋ ಅದರ ಅಧಿಕಾರಿಯಿಂದ;

(ಸಿ) ನಿಯೋಜಕನು ಯಾವುದೇ ನಿಯೋಜಕರ ಸಂಘದ ಸದಸ್ಯನಾಗಿಲ್ಲದಿರುವಲ್ಲಿ, ನಿಯೋಜಕನು ಯಾವ ಕೈಗಾರಿಕೆಯಲ್ಲಿ ತೊಡಗಿರುವನೋ, ಅದಕ್ಕೆ ಸಂಬಂಧಿಸಿದ ನಿಯೋಜಕರ ಸಂಘದ ಯಾವನೇ ಅಧಿಕಾರಿಯಿಂದ ಅಥವಾ ಅದರಲ್ಲಿ ತೊಡಗಿರುವ ಮತ್ತು ನಿಯಮಿಸಲಾದ ರೀತಿಯಲ್ಲಿ ಅಧಿಕೃತನಾದ ಯಾವನೇ ಇತರ ನಿಯೋಜಕನಿಂದ,

– ಪ್ರತಿನಿಧಿತನಾಗಲು ಹಕ್ಕುಹೊಂದಿರತಕ್ಕುದು.

(3) ಈ ಅಧಿನಿಯಮದ ಮೇರೆಗಿನ ಯಾವುದೇ ಸಂಧಾನದ ವ್ಯವಹರಣೆಗಳಲ್ಲಿ ಅಥವಾ ನ್ಯಾಯಾಲಯದ ಮುಂದಿರುವ ಯಾವುವೇ ವ್ಯವಹರಣೆಗಳಲ್ಲಿ ನ್ಯಾಯವಾದಿಯ ಮೂಲಕ ಪ್ರತಿನಿಧಿತನಾಗಲು ವಿವಾದದ ಯಾರೇ ಪಕ್ಷಕಾರನು ಹಕ್ಕುಹೊಂದಿರತಕ್ಕುದಲ್ಲ.

(4) ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದೆ ಇರುವ ಯಾವುದೇ ವ್ಯವಹರಣೆಗಳಲ್ಲಿ, ವಿವಾದದ ಪಕ್ಷಕಾರನು ಇತರ ಪಕ್ಷಕಾರರ ಒಪ್ಪಿಗೆಪಡೆದು ಮತ್ತು ಸಂದರ್ಭಾನುಸಾರ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಒಪ್ಪಿಗೆಪಡೆದು ನ್ಯಾಯವಾದಿಯ ಮೂಲಕ ಕಾನೂನು ವ್ಯವಹರಣೆಗಳಲ್ಲಿ ಪ್ರತಿನಿಧಿತನಾಗಬಹುದು.

**36ಎ. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಯಾವೊಂದು ಐತೀರ್ಪು ಅಥವಾ ಇತ್ಯರ್ಥದ ಯಾವುದೇ ಉಪಬಂಧದ ಅರ್ಥ ವಿವರಣೆಗೆ ಸಂಬಂಧಿಸಿ ಯಾವುದೇ ತೊಂದರೆ ಅಥವಾ ಸಂದೇಹ ಉಂಟಾಗಿದೆ ಎಂದು ಸಮುಚಿತ ಸರ್ಕಾರವು ಅಭಿಪ್ರಾಯಪಡುವಲ್ಲಿ ಅದು ತನಗೆ ಸೂಕ್ತವೆನಿಸಬಹುದಾದಂಥ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಆ ವಿಷಯವನ್ನು ಉಲ್ಲೇಖಿಸಬಹುದು.

(2) ಅಂಥ ವಿಷಯವನ್ನು ಉಲ್ಲೇಖಿಸಲಾದಂಥ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು, ಪಕ್ಷಕಾರರಿಗೆ ಅಹವಾಲು ಹೇಳಿಕೊಳ್ಳಲು ಅವಕಾಶಕೊಟ್ಟ ತರುವಾಯ, ಅಂಥ ವಿಷಯವನ್ನು ತೀರ್ಮಾನಿಸತಕ್ಕುದು ಮತ್ತು ಅದರ ನಿರ್ಣಯವು ಅಂತಿಮವಾಗಿರತಕ್ಕುದು ಮತ್ತು ಅಂಥ ಎಲ್ಲ ಪಕ್ಷಕಾರರ ಮೇಲೆ ಬಂಧನಕಾರಿಯಾಗಿರತಕ್ಕುದು.

**36ಬಿ. ವಿನಾಯಿತಿಗೊಳಿಸಲು ಅಧಿಕಾರ.–** ಸಮುಚಿತ ಸರ್ಕಾರಕ್ಕೆ, ಆ ಸರ್ಕಾರದ ಯಾವುದೇ ಇಲಾಖೆಯು ನಡೆಸುವ ಯಾವುದೇ ಕೈಗಾರಿಕಾ ಕಾರ್ಯಸಂಸ್ಥೆ ಅಥವಾ ಉದ್ಯಮ ಅಥವಾ ಕೈಗಾರಿಕಾ ಕಾರ್ಯಸಂಸ್ಥೆಗಳ ಅಥವಾ ಉದ್ಯಮಗಳ ಯಾವುದೇ ವರ್ಗ–ಇವುಗಳಿಗೆ ಸಂಬಂಧಿಸಿ, ಅಂಥ ಸಂಸ್ಥೆಯಲ್ಲಿ ಅಥವಾ ಉದ್ಯಮದಲ್ಲಿ ಅಥವಾ ಸಂಸ್ಥೆಗಳ ಅಥವಾ ಉದ್ಯಮಗಳ ವರ್ಗದಲ್ಲಿ ನಿಯೋಜಿತರಾದ ಕೆಲಸಗಾರರ ಸಂಬಂಧದಲ್ಲಿ ಕೈಗಾರಿಕಾ ವಿವಾದಗಳ ತನಿಖೆ ಮತ್ತು ಇತ್ಯರ್ಥಕ್ಕೆ ಸಾಕಷ್ಟು ಉಪಬಂಧಗಳಿರುವುದಾಗಿ ಮನದಟ್ಟಾದರೆ, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಷರತ್ತು ಸಹಿತವಾಗಿ ಅಥವಾ ಷರತ್ತಿಲ್ಲದೆಯೇ ಅಂಥ ಸಂಸ್ಥೆ ಅಥವಾ ಉದ್ಯಮ ಅಥವಾ ಸಂಸ್ಥೆಗಳ ಅಥವಾ ಉದ್ಯಮಗಳ ವರ್ಗ ಇವುಗಳಿಗೆ ಈ ಅಧಿನಿಯಮದ ಎಲ್ಲ ಉಪಬಂಧಗಳಿಂದ ಅಥವಾ ಅವುಗಳಲ್ಲಿ ಯಾವುದರಿಂದಾದರೂ ವಿನಾಯಿತಿಗೊಳಿಸಬಹುದು.

**37. ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮಗಳಿಗೆ ಅನುಸಾರ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು

ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್, ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕುದಲ್ಲ.

**38. ನಿಯಮ ರಚನಾಧಿಕಾರ.**- (1) ಸಮುಚಿತ ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಅವುಗಳಲ್ಲಿ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:-

(ಎ) ಸಾಕ್ಷಿಗಳನ್ನು ಸಮನು ಮಾಡುವುದು, ವಿಚಾರಣೆ ಅಥವಾ ತನಿಖೆಗೆ ಸಂಬಂಧಿಸಿದ ವಸ್ತು ವಿಷಯಕ್ಕೆ ಸುಸಂಗತವಾದ ದಸ್ತಾವೇಜುಗಳನ್ನು ಹಾಜರುಪಡಿಸುವುದು, ಕೋರಂಗೆ ಅವಶ್ಯಕವಾದ ಸದಸ್ಯರ ಸಂಖ್ಯೆ, ಮತ್ತು ವರದಿಗಳು ಮತ್ತು ಐತೀರ್ಪುಗಳನ್ನು ಸಲ್ಲಿಸುವ ರೀತಿ ಇವುಗಳೂ ಸೇರಿ ಸಂಧಾನ ಅಧಿಕಾರಿಗಳು, ಮಂಡಲಿಗಳು, ನ್ಯಾಯಾಲಯಗಳು, ಕಾರ್ಮಿಕ ನ್ಯಾಯಾಲಯಗಳು, ನ್ಯಾಯಾಧಿಕರಣಗಳು ಮತ್ತು ರಾಷ್ಟ್ರೀಯ ನ್ಯಾಯಾಧಿಕರಣಗಳ ಅಧಿಕಾರಗಳು ಮತ್ತು ಪ್ರಕ್ರಿಯೆ;

(ಎಎ) ಮಧ್ಯಸ್ಥಿಕೆ ಒಪ್ಪಂದದ ನಮೂನೆ, ಪಕ್ಷಕಾರರು ಅದಕ್ಕೆ ಸಹಿ ಮಾಡುವ ರೀತಿ, 10ಎ ಪ್ರಕರಣದ (3ಎ) ಉಪ-ಪ್ರಕರಣದ ಮೇರೆಗೆ ಹೊರಡಿಸಬಹುದಾದ ಅಧಿಸೂಚನೆಯ ರೀತಿ, ಮಧ್ಯಸ್ಥಿಕೆ ಒಪ್ಪಂದದಲ್ಲಿ ಹೆಸರಿಸಲಾದ ಮಧ್ಯಸ್ಥಗಾರನ ಅಧಿಕಾರಗಳು ಮತ್ತು ಅವನು ಅನುಸರಿಸಬೇಕಾದ ಪ್ರಕ್ರಿಯೆ;

(ಎಎಎ) ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳಲ್ಲಿ ನಿರ್ಧಾರಕರ ನೇಮಕಾತಿ;

(ಬಿ) ಕಾರ್ಯ ಸಮಿತಿಗಳ ರಚನೆ ಮತ್ತು ಪ್ರಕಾರ್ಯಗಳು ಮತ್ತು ಅದರಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು, ಮತ್ತು ಅಂಥ ಸಮಿತಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಸಿ) ನ್ಯಾಯಾಲಯ ಮತ್ತು ಮಂಡಲಿಗಳ ಸದಸ್ಯರಿಗೆ ಮತ್ತು ಕಾರ್ಮಿಕ ನ್ಯಾಯಾಲಯಗಳು, ನ್ಯಾಯಾಧಿಕರಣಗಳು ಮತ್ತು ರಾಷ್ಟ್ರೀಯ ನ್ಯಾಯಾಧಿಕರಣಗಳ ಅಧ್ಯಕ್ಷಾಧಿಕಾರಿಗಳಿಗೆ ಮತ್ತು ನಿರ್ಧಾರಕರಿಗೆ ಮತ್ತು ಸಾಕ್ಷಿಗಳಿಗೆ ಅನುಮತಿಸಬಹುದಾದ ಭತ್ಯೆಗಳು;

(ಡಿ) ನ್ಯಾಯಾಲಯ, ಮಂಡಲಿ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಹಂಚಿಕೆ ಮಾಡಬಹುದಾದ ಲಿಪಿಕ ಸಿಬ್ಬಂದಿ ಮತ್ತು ಅಂಥ ಸಿಬ್ಬಂದಿಯ ಸದಸ್ಯರಿಗೆ ಸಂದಾಯವಾಗತಕ್ಕ ಸಂಬಳಗಳು ಮತ್ತು ಭತ್ಯೆಗಳು;

(ಇ) ಮುಷ್ಕರ ಅಥವಾ ಬೀಗಮುದ್ರೆಯ ನೋಟೀಸನ್ನು ಕೊಡತಕ್ಕ ರೀತಿ ಮತ್ತು ಯಾವ ವ್ಯಕ್ತಿಗಳು ಯಾವ ವ್ಯಕ್ತಿಗಳಿಗೆ ಅದನ್ನು ಕೊಡಬೇಕೋ ಆ ವ್ಯಕ್ತಿಗಳು ಮತ್ತು ಅಂಥ ನೋಟೀಸುಗಳನ್ನು ಕಳುಹಿಸುವ ರೀತಿ;

(ಎಫ್) ನ್ಯಾಯಾಲಯ, ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ, ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದೆ, ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳಲ್ಲಿ ಯಾವ ಷರತ್ತುಗಳಿಗೊಳಪಟ್ಟು ಪಕ್ಷಕಾರರು ನ್ಯಾಯವಾದಿಗಳ ಮೂಲಕ ಪ್ರತಿನಿಧಿಸಲ್ಪಡಬಹುದೋ ಆ ಷರತ್ತುಗಳು;

(ಜಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳು ಅವುಗಳ ಉಲ್ಲಂಘನೆಯು ಐವತ್ತು ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ದಂಡನೀಯವಾಗತಕ್ಕುದೆಂದು ಉಪಬಂಧಿಸಬಹುದು.

(4) ಈ ಪ್ರಕರಣದ ಮೇರೆಗೆ ರಚಿಸಲಾದ ಎಲ್ಲ ನಿಯಮಗಳನ್ನು, ಅವುಗಳನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಮುಂದೆ ಅಥವಾ ಸಮುಚಿತ ಸರ್ಕಾರವು ಕೇಂದ್ರ ಸರ್ಕಾರವಾಗಿರುವಲ್ಲಿ ಸಂಸತ್ತಿನ ಉಭಯ ಸದನಗಳ ಮುಂದೆ ಇಡತಕ್ಕುದು.

(5) ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಅನುಕ್ರಮವಾದ ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿವೇಶನಗಳಲ್ಲಿ ಒಳಗೊಳ್ಳಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಅನುಕ್ರಮವಾದ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಒಪ್ಪಿದರೆ, ಅಥವಾ ಎರಡೂ ಸದನಗಳು ಆ ನಿಯಮವನ್ನು ಮಾಡಕೂಡದೆಂದು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕುದಲ್ಲ.

**39. ಅಧಿಕಾರಗಳ ಪ್ರತ್ಯಾಯೋಜನೆ.-** ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿಷಯಗಳಿಗೆ ಸಂಬಂಧಿಸಿ ಮತ್ತು ಷರತ್ತುಗಳು, ಯಾವುವಾದರೂ ಇದ್ದರೆ, ಅವುಗಳಿಗೊಳಪಟ್ಟು,-

(ಎ) ಸಮುಚಿತ ಸರ್ಕಾರವು ಕೇಂದ್ರ ಸರ್ಕಾರವಾಗಿರುವಲ್ಲಿ, ಕೇಂದ್ರ ಸರ್ಕಾರಕ್ಕೆ ಅಧೀನವಾದ ಅಧಿಕಾರಿ ಅಥವಾ ಪ್ರಾಧಿಕಾರಿ ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರಕ್ಕೆ ಅಧೀನವಾದಂಥ ಅಧಿಕಾರಿ ಅಥವಾ ಪ್ರಾಧಿಕಾರಿ, ಮತ್ತು

(ಬಿ) ಸಮುಚಿತ ಸರ್ಕಾರವು ರಾಜ್ಯ ಸರ್ಕಾರವಾಗಿರುವಲ್ಲಿ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸ ಬಹುದಾದಂಥ ರಾಜ್ಯ ಸರ್ಕಾರಕ್ಕೆ ಅಧೀನವಾದಂಥ ಅಧಿಕಾರಿ ಅಥವಾ ಪ್ರಾಧಿಕಾರಿ

- ಸಹ ಚಲಾಯಿಸಬಹುದೆಂದು ನಿರ್ದೇಶಿಸಬಹುದು.

**40. ಅನುಸೂಚಿಗಳನ್ನು ತಿದ್ದುಪಡಿ ಮಾಡಲು ಅಧಿಕಾರ.-** (1) ಸಮುಚಿತ ಸರ್ಕಾರವು, ಯಾವುದೇ ಕೈಗಾರಿಕೆಯನ್ನು ಮೊದಲನೇ ಅನುಸೂಚಿಗೆ ಸೇರಿಸುವುದು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ವಿಹಿತ ಅಥವಾ ಅವಶ್ಯವೆಂದು ಅಭಿಪ್ರಾಯಪಟ್ಟರೆ, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಹಾಗೆ ಮಾಡಬಹುದು ಮತ್ತು ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸಿದ ಮೇಲೆ ಮೊದಲನೆಯ ಅನುಸೂಚಿಯನ್ನು ತದನುಸಾರ ತಿದ್ದುಪಡಿ ಮಾಡಲಾಗಿದೆಯೆಂದು ಭಾವಿಸತಕ್ಕುದು.

(2) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಎರಡನೇ ಅನುಸೂಚಿಗೆ ಅಥವಾ ಮೂರನೇ ಅನುಸೂಚಿಗೆ ಸೇರಿಸಬಹುದು ಅಥವಾ ಅದನ್ನು ಬದಲಾಯಿಸಬಹುದು ಅಥವಾ ತಿದ್ದುಪಡಿ ಮಾಡಬಹುದು ಮತ್ತು ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸಿದ ಮೇಲೆ, ಸಂದರ್ಭಾನುಸಾರ, ಎರಡನೇ ಅನುಸೂಚಿ ಅಥವಾ ಮೂರನೇ ಅನುಸೂಚಿಯನ್ನು, ತದನುಸಾರ ತಿದ್ದುಪಡಿ ಮಾಡಲಾಗಿದೆ ಎಂದು ಭಾವಿಸತಕ್ಕುದು.

(3) ಅಂಥ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ಹೊರಡಿಸಿದ ತರುವಾಯ, ಆದಷ್ಟು ಬೇಗನೆ ಆ ಅಧಿಸೂಚನೆಯನ್ನು ರಾಜ್ಯ ಸರ್ಕಾರವು ಹೊರಡಿಸಿದ್ದರೆ, ರಾಜ್ಯ ವಿಧಾನ ಮಂಡಲದ ಮುಂದೆ ಅಥವಾ ಅಧಿಸೂಚನೆಯನ್ನು, ಕೇಂದ್ರ ಸರ್ಕಾರವು ಹೊರಡಿಸಿದ್ದರೆ, ಸಂಸತ್ತಿನ ಮುಂದೆ ಇಡತಕ್ಕುದು.

## ಮೊದಲನೇ ಅನುಸೂಚಿ

## (2 (ಎನ್) ನೇ (VI) ನೇ ಪ್ರಕರಣ ನೋಡಿರಿ)

2ನೇ ಪ್ರಕರಣದ (ಎನ್) ಖಂಡದ (VI) ನೇ ಉಪ-ಖಂಡದ ಮೇರೆಗೆ ಸಾರ್ವಜನಿಕ ಪ್ರಯೋಜನ ಸೇವೆಗಳೆಂದು ಘೋಷಿಸಬಹುದಾದಂಥ ಕೈಗಾರಿಕೆಗಳು.

1. (ರೈಲ್ವೆಗಳನ್ನು ಹೊರತುಪಡಿಸಿ) ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಭೂಮಾರ್ಗದಿಂದ ಅಥವಾ ಜಲಮಾರ್ಗದಿಂದ ಒಯ್ಯುವ ಸಾರಿಗೆ.
2. ಬ್ಯಾಂಕಿಂಗ್.
3. ಸಿಮೆಂಟು.
4. ಕಲ್ಲಿದ್ದಲು.
5. ಹತ್ತಿ ಬಟ್ಟೆಗಳು.
6. ಖಾದ್ಯ ಪದಾರ್ಥಗಳು.
7. ಕಬ್ಬಿಣ ಮತ್ತು ಉಕ್ಕು.
8. ರಕ್ಷಣಾ ಕಾರ್ಯಸಂಸ್ಥೆಗಳು
9. ಆಸ್ಪತ್ರೆಗಳು.
10. ಅಗ್ನಿಶಾಮಕ ಸೇವೆ.
11. ಭಾರತ ಸರ್ಕಾರದ ಟಂಕ ಶಾಲೆಗಳು.
12. ಇಂಡಿಯಾ ಸೆಕ್ಯೂರಿಟಿ ಪ್ರೆಸ್
13. ತಾಮ್ರದ ಗಣಿ ಕೆಲಸ.
14. ಸೀಸದ ಗಣಿ ಕೆಲಸ.
15. ಸತುವಿನ ಗಣಿ ಕೆಲಸ.
16. ಕಬ್ಬಿಣ ಅದುರಿನ ಗಣಿ ಕೆಲಸ.
17. ಯಾವುದೇ ತೈಲ ಕ್ಷೇತ್ರದಲ್ಲಿ ಸೇವೆ.
18. [* * *]
19. ಯುರೇನಿಯಂ ಕೈಗಾರಿಕೆಯಲ್ಲಿ ಸೇವೆ.
20. ಪೈರೈಟೀಸ್ ಗಣಿ ಕೆಲಸ.
21. ಛಾಪಾ ಕಾಗದ ಕಾರ್ಖಾನೆ, ಹೋಸಂಗಾಬಾದ್.
22. ಬ್ಯಾಂಕ್ ನೋಟ್ ಪ್ರೆಸ್, ದೇವಾಸ್‌ನಲ್ಲಿ ಸೇವೆಗಳು.
23. ಫಾಸ್ಫೋರೈಟ್ ಗಣಿಕೆಲಸ
24. ಮಾಗ್ನೆಸೈಟ್ ಗಣಿ ಕೆಲಸ.

## ಎರಡನೇ ಅನುಸೂಚಿ

## (7ನೇ ಪ್ರಕರಣ ನೋಡಿ)

### ಕಾರ್ಮಿಕ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯಲ್ಲಿ ಬರುವ ವಿಷಯಗಳು

1. ಸ್ಥಾಯಿ ಆದೇಶಗಳ ಮೇರೆಗೆ ನಿಯೋಜಕನು ಹೊರಡಿಸಿದ ಆದೇಶದ ಔಚಿತ್ಯ ಅಥವಾ ಕಾನೂನು ಸಮ್ಮತತೆ;
2. ಸ್ಥಾಯಿ ಆದೇಶದ ಅನ್ವಯ ಮತ್ತು ಅರ್ಥ ವಿವರಣೆ;
3. ತಪ್ಪಾಗಿ ವಜಾಮಾಡಿದ ಕೆಲಸಗಾರರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವುದು ಅಥವಾ ಅವರಿಗೆ ಪರಿಹಾರ ನೀಡಿಕೆ ಇವು ಸೇರಿ, ಕೆಲಸಗಾರರ ಕೆಲಸದಿಂದ ಬಿಡುಗಡೆ ಅಥವಾ ವಜಾ;

4. ಯಾವುದೇ ರೂಢಿಗತ ರಿಯಾಯಿತಿ ಅಥವಾ ವಿಶೇಷಾಧಿಕಾರವನ್ನು ಹಿಂತೆಗೆದುಕೊಳ್ಳುವುದು;

5. ಮುಷ್ಕರ ಅಥವಾ ಬೀಗಮುದ್ರೆಯ ಕಾನೂನು ಬಾಹಿರತೆ ಅಥವಾ ಅನ್ಯ ರೀತಿ;

6. ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳನ್ನು ಹೊರತು ಪಡಿಸಿ ಇತರ ಎಲ್ಲಾ ವಿಷಯಗಳು.

**ಮೂರನೇ ಅನುಸೂಚಿ**

**(7ಎ ಪ್ರಕರಣ ನೋಡಿ)**

**ಕೈಗಾರಿಕಾ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ವಿಷಯಗಳು**

1. ಮಜೂರಿಗಳು, ಸಂದಾಯದ ಅವಧಿ ಮತ್ತು ರೀತಿಯೂ ಸೇರಿ;
2. ಪರಿಹಾರ ಮತ್ತು ಇತರೆ ಭತ್ಯೆಗಳು;
3. ಕೆಲಸದ ವೇಳೆ ಮತ್ತು ವಿಶ್ರಾಂತಿ ಬಿಡುವು;
4. ಮಜೂರಿ ಸಹಿತ ರಜೆ ಮತ್ತು ರಜಾದಿನಗಳು;
5. ಬೋನಸು, ಲಾಭ ಹಂಚುವಿಕೆ, ಭವಿಷ್ಯನಿಧಿ ಮತ್ತು ಉಪದಾನ;
6. ಸ್ಥಾಯಿ ಆದೇಶಗಳಿಗನುಸಾರವಾಗಿ ಹೊರತು ಪಾಳಿಯ ಕೆಲಸ;
7. ಶ್ರೇಣಿಗಳಲ್ಲಿ ವರ್ಗೀಕರಣ;
8. ಶಿಸ್ತು ನಿಯಮಗಳು;
9. ಸುವ್ಯವಸ್ಥೀಕರಣ;
10. ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕುವುದು ಮತ್ತು ಕಾರ್ಯಸಂಸ್ಥೆಯ ಮುಚ್ಚುವಿಕೆ; ಮತ್ತು
11. ನಿಯಮಿಸಬಹುದಾದ ಯಾವುದೇ ಇತರೆ ವಿಷಯ.

**ನಾಲ್ಕನೇ ಅನುಸೂಚಿ**

**(9ಎ ಪ್ರಕರಣ ನೋಡಿ)**

**ಸೇವಾ ಷರತ್ತುಗಳ ಬದಲಾವಣೆಗೆ ಕೊಡಬೇಕಾದ ನೋಟೀಸು**

1. ಮಜೂರಿಗಳು, ಸಂದಾಯದ ಅವಧಿ ಮತ್ತು ರೀತಿಯೂ ಸೇರಿ;
2. ನಿಯೋಜಕನು ಯಾವುದೇ ಭವಿಷ್ಯನಿಧಿಗೆ ಅಥವಾ ನಿವೃತ್ತಿ ವೇತನ ನಿಧಿಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿ ಇರುವ ಯಾವುದೇ ಕಾನೂನಿನ ಮೇರೆಗೆ ಕೆಲಸಗಾರರ ಪ್ರಯೋಜನಕ್ಕಾಗಿ ಸಂದಾಯ ಮಾಡಿದ ಅಥವಾ ಸಂದಾಯ ಮಾಡಬೇಕಾದ ವಂತಿಗೆ;
3. ಪರಿಹಾರದ ಮತ್ತು ಇತರ ಭತ್ಯೆಗಳು;
4. ಕೆಲಸದ ವೇಳೆ ಮತ್ತು ವಿಶ್ರಾಂತಿ ಬಿಡುವು;
5. ಮಜೂರಿ ಸಹಿತ ರಜೆ ಮತ್ತು ರಜಾದಿನಗಳು;
6. ಸ್ಥಾಯಿ ಆದೇಶಗಳಿಗನುಸಾರವಾಗಿ ಅಲ್ಲದೆ ಅನ್ಯಥಾ ಮಾಡುವ ಪಾಳಿ ಕೆಲಸ ಪ್ರಾರಂಭ, ಬದಲಾವಣೆ ಅಥವಾ ನಿಲುಗಡೆ;
7. ಶ್ರೇಣಿಗಳಲ್ಲಿ ವರ್ಗೀಕರಣ;
8. ಯಾವುದೇ ರೂಢಿಗತ ರಿಯಾಯಿತಿ ಅಥವಾ ವಿಶೇಷಾಧಿಕಾರವನ್ನು ಹಿಂತೆಗೆದುಕೊಳ್ಳುವುದು ಅಥವಾ ಬಳಕೆಯ ಬದಲಾವಣೆ;

9. ಶಿಸ್ತಿನ ಹೊಸ ನಿಯಮಗಳ ಜಾರಿ, ಅಥವಾ ಅಸ್ತಿತ್ವದಲ್ಲಿರುವ ನಿಯಮಗಳ ಬದಲಾವಣೆ, ಅವುಗಳನ್ನು ಸ್ಥಾಯಿ ಆದೇಶಗಳಲ್ಲಿ ಉಪಬಂಧಿಸಿರುವಷ್ಟರ ಮಟ್ಟಿಗೆ ಹೊರತು;
10. ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕುವುದಕ್ಕೆ ಕಾರಣವಾಗುವಂಥ ಸ್ಥಾವರ ಅಥವಾ ತಂತ್ರಜ್ಞಾನದ ಸುವ್ಯವಸ್ಥೀಕರಣ, ಮಾನಕೀಕರಣ ಅಥವಾ ಸಂಸ್ಥೆಯ ಸುಧಾರಣೆ;
11. ಯಾವುದೇ ಉದ್ಯೋಗ ಅಥವಾ ಕ್ರಮ ಅಥವಾ ವಿಭಾಗ ಅಥವಾ ಪಾಳಿಯಲ್ಲಿ ನಿಯೋಜಿತರಾದ ಅಥವಾ ನಿಯೋಜಿತರಾಗಬೇಕಾದ ವ್ಯಕ್ತಿಗಳ ಸಂಖ್ಯೆಯಲ್ಲಿ (ನಿಯೋಜಕನ ನಿಯಂತ್ರಣಕ್ಕೆ ಮೀರಿದ ಪರಿಸ್ಥಿತಿಗಳಿಂದ ಉಂಟಾಗಿಲ್ಲದ) (ಸಾಂದರ್ಭಿಕವಲ್ಲದ) ಯಾವುದೇ ಹೆಚ್ಚಳ ಅಥವಾ ಇಳಿತ.

## ಐದನೇ ಅನುಸೂಚಿ

**(2 (ಆರ್‌ಎ) ಪ್ರಕರಣ ನೋಡಿ)**

**ಅನುಚಿತ ಕಾರ್ಮಿಕ ಆಚರಣೆಗಳು**

I. ನಿಯೋಜಕರ ಮತ್ತು ನಿಯೋಜಕರ ಕಾರ್ಮಿಕ ಸಂಘಗಳ ವತಿಯಿಂದ

1. ಕೆಲಸಗಾರರು ಕಾರ್ಮಿಕ ಸಂಘವನ್ನು ಸಂಘಟಿಸುವ, ರಚಿಸುವ, ಅದಕ್ಕೆ ಸೇರುವ ಅಥವಾ ಸಹಾಯ ಮಾಡುವ ಅಥವಾ ಸಾಮೂಹಿಕ ಒಡಂಬಡಿಕೆ ಅಥವಾ ಇತರ ಪರಸ್ಪರ ನೆರವು ಅಥವಾ ರಕ್ಷಣೆಯ ಉದ್ದೇಶಗಳಿಗಾಗಿ ಏಕಾಭಿಪ್ರಾಯದ ಚಟುವಟಿಕೆಗಳಲ್ಲಿ ತೊಡಗುವ ಅವರ ಹಕ್ಕಿನ ಚಲಾವಣೆಯಲ್ಲಿ ಹಸ್ತಕ್ಷೇಪ ಮಾಡುವುದು, ಹಾಗೆ ಮಾಡದಂತೆ ತಡೆಗಟ್ಟುವುದು ಅಥವಾ ಸುಮ್ಮನಿರುವಂತೆ ಬಲಾತ್ಕರಿಸುವುದು, ಎಂದರೆ:-

(ಎ) ಕೆಲಸಗಾರರು ಕಾರ್ಮಿಕ ಸಂಘಕ್ಕೆ ಸೇರಿದಲ್ಲಿ ಅವರನ್ನು ಕೆಲಸದಿಂದ ಬಿಡುಗಡೆ ಮಾಡುವುದಾಗಿ ಅಥವಾ ವಜಾ ಮಾಡುವುದಾಗಿ ಬೆದರಿಸುವುದು;

(ಬಿ) ಕಾರ್ಮಿಕ ಸಂಘವನ್ನು ಸಂಘಟಿಸಿದರೆ, ಬೀಗಮುದ್ರೆ ಅಥವಾ ಮುಚ್ಚುವಿಕೆಯ ಬೆದರಿಕೆ ಹಾಕುವುದು;

(ಸಿ) ಕಾರ್ಮಿಕ ಸಂಘವನ್ನು ಸಂಘಟಿಸುವ ಪ್ರಯತ್ನಗಳನ್ನು ತಡೆಗಟ್ಟುವ ಉದ್ದೇಶದಿಂದ ಕಾರ್ಮಿಕ ಸಂಘವು ಸಂಘಟನೆಯಾಗುತ್ತಿರುವ ನಿರ್ಣಾಯಕ ಅವಧಿಗಳಲ್ಲಿ ಕೆಲಸಗಾರರಿಗೆ ಹೆಚ್ಚಿನ ಮಜೂರಿ ನೀಡುವುದು;

2. ಯಾವುದೇ ಕಾರ್ಮಿಕ ಸಂಘದ ಮೇಲೆ ಅಧಿಕಾರ ನಡೆಸುವುದು, ಅದರಲ್ಲಿ ಹಸ್ತಕ್ಷೇಪ ಮಾಡುವುದು ಅಥವಾ ಅದಕ್ಕೆ ಹಣಕಾಸಿನ ಅಥವಾ ಇತರ ರೀತಿಯ ಬೆಂಬಲ ನೀಡುವುದು, ಎಂದರೆ:-

(ಎ) ನಿಯೋಜಕನು ತನ್ನ ಕೆಲಸಗಾರರ ಕಾರ್ಮಿಕ ಸಂಘವನ್ನು ಸಂಘಟಿಸುವಲ್ಲಿ ಸಕ್ರಿಯ ಆಸಕ್ತಿ ವಹಿಸುವುದು; ಮತ್ತು

(ಬಿ) ನಿಯೋಜಕನು ತನ್ನ ಕೆಲಸಗಾರರನ್ನು ಸಂಘಟಿಸುವ ಹಲವಾರು ಕಾರ್ಮಿಕ ಸಂಘಗಳ ಪೈಕಿ ಯಾವುದಕ್ಕಾದರೂ ಅಂಥ ವೃತ್ತಿ ಸಂಘವು ಮನ್ನಣೆ ಪಡೆದ ವೃತ್ತಿಸಂಘವಾಗಿರದಿದ್ದರೆ ಅದಕ್ಕೆ ಅಥವಾ ಅದರ ಸದಸ್ಯರಿಗೆ ಪಕ್ಷಪಾತ ತೋರಿಸುವುದು ಅಥವಾ ಒಲವು ತೋರಿಸುವುದು.

3. ನಿಯೋಜಕರಿಂದ ಪುರಸ್ಕೃತವಾದ ಕೆಲಸಗಾರರ ಕಾರ್ಮಿಕ ಸಂಘಗಳನ್ನು ಸ್ಥಾಪಿಸುವುದು.

4. ಯಾವನೇ ಕೆಲಸಗಾರನ ಬಗ್ಗೆ ತಾರತಮ್ಯ ತೋರಿಸುವ ಮೂಲಕ ಯಾವುದೇ ಕಾರ್ಮಿಕ ಸಂಘದ ಸದಸ್ಯತ್ವಕ್ಕೆ ಪ್ರೋತ್ಸಾಹಿಸುವುದು ಅಥವಾ ಪ್ರೋತ್ಸಾಹ ನೀಡದಿರುವುದು, ಎಂದರೆ:-

(ಎ) ಯಾರೇ ಕೆಲಸಗಾರನು ಇತರ ಕೆಲಸಗಾರರನ್ನು ಕಾರ್ಮಿಕ ಸಂಘಕ್ಕೆ ಸೇರಲು ಅಥವಾ ಅದನ್ನು ಸಂಘಟಿಸಲು ಆಗ್ರಹಪಡಿಸಿದ್ದಕ್ಕಾಗಿ ಅವನನ್ನು ಕೆಲಸದಿಂದ ತೆಗೆದುಹಾಕುವುದು ಅಥವಾ ದಂಡಿಸುವುದು;

(ಬಿ) ಈ ಅಧಿನಿಯಮದ ಮೇರೆಗೆ ಕಾನೂನು ಬಾಹಿರ ಮುಷ್ಕರವೆಂಬುದಾಗಿ ಪರಿಗಣಿಸಿಲ್ಲದ ಮುಷ್ಕರವಾಗಿರುವ ಯಾವುದೇ ಮುಷ್ಕರದಲ್ಲಿ ಭಾಗವಹಿಸಿದ್ದಕ್ಕಾಗಿ ಕೆಲಸಗಾರನನ್ನು ಕೆಲಸದಿಂದ ತೆಗೆದುಹಾಕುವುದು ಅಥವಾ ವಜಾ ಮಾಡುವುದು;

(ಸಿ) ಕಾರ್ಮಿಕ ಸಂಘದ ಕಾರ್ಯ ಚಟುವಟಿಕೆಗಳ ಕಾರಣ ಕೆಲಸಗಾರರ ಜ್ಯೇಷ್ಠತಾ ಕ್ರಮವನ್ನು ಬದಲಾಯಿಸುವುದು;

(ಡಿ) ಕಾರ್ಮಿಕ ಸಂಘದ ಕಾರ್ಯಚಟುವಟಿಕೆಗಳ ಕಾರಣ ಕೆಲಸಗಾರರನ್ನು ಮೇಲಿನ ಹುದ್ದೆಗೆ ಬಡ್ತಿ ನೀಡಲು ನಿರಾಕರಿಸುವುದು;

(ಇ) ಕೆಲವರು ಕೆಲಸಗಾರರಿಗೆ, ಇತರ ಕೆಲಸಗಾರರಲ್ಲಿ ವೈಮನಸ್ಯ ಉಂಟುಮಾಡುವ ಅಥವಾ ಅವರ ಕಾರ್ಮಿಕ ಸಂಘದ ಸಂಖ್ಯಾ ಬಲವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಅನರ್ಹ ಬಡ್ತಿಗಳನ್ನು ನೀಡುವುದು;

(ಎಫ್) ಕಾರ್ಮಿಕಸಂಘದ ಕಾರ್ಯಚಟುವಟಿಕೆಗಳ ಕಾರಣ ಕಾರ್ಮಿಕ ಸಂಘದ ಪದಾಧಿಕಾರಿಗಳನ್ನು ಅಥವಾ ಸಕ್ರಿಯ ಸದಸ್ಯರನ್ನು ಕೆಲಸದಿಂದ ಬಿಡುಗಡೆ ಮಾಡುವುದು.

5. ಕೆಲಸಗಾರರನ್ನು-

(ಎ) ಪೀಡಿಸುವ ಮೂಲಕ;

(ಬಿ) ಸದ್ಭಾವನೆಯಿಂದಲ್ಲದೆ ನಿಯೋಜಕರ ಹಕ್ಕುಗಳನ್ನು ಮೋಸದಿಂದ ಚಲಾಯಿಸುವ ಮೂಲಕ;

(ಸಿ) ಸುಳ್ಳು ಸಾಕ್ಷ್ಯದ ಮೇಲೆ ಅಥವಾ ಸೃಷ್ಟಿಸಿದ ಸಾಕ್ಷ್ಯದ ಮೇಲೆ ಕ್ರಿಮಿನಲ್ ಪ್ರಕರಣದಲ್ಲಿ ಕೆಲಸಗಾರನನ್ನು ಮೋಸದಿಂದ ಸಿಕ್ಕಿಸುವ ಮೂಲಕ;

(ಡಿ) ಸ್ಪಷ್ಟ ಸುಳ್ಳು ಕಾರಣಗಳಿಗಾಗಿ;

(ಇ) ಅನುಮತಿಯಿಲ್ಲದ ಗೈರುಹಾಜರಿ ಎಂಬ ಸುಳ್ಳು ಅಥವಾ ಸೃಷ್ಟಿಸಿದ ಆಪಾದನೆಗಳ ಮೇಲೆ;

(ಎಫ್) ಆಂತರಿಕ ವಿಚಾರಣೆ ನಡೆಸುವಲ್ಲಿ ಸಹಜ ನ್ಯಾಯದ ತತ್ವಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಅಥವಾ ಅನುಚಿತ ಅವಸರದಿಂದ;

(ಜಿ) ಕೆಲಸಗಾರನ ನಿರ್ದಿಷ್ಟ ದುರ್ವರ್ತನೆಯ ಸ್ವರೂಪ ಅಥವಾ ಹಿಂದಿನ ದಾಖಲೆ ಅಥವಾ ಸೇವೆಯನ್ನು ಗಣನೆಗೆ ತೆಗೆದುಕೊಳ್ಳದೆ ಆ ಮೂಲಕ ವಿಪರೀತ ದಂಡನೆಗೆ ಎಡೆಯಾಗುವಂತೆ ಅಲ್ಪ ಅಥವಾ ತಾಂತ್ರಿಕ ಸ್ವರೂಪದ ದುರ್ವರ್ತನೆಗಾಗಿ,

-ಕೆಲಸದಿಂದ ಬಿಡುಗಡೆ ಮಾಡುವುದು ಅಥವಾ ವಜಾ ಮಾಡುವುದು.

6. ಕೆಲಸಗಾರರು ಮಾಡುತ್ತಿರುವ ನಿಯತ ಸ್ವರೂಪದ ಕೆಲಸವನ್ನು ರದ್ದುಗೊಳಿಸುವುದು ಮತ್ತು ಮುಷ್ಕರವನ್ನು ವಿಫಲಗೊಳಿಸುವ ಕ್ರಮವಾಗಿ ಅಂಥ ಕೆಲಸವನ್ನು ಕಂಟ್ರಾಕ್ಟರುಗಳಿಗೆ ಕೊಡುವುದು.

7. ವ್ಯವಸ್ಥಾಪನಾ ನೀತಿಯನ್ನು ಅನುಸರಿಸುವ ಸೋಗಿನಲ್ಲಿ ಕೆಲಸಗಾರನನ್ನು ದುರ್ಭಾವನೆಯಿಂದ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಾಯಿಸುವುದು.

8. ಕಾನೂನು ಸಮ್ಮತ ಮುಷ್ಕರದ ಮೇಲಿರುವ ಕೆಲಸಗಾರರಿಗೆ ಪ್ರತ್ಯೇಕವಾಗಿ, ಕೆಲಸವನ್ನು ಮತ್ತೆ ಪ್ರಾರಂಭಿಸಲು ಅವರಿಗೆ ಅನುಮತಿ ಕೊಡುವುದಕ್ಕೆ ಪೂರ್ವ ಷರತ್ತಾಗಿ ಉತ್ತಮ ನಡತೆಯ ಬಂಧಪತ್ರಕ್ಕೆ ಸಹಿ ಹಾಕುವಂತೆ ಒತ್ತಾಯಿಸುವುದು.

9. ಅರ್ಹತೆಯನ್ನು ನಿರ್ಲಕ್ಷಿಸಿ ಕೆಲಸಗಾರರ ಒಂದು ಗುಂಪಿಗೆ ಒಲವು ಅಥವಾ ಪಕ್ಷಪಾತ ತೋರುವುದು.

10. ಕೆಲಸಗಾರರನ್ನು ಖಾಯಂ ಕೆಲಸಗಾರರ ಸ್ಥಾನಮಾನ ಅಥವಾ ವಿಶೇಷಾಧಿಕಾರಗಳಿಂದ ವಂಚಿತರನ್ನಾಗಿ ಮಾಡುವ ದೃಷ್ಟಿಯಿಂದ ಅವರನ್ನು ಬದಲಿಗಳು, ಸಾಂದರ್ಭಿಕರು ಅಥವಾ ತಾತ್ಕಾಲಿಕರೆಂದು ನಿಯೋಜಿಸುವುದು ಮತ್ತು ಅವರನ್ನು ಅನೇಕ ವರ್ಷಗಳವರೆಗೆ ಮುಂದುವರಿಸುವುದು.

11. ಯಾವುದೇ ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದ ಯಾವುದೇ ವಿಚಾರಣೆ ಅಥವಾ ವ್ಯವಹರಣೆಯಲ್ಲಿ ನಿಯೋಜಕನ ವಿರುದ್ಧ ಆರೋಪಗಳನ್ನು ಸಲ್ಲಿಸುವುದಕ್ಕಾಗಿ ಅಥವಾ ಸಾಕ್ಷ್ಯವನ್ನು ಕೊಡುವುದಕ್ಕಾಗಿ ಯಾವನೇ ಕೆಲಸಗಾರನನ್ನು ಕೆಲಸದಿಂದ ಬಿಡುಗಡೆ ಮಾಡುವುದು ಅಥವಾ ಅವನ ವಿರುದ್ಧ ತಾರತಮ್ಯ ತೋರುವುದು.

12. ಕಾನೂನು ಬಾಹಿರವಾಗಿಲ್ಲದ ಮುಷ್ಕರದ ಅವಧಿಯಲ್ಲಿ ಕೆಲಸಗಾರರ ನೇಮಕಾತಿ ಮಾಡುವುದು.

13. ಐತೀರ್ಪು, ಇತ್ಯರ್ಥ ಅಥವಾ ಒಪ್ಪಂದವನ್ನು ಜಾರಿಗೊಳಿಸಲು ತಪ್ಪುವುದು.

14. ಬಲಪ್ರಯೋಗ ಅಥವಾ ಹಿಂಸಾಚಾರ ಕೃತ್ಯಗಳಲ್ಲಿ ತೊಡಗುವುದು.

15. ಮನ್ನಣೆ ಪಡೆದ ಕಾರ್ಮಿಕಸಂಘಗಳೊಂದಿಗೆ ಸದ್ಭಾವನೆಯಿಂದ ಸಾಮೂಹಿಕ ವ್ಯಾಪಾರ ನಡೆಸಲು ನಿರಾಕರಿಸುವುದು.

16. ಈ ಅಧಿನಿಯಮದ ಮೇರೆಗೆ ಕಾನೂನು ಬಾಹಿರವೆಂದು ಭಾವಿಸಲಾದ ಬೀಗ ಮುದ್ರೆಯನ್ನು ಪ್ರಸ್ತಾವಿಸುವುದು ಅಥವಾ ಅದನ್ನು ಮುಂದುವರಿಸುವುದು.

## II. ಕೆಲಸಗಾರರು ಮತ್ತು ಕೆಲಸಗಾರರ ಕಾರ್ಮಿಕ ಸಂಘಗಳ ವತಿಯಿಂದ

1. ಈ ಅಧಿನಿಯಮದ ಮೇರೆಗೆ ಕಾನೂನು ಬಾಹಿರವೆಂದು ಭಾವಿಸಲಾದ ಯಾವುದೇ ಮುಷ್ಕರಕ್ಕಾಗಿ ಸಲಹೆ ನೀಡುವುದು ಅಥವಾ ಸಕ್ರಿಯವಾಗಿ ಬೆಂಬಲ ನೀಡುವುದು ಅಥವಾ ಪ್ರೇರೇಪಿಸುವುದು.

2. ಕೆಲಸಗಾರರನ್ನು, ಸ್ವಯಂ ಸಂಘಟನೆಯ ಅಥವಾ ಕಾರ್ಮಿಕ ಸಂಘಕ್ಕೆ ಸೇರುವ ಅವರ ಹಕ್ಕುಗಳನ್ನು ಚಲಾಯಿಸುವಂತೆ ಅಥವಾ ಯಾವುದೇ ಕಾರ್ಮಿಕ ಸಂಘಕ್ಕೆ ಸೇರದಂತೆ ಬಲಾತ್ಕರಿಸುವುದು, ಎಂದರೆ–

(ಎ) ಮುಷ್ಕರ ಮಾಡದಿರುವ ಕೆಲಸಗಾರರು ಕೆಲಸದ ಸ್ಥಳಗಳಿಗೆ ಪ್ರವೇಶಿಸದಂತೆ ಅವರನ್ನು ದೈಹಿಕವಾಗಿ ತಡೆಯುವಂಥ ರೀತಿಯಲ್ಲಿ ಕಾರ್ಮಿಕ ಸಂಘದ ಅಥವಾ ಅದರ ಸದಸ್ಯರು ತಡೆಯುವುದು;

(ಬಿ) ಮುಷ್ಕರಕ್ಕೆ ಸಂಬಂಧಿಸಿದಂತೆ ಮುಷ್ಕರ ಮಾಡದಿರುವ ಕೆಲಸಗಾರರ ವಿರುದ್ಧ ಅಥವಾ ವ್ಯವಸ್ಥಾಪಕ ಸಿಬ್ಬಂದಿಯ ವಿರುದ್ಧ ಬಲಪ್ರಯೋಗ ಅಥವಾ ಹಿಂಸಾಚಾರ ಕೃತ್ಯದಲ್ಲಿ ತೊಡಗುವುದು ಅಥವಾ ಭಯೋತ್ಪಾದಕ ಬೆದರಿಕೆಗಳನ್ನು ಹಾಕುವುದು.

3. ಮನ್ನಣೆ ಪಡೆದ ಸಂಘವು ನಿಯೋಜಕನೊಂದಿಗೆ ಸದ್ಭಾವನೆಯಿಂದ ಸಾಮೂಹಿಕ ವ್ಯಾಪಾರ ನಡೆಸಲು ನಿರಾಕರಿಸುವುದು.

4. ವ್ಯಾಪಾರ ನಡೆಸುವ ಪ್ರತಿನಿಧಿಯ ಪ್ರಮಾಣೀಕರಣದ ವಿರುದ್ಧ ಬಲಾತ್ಕಾರದ ಚಟುವಟಿಕೆಗಳಲ್ಲಿ ತೊಡಗುವುದು.

5. ಉದ್ದೇಶಪೂರ್ವಕವಾಗಿ ನಿಧಾನ ಮಾಡುವುದು, ಕೆಲಸದ ವೇಳೆಯ ನಂತರ ಕೆಲಸದ ಆವರಣದಲ್ಲಿ ಸುಮ್ಮನೆ ಕುಳಿತುಕೊಳ್ಳುವುದು ಅಥವಾ ವ್ಯವಸ್ಥಾಪಕ ಅಥವಾ ಇತರ ಸಿಬ್ಬಂದಿಯ ಸದಸ್ಯರ ಪೈಕಿ ಯಾವನೇ ಸದಸ್ಯನನ್ನು ಘೆರಾವ್ ಮಾಡುವುದು ಇಂಥ ಬಲಾತ್ಕಾರದ ಕ್ರಮಗಳನ್ನು ನಡೆಸುವುದು, ಅವುಗಳಿಗೆ ಉತ್ತೇಜನ ನೀಡುವುದು ಅಥವಾ ಪ್ರೇರೇಪಿಸುವುದು.

6. ನಿಯೋಜಕರ ಅಥವಾ ವ್ಯವಸ್ಥಾಪಕ ಸಿಬ್ಬಂದಿ ಸದಸ್ಯರ ನಿವಾಸಗಳ ಮುಂದೆ ಪ್ರದರ್ಶನ ನಡೆಸುವುದು.

7. ಕೈಗಾರಿಕೆಗೆ ಸಂಬಂಧಿಸಿದ ನಿಯೋಜಕನ ಸ್ವತ್ತನ್ನು ಉದ್ದೇಶಪೂರ್ವಕವಾಗಿ ಹಾನಿಗೊಳಿಸುವುದಕ್ಕೆ ಪ್ರಚೋದಿಸುವುದು ಅಥವಾ ಅದರಲ್ಲಿ ತೊಡಗುವುದು.

8. ಯಾವನೇ ಕೆಲಸಗಾರನನ್ನು ಕೆಲಸಕ್ಕೆ ಹಾಜರಾಗದಂತೆ ತಡೆಯುವ ಉದ್ದೇಶದಿಂದ ಅವನ ಮೇಲೆ ಬಲ ಪ್ರಯೋಗದ ಅಥವಾ ಹಿಂಸಾಚಾರದ ಅಥವಾ ಬೆದರಿಕೆ ಹಾಕುವ ಕಾರ್ಯಗಳಲ್ಲಿ ತೊಡಗುವುದು.

* * * * *